




# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


46

ಜುಲೈ 29 ಮಂಗಳವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 103 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4


## ಮೈಸೂರಲ್ಲಿ ಡ್ರಗ್ಸ್ ಮಾಫಿಯಾ ಕಾರ್ಯಾಚರಣೆ

# ಅಂತೂ ಫೀಲ್ಡ್‌ಗಿಳಿದ ಪೊಲೀಸರು!

## ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಏಕಕಾಲಕ್ಕೆ ಹಲವೆಡೆ ದಾಳಿ; ಮುಂದುವರೆದ ತಲಾಶ್

● ಡ್ರಗ್ಸ್ ಮಾರಾಟ ಮಾಡುತ್ತಿದ್ದ ಹಳೆ ಆರೋಪಿಗಳ ತೀವ್ರ ವಿಚಾರಣೆ ● ಮಧ್ಯರಾತ್ರಿವರೆಗೆ ಪಿಜಿ ಹಾಸ್ಟೆಲ್, ಗೋಡೌನ್‌ಗಳ ಪರಿಶೀಲನೆ ● ಮಾದಕ ವಸ್ತು ಸೇವನೆ; 36ಕ್ಕೂ ಹೆಚ್ಚು ಮಂದಿ ವಿರುದ್ಧ ಪ್ರಕರಣ ದಾಖಲು



ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಸೋಮವಾರ ರಾತ್ರಿ ಮಂಡಿ ಮೊಹಲ್ಲಾದ ಪುಲಿಕೇಶಿ ರಸ್ತೆಯಲ್ಲಿ ವಾಹನ ತಪಾಸಣೆ ನಡೆಸಲಾಯಿತು.

ಮೈಸೂರು, ಜು.28(ಬಿಎಲ್‌ಯು, ಎಸ್‌ಬಿಡಿ)– ಮೈಸೂರು ನಗರದಲ್ಲಿ ಡ್ರಗ್ಸ್ ತಯಾರಿಕೆ ತಾಣ ಪತ್ತೆಯಾದ ಹಿನ್ನೆಲೆಯಲ್ಲಿ ಸ್ಥಳೀಯ ಪೊಲೀಸರು ವಿಶೇಷ ಕಾರ್ಯಾಚರಣೆ ಆರಂಭಿಸಿದ್ದಾರೆ.

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸ್ವತಃ ಫೀಲ್ಡ್‌ಗಿಳಿದಿದ್ದು, ಭಾನುವಾರ ಸಂಜೆಯಿಂದಲೇ ಪೊಲೀಸರು ತಲಾಶ್ ನಡೆಸುತ್ತಿದ್ದಾರೆ. ಡ್ರಗ್ಸ್ ಮಾರಾಟ ಮಾಡುತ್ತಿದ್ದ 35 ಹಳೆ ಆರೋಪಿಗಳ ಮನೆ ಮೇಲೆ ಏಕಕಾಲಕ್ಕೆ ದಾಳಿ ನಡೆಸಿ, ಇಂಚಿಂಚು ಜಾಲಾಡಿದ್ದಾರೆ. ಅಲ್ಲದೆ ಗೋಡೌನ್‌ಗಳು, ಕೆಲ ಗ್ಯಾರೇಜ್‌ಗಳು, ಪಿಜಿ ಹಾಸ್ಟೆಲ್‌ಗಳು ಸೇರಿದಂತೆ 59 ಸ್ಥಳಗಳಲ್ಲಿ ಪರಿಶೀಲನೆ ನಡೆಸಿದ್ದಾರೆ. ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ನರಸಿಂಹರಾಜ ಮೊಹಲ್ಲಾ, ನಜರ್‌ಬಾದ್, ಉದಯಗಿರಿ ಸೇರಿದಂತೆ ಹಲವೆಡೆ ಕಾರ್ಯಾಚರಣೆ ನಡೆಸಿ, ಅನುಮಾನಾಸ್ಪದ ಸ್ಥಳಗಳನ್ನು ಪರಿಶೀಲಿಸಿದ್ದಾರೆ. ನಿನ್ನೆಯ ಕಾರ್ಯಾಚರಣೆ ವೇಳೆ ಓರ್ವ ಗಾಂಜಾ ಮಾರಾಟಗಾರ ಹಾಗೂ ಮಾದಕ ವಸ್ತು ಸೇವಿಸಿದ್ದ 26 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಸೋಮವಾರವೂ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಮಂಡಿ ಮೊಹಲ್ಲಾ ಸೇರಿದಂತೆ ವಿವಿಧೆಡೆ ಕಾರ್ಯಾಚರಣೆ ಮುಂದುವರೆಸಲಾಗಿದೆ. ವಾಹನಗಳ ತಪಾಸಣೆ ನಡೆಸಿ, ವಿಚಾರಣೆ ನಡೆಸಲಾಗಿದೆ. ಅಂಗಡಿಗಳು, ಬಾರ್ ಅಂಡ್ ರೆಸ್ಟೋರೆಂಟ್ ಸೇರಿದಂತೆ ಹಲವೆಡೆ ಪರಿಶೀಲನೆ ನಡೆಸಲಾಗಿದೆ. ಬಡಾವಣೆಗಳಲ್ಲಿ ಸಂಚರಿಸಿ, ಮಾದಕ ವಸ್ತು ■6ನೇ ಪುಟಕ್ಕೆ

### ಮಾದಕ ವಸ್ತು ಜಾಲ ಭೇದಿಸಲು 7 ವಿಶೇಷ ತಂಡ

ಮಾದಕ ವಸ್ತು ಮಾರಾಟ ಜಾಲ ಭೇದಿಸಲು ಪೊಲೀಸರ 7 ವಿಶೇಷ ತಂಡ ರಚನೆ ಮಾಡಲಾಗಿದೆ. ಈ ತಂಡ ನಿನ್ನೆ ಮಧ್ಯರಾತ್ರಿವರೆಗೆ ನಿರಂತರ ಕಾರ್ಯಾಚರಣೆ ನಡೆಸಿದೆ. ಇಬ್ಬರು ಡಿಸಿಪಿ, ಎಸಿಪಿಗಳು, ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಈ ವೇಳೆ ಮಾದಕ ವಸ್ತು ಮಾರಾಟದ ಹಳೆ ಆರೋಪಿಗಳ ಮನೆ ಮೇಲೂ ದಾಳಿ ಮಾಡಿ, ಒಂದಷ್ಟು ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಗಾಂಜಾ ಸೇವನೆ ಮಾಡಿದ್ದವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಈ ಕಾರ್ಯಾಚರಣೆ ಇಷ್ಟಕ್ಕೆ ನಿಲ್ಲುವುದಿಲ್ಲ, ಮುಂದುವರೆಯಲಿದೆ.

–ಸೀಮಾ ಲಾಟ್ಕರ್, ಮೈಸೂರು ನಗರ ಪೊಲೀಸ್ ಆಯುಕ್ತರು

## ಮಹಾರಾಷ್ಟ್ರದ ಪೊಲೀಸರು ಬಂದು ಮೈಸೂರು ಡ್ರಗ್ಸ್ ಮಾಫಿಯಾ ಭೇದಿಸ್ತಾರೆ...

# ರಾಜ್ಯದಲ್ಲಿ ಗೃಹ ಇಲಾಖೆ ಇಲ್ಲವೇ ಇಲ್ಲ!

● ವಿಧಾನಸಭಾ ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ ● ನಾಲ್ವಡಿಯವರ ಬಗ್ಗೆ ಯತೀಂದ್ರ ಹೇಳಿಕೆ ಗಮನಿಸಿದರೆ ಡ್ರಗ್ಸ್ ಮಾಫಿಯಾ ಅವರಪ್ಪನ ಕೊಡುಗೆನಾ...!?

ಮೈಸೂರು, ಜು.28(ಎಂಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ ಮೈಸೂರಿನಲ್ಲಿ ಡ್ರಗ್ಸ್ ಮಾಫಿಯಾ ತಲೆ ಎತ್ತಿದೆ. ನಾಲ್ವಡಿಯವರು ಸ್ವಲ್ಪ ಕೊಟ್ಟಿದ್ದಾರೆ. ನಮ್ಮಪ್ಪ ಅದಕ್ಕಿಂತ ಹೆಚ್ಚು ಕೊಟ್ಟಿದ್ದಾರೆ ಎಂದು ಅಪ್ಪನ ಮೇಲಿನ ಪ್ರೀತಿಯಿಂದ ಡಾ.ಯತೀಂದ್ರ ಹೇಳಿದ್ದಾರೆ. ಹಾಗಾದರೆ ಮೈಸೂರಿನಲ್ಲಿ ಡ್ರಗ್ಸ್ ಮಾಫಿಯಾ ಕೊಟ್ಟಿದ್ದು ನಿಮ್ಮ ಅಪ್ಪನ (ಸಿಎಂ ಸಿದ್ದರಾಮಯ್ಯ) ಕೊಡುಗೆನಾ? ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ತೀಕ್ಷ್ಣವಾಗಿ ಪ್ರಶ್ನಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ವಿಪಕ್ಷ ನಾಯಕ ಆರ್. ಅಶೋಕ್ ಮಾತನಾಡಿದರು. ಮಾಜಿ ಸಂಸದ ಪ್ರತಾಪ್‌ಸಿಂಹ, ಮಾಜಿ ಶಾಸಕ ಎಲ್. ನಾಗೇಂದ್ರ, ಶಾಸಕ ಶ್ರೀವತ್ಸ ಇನ್ನಿತರರಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮಹಾರಾಷ್ಟ್ರದ ಪೊಲೀಸರು ಬಂದು ನಮ್ಮ ರಾಜ್ಯದ ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಡ್ರಗ್ಸ್ ಮಾಫಿಯಾ ಮೇಲೆ ರೈಡ್ ಮಾಡಿದ್ದಾರೆ. ಹಾಗಾದರೆ ನಮ್ಮ ಸರ್ಕಾರ ಏನು ಮಾಡುತ್ತಿದೆ. ಕಾಂಗ್ರೆಸ್ ಸರ್ಕಾರದಲ್ಲಿ ಗೃಹ ಇಲಾಖೆಯ ಕೈ ಕಟ್ಟಿ ಹಾಕಿದ್ದಾರೆ. ಕರ್ನಾಟಕದಲ್ಲಿ ಗೃಹ ಇಲಾಖೆ ಇಲ್ಲವೇ ಇಲ್ಲ ಎಂದು ಸರ್ಕಾರ ಅಂದುಕೊಂಡಿದೆ. ರಾಜ್ಯ ಸರ್ಕಾರ ಈ ■6ನೇ ಪುಟಕ್ಕೆ

## ಇದ್ದಕ್ಕಿದ್ದಂತೆ ಮುಚ್ಚಿದ ಮಡಿಕೇರಿ ಕೋಟೆಯ ಮಹಾದ್ವಾರದ ಬಾಗಿಲುಗಳು

# ಜನತೆಯಲ್ಲಿ ಆತಂಕದ ನುಡಿ 'ಅಯ್ಯೋ ಏನು ಕಾದಿದೆಯೋ!'

ಜೆಸಿಬಿ ತರಿಸಿ ಬಾಗಿಲುಗಳ ತೆರೆಸಿದ ನಗರಸಭೆ ಅಧಿಕಾರಿಗಳು



ಜೆಸಿಬಿಯಿಂದ ಕೋಟೆ ಬಾಗಿಲು ತೆರೆಯುತ್ತಿರುವುದು.

ಮಡಿಕೇರಿ, ಜು.28– 17ನೇ ಶತಮಾನದಿಂದ ತೆರೆದೇ ಇರುತ್ತಿದ್ದ ಐತಿಹಾಸಿಕ ಮಡಿಕೇರಿ ಕೋಟೆಯ ಬೃಹತ್ ಬಾಗಿಲುಗಳು ಹಠಾತ್ತನೆ ತಾನಾಗಿಯೇ ಮುಚ್ಚಿಕೊಂಡ ಅಚ್ಚರಿ ಘಟನೆ ನಡೆದಿದ್ದು, ಬಹುಶಃ ಭಾನುವಾರ ರಾತ್ರಿಯ ವೇಳೆ ಈ ಬಾಗಿಲುಗಳು ಮುಚ್ಚಿಕೊಂಡಿರಬಹುದು. ಆದರೆ ಇಂದು (ಸೋಮವಾರ) ಬೆಳಗ್ಗೆ ಕೋಟೆ ಗಣಪತಿ ದೇವಸ್ಥಾನಕ್ಕೆ ಹೋದ ಭಕ್ತಾದಿಗಳಿಗೆ ಕೋಟೆ ಬಾಗಿಲು ಮುಚ್ಚಿರುವುದು ಕಂಡುಬಂದಿದೆ. ಇದನ್ನು ಕಂಡವರೇ ಅಯ್ಯೋ... ಏನು ಕಾದಿದೆಯಪ್ಪ ಎಂದು ಹೌಹಾರಿದ್ದಾರೆ.

17ನೇ ಶತಮಾನದ ಉತ್ತರಾರ್ಧದಲ್ಲಿ ಮಹಾರಾಜ ಮುತ್ತುರಾಜರು ನಿರ್ಮಿಸಿದ್ದ ಮಡಿಕೇರಿ ಕೋಟೆಯ ಹೆಬ್ಬಾಗಿಲಿನಲ್ಲಿ ಈ ಎರಡು ಬಾಗಿಲುಗಳಿದ್ದು, ಅವುಗಳನ್ನು ಈವರೆವಿಗೂ ಯಾರೂ ಮುಚ್ಚಿಲ್ಲ. ಮುಚ್ಚುವ ಪ್ರಸಂಗವೂ ಬಂದಿರಲಿಲ್ಲ ಹಾಗಾಗಿ ಅಂದಿನಿಂದ ಇಂದಿನವರೆಗೂ ಈ ಬಾಗಿಲುಗಳು ತೆರೆದೇ ಇದ್ದವು. ಕೆಲವು ಬಾಗಿಲು ಮುಚ್ಚಲು ಪ್ರಯತ್ನಿಸಿ ಅದನ್ನು ಅಲುಗಾಡಿಸಲು ಸಾಧ್ಯವಾಗದಂತಹ ಸನ್ನಿವೇಶಗಳು ಈ ಹಿಂದೆ ನಡೆದಿವೆ.

ಇಂತಹ ಕೋಟೆ ಬಾಗಿಲುಗಳು ಸ್ವಯಂ ಮುಚ್ಚಿಕೊಂಡಿರುವುದನ್ನು ಕಂಡ ಭಕ್ತಾದಿಗಳು ದಂಗಾಗಿದ್ದಾರೆ. ಶತಮಾನಗಳಿಂದ ತೆರೆದಿದ್ದ ಕೋಟೆ ಬಾಗಿಲುಗಳು ಕೊಡಗಿನಲ್ಲಿ ಭೂ ಕುಸಿತದಂತಹ ಪ್ರಕೃತಿ ವಿಕೋಪ ಸಂದರ್ಭದಲ್ಲೂ ತೆರೆದೇ ಇತ್ತು. ಇದೀಗ ಹಠಾತ್ತನೇ ತಾನಾಗಿಯೇ ಈ ಬಾಗಿಲುಗಳು ■6ನೇ ಪುಟಕ್ಕೆ

## ಬೆಂಗಳೂರು ಕಾಲ್ತುಳಿತ ದುರಂತ

# ಬಿ. ದಯಾನಂದ ಸೇರಿ ಐವರು ಪೊಲೀಸ್ ಅಧಿಕಾರಿಗಳ ಅಮಾನತು ವಾಪಸ್

ಬೆಂಗಳೂರು, ಜು.28– ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಜೂ.4ರಂದು ಸಂಭವಿಸಿದ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಕರ್ತವ್ಯ ಲೋಪ ಎಸಗಿದ ಆರೋಪದಡಿ ಪೊಲೀಸ್ ಕಮಿಷನರ್ ಬಿ.ದಯಾನಂದ, ಹೆಚ್ಚುವರಿ ಪೊಲೀಸ್ ಕಮಿಷನರ್ ವಿಕಾಸ್ ಕುಮಾರ್ ವಿಕಾಸ್, ಕೇಂದ್ರ ವಿಭಾಗದ ಡಿಸಿಪಿ ಶೇಖರ್, ಎಸಿಪಿ ಸಿ. ಬಾಲಕೃಷ್ಣ, ಇನ್‌ಸ್ಪೆಕ್ಟರ್ ಎ.ಕೆ. ಗಿರೀಶ್ ಅವರನ್ನು ಅಮಾನತುಗೊಳಿಸಿ ಹೊರಡಿಸಿದ್ದ ಆದೇಶವನ್ನು ರಾಜ್ಯ ಸರ್ಕಾರ ಹಿಂಪಡೆದಿದೆ.



ಬಿ.ದಯಾನಂದ

ಈ ಎಲ್ಲರ ಮೇಲೆ ನಿಯಮ ಪ್ರಕಾರ ಶಿಸ್ತುಕ್ರಮ ಕೈಗೊಳ್ಳುವುದನ್ನು ಬಾಕಿಯಿರಿಸಿ, ಕರ್ತವ್ಯಕ್ಕೆ ಮರಳಿ ನೇಮಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ತನಿಖೆಗೆ ರಚಿಸಿದ್ದ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ್ ನೇತೃತ್ವದ ಮ್ಯಾಜಿಸ್ಟ್ರಿಯಲ್ ತನಿಖಾ ತಂಡ ಮತ್ತು ಹೈಕೋರ್ಟ್ ■6ನೇ ಪುಟಕ್ಕೆ

## ಹಣ ಡಬ್ಲಿಂಗ್ ದಂಧೆ ಪ್ರಕರಣದಲ್ಲಿ ಎಂಟ್ರಿ ಕೊಟ್ಟ ರಿಯಲ್ ಪೊಲೀಸರು!

# ಚಾಮರಾಜನಗರದ ಸೆನ್ ವಿಭಾಗದ ಎಸ್‌ಐ ಸೇರಿ ನಾಲ್ವರು ಅಮಾನತು



ಅಯ್ಯನ ಗೌಡ



ಮೋಹನ್



ಬಸವಣ್ಣ



ಮಹೇಶ

ಚಾಮರಾಜನಗರ, ಜು. 28– ಬಹು ವರ್ಷಗಳಿಂದ ಹಣವನ್ನು ಡಬ್ಲಿಂಗ್ ಮಾಡಿಕೊಡುತ್ತೇವೆ ಎಂದು ಶ್ರೀಮಂತರ ನಂಬಿಸಿ, ಅವರನ್ನು ಅಜ್ಞಾತ ಸ್ಥಳಕ್ಕೆ ಕರೆಸಿಕೊಂಡು ಹಠಾತ್ತನೇ ಪೊಲೀಸರು ದಾಳಿ ಮಾಡಿದಂತೆ ಮಾಡಿ ಅವರ ಬಳಿ ಇರುವ ಹಣವನ್ನು ಕಿತ್ತುಕೊಳ್ಳುವ ದಂಧೆ ನಿರಂತರವಾಗಿ ನಡೆದುಕೊಂಡು ಬಂದಿದೆ.

ಇಂತಹ ಪ್ರಕರಣಗಳಲ್ಲಿ ದಂಧೆಕೋರರು ತಮ್ಮ ತಂಡದ ಕೆಲವರಿಗೆ ಪೊಲೀಸ್ ಸಮವಸ್ತ್ರ ತೊಡಿಸಿ, ದಾಳಿ ಮಾಡಿಸುವ ಮೂಲಕ ಹಣ ದೋಚುತ್ತಾರೆ. ಬಂದಂತಹ ವ್ಯಕ್ತಿಯೂ ಕೂಡ ಹಣ ಡಬ್ಲಿಂಗ್ ಕಾನೂನು ಬಾಹಿರ ಕೆಲಸಕ್ಕಾಗಿ ಬಂದಿದ್ದರಿಂದ ಪೊಲೀಸರಿಗೆ ದೂರನ್ನು ಕೊಡುವುದಿಲ್ಲ.

ಆದರೆ, ಚಾಮರಾಜನಗರದಲ್ಲಿ ದಂಧೆಕೋರರು ತಮ್ಮ ಕೃತ್ಯಕ್ಕೆ ಅಸಲಿ ಪೊಲೀಸರನ್ನೇ ಬಳಸಿಕೊಂಡಿದ್ದಾರೆ. ಅಪರಾಧಿಗಳ ಹಿಡಿಯಬೇಕಾದ ಪೊಲೀಸರೇ ಅಪರಾಧವೆಸಗಿ ತಲೆಮರೆಸಿಕೊಂಡಿದ್ದಾರೆ. ಆದರೆ ಚಾಮರಾಜನಗರ ಜಿಲ್ಲಾ ಎಸ್ಪಿ ಡಾ. ಬಿ.ಟಿ. ಕವಿತಾ ಅವರು ಸಬ್ ಇನ್‌ಸ್ಪೆಕ್ಟರ್ ಸೇರಿದಂತೆ ನಾಲ್ವರು ಪೊಲೀಸರನ್ನು ಅಮಾನತುಪಡಿಸಿದ್ದಾರೆ. ಅಲ್ಲದೇ, ಅವರ ಬಂಧನಕ್ಕಾಗಿ ಪೊಲೀಸರು ಶೋಧನೆ ನಡೆಸಿದ್ದಾರೆ. ಚಾಮರಾಜನಗರ ಸೆನ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಅಯ್ಯನಗೌಡ, ಚಾಮರಾಜನಗರ ಪಟ್ಟಣ ಠಾಣೆಯ ಕಾನ್‌ಸ್ಟೇಬಲ್‌ಗಳಾದ ಮೋಹನ್, ಬಸವಣ್ಣ ಮತ್ತು ಮಹೇಶ ಅಮಾನತಿಗೊಳಗಾದವರು.

**ವಿವರ:** ತಮಿಳುನಾಡಿನ ಅವಿನಾಶಿ ನಗರಕ್ಕೆ ಸೇರಿದ ಗಾರ್ಮೆಂಟ್ಸ್ ಉದ್ಯಮಿ ಸಚ್ಚಿದಾನಂದ ಎಂಬುವರಿಗೆ ಪರಿಚಯವಾದ ಚಾಮರಾಜನಗರದ ಅನ್ಸಾರಿ ಎಂಬಾತ ಹಣವನ್ನು ಡಬ್ಲಿಂಗ್ ಮಾಡಿಕೊಡುವುದಾಗಿ ನಂಬಿಸಿದ್ದಾನೆ. ಆತ ಹೇಳಿದಂತೆ ಸಚ್ಚಿದಾನಂದ ಅವರು ಮೂರು ಲಕ್ಷ ರೂ.ಗಳೊಂದಿಗೆ ಅನ್ಸಾರಿ ಹೇಳಿದ್ದ ಹೋಟೆಲ್‌ಗೆ ಬಂದು ವಾಸ್ತವ್ಯ ಹೂಡಿದ್ದಾರೆ. ಆ ಸಂದರ್ಭದಲ್ಲಿ ಹಠಾತ್ತನೆ ಪೊಲೀಸ್ ಸಮವಸ್ತ್ರ ಧರಿಸಿದ್ದ ವ್ಯಕ್ತಿಯೋರ್ವ ಇತರ ನಾಲ್ವರೊಂದಿಗೆ ಹೋಟೆಲ್‌ನ ರೂಂಗೆ ನುಗ್ಗಿ, ನೀವು ಕಾನೂನುಬಾಹಿರ ಕೆಲಸಕ್ಕಾಗಿ ಬಂದಿದ್ದೀರಿ ಎಂದು ಹೇಳಿದ್ದಲ್ಲದೇ, ಅವರ ಬಳಿ ಇದ್ದ ಮೂರು ■6ನೇ ಪುಟಕ್ಕೆ

# ಎಂಡಿಎ ರಚನೆ ಬಳಿಕ ಮೊದಲ ಬಾರಿಗೆ ನಿವೇಶನ ಹರಾಜು

250 ಕೋಟಿ ಮೌಲ್ಯದ 200 ನಿವೇಶನಗಳ ಹರಾಜು ಪ್ರಕ್ರಿಯೆ ಆರಂಭ

ಮೈಸೂರು, ಜು.28(ಬಿಎಲ್‌ಯು)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಹೆಸರು ಬದಲಿಸಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಎಂದು ಮರು ನಾಮಕರಣ ಮಾಡಿದ ನಂತರ ಇದೇ ಮೊದಲ ಬಾರಿಗೆ 250 ಕೋಟಿ ರೂಪಾಯಿ ಮೌಲ್ಯದ ಮೂಲೆ ಹಾಗೂ ಮಧ್ಯಂತರ ನಿವೇಶನಗಳನ್ನು ಹರಾಜು ಹಾಕಲಾಗುತ್ತಿದೆ.



ರಕ್ಷಿತ್

ಮೈಸೂರಿನ ಶ್ರೀರಾಂಪುರ 3 ನೇ ಹಂತ, ವಿಜಯನಗರ 2, 3 ಮತ್ತು 4 ನೇ ಹಂತ, ಹೆಬ್ಬಾಳು 1 ಮತ್ತು 3 ನೇ ಹಂತ, ದೇವನೂರು ಬಡಾವಣೆಯ 3 ನೇ ಹಂತ, ಕೆಸರೆ 3 ನೇ ಹಂತ, ದಟ್ಟಗಳ್ಳಿ ಹಾಗೂ ಸಾತಗಳ್ಳಿಯ ಮೂಲೆ ಹಾಗೂ ಮಧ್ಯಂತರ ನಿವೇಶನಗಳನ್ನು ಇ ಹರಾಜು ಹಾಕಲಾಗುತ್ತಿದೆ. ಈ ಸಂಬಂಧ ಪತ್ರಿಕಾ ಪ್ರಕಟಣೆ ಕೂಡ ನೀಡಲಾಗಿದೆ. ಈ ಸಂಬಂಧ ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನಿಗೆ ಮಾಹಿತಿ ■6ನೇ ಪುಟಕ್ಕೆ








ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕಾಕನಕೋಟೆ ಸಫಾರಿ ವಲಯದಲ್ಲಿ ಹುಲಿಯೊಂದು ಕೆರೆಯಲ್ಲಿ ವಿರಮಿಸುತ್ತಿರುವುದು. /ಚಿತ್ರ: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್

# ಇಂದು ಹುಲಿ ದಿನ

■ದೇಶದ ಹುಲಿ ಸಂರಕ್ಷಿತ ಪ್ರದೇಶಗಳನ್ನು ಪ್ಲಾಸ್ಟಿಕ್ ಮುಕ್ತಗೊಳಿಸಲು ಪಣ ■ಹುಲಿ ದಿನದ ಸ್ಮರಣಾರ್ಥ ಎಲ್ಲಾ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಾವಿರಾರು ಗಿಡ ನೆಡುವ ಕಾರ್ಯಕ್ರಮ

● ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಜು.28– ಅಂತರರಾಷ್ಟ್ರೀಯ ಹುಲಿ ದಿನ ಕಾರ್ಯಕ್ರಮ ನಾಳೆ(ಜು.29) ಬೆಳಗ್ಗೆ ನವದೆಹಲಿಯಲ್ಲಿ ಜರುಗಲಿದ್ದು, ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವ ಭೂಪೇಂದರ್ ಯಾದವ್ ಭಾಗಿಯಾಗಲಿದ್ದಾರೆ. ರಾಷ್ಟ್ರೀಯ ಹುಲಿ ಪ್ರಾಧಿಕಾರದ ವತಿಯಿಂದ ನಡೆಯುವ ಈ ಕಾರ್ಯಕ್ರಮದಲ್ಲಿ ದೇಶದ 57 ಹುಲಿ ಸಂರಕ್ಷಿತ ಪ್ರದೇಶದ ಸಿಎಫ್, ಡಿಸಿಎಫ್ ವರ್ಚುವಲ್ ಮೂಲಕ ಭಾಗಿಯಾಗಿ, ತಮ್ಮ ಅರಣ್ಯ ವ್ಯಾಪ್ತಿಯಲ್ಲಿ ಹುಲಿ ಸಂತತಿ ಸಂರಕ್ಷಣೆಗೆ ಕೈಗೊಂಡಿರುವ ಕ್ರಮ ಹಾಗೂ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ ಎದುರಾಗುವ ಸವಾಲುಗಳ ಬಗ್ಗೆ ಬೆಳಕು ಚೆಲ್ಲಲಿದ್ದಾರೆ.

**ಎರಡು ನಿರ್ಣಯ:** ರಾಷ್ಟ್ರೀಯ ಹುಲಿ ಪ್ರಾಧಿಕಾರ(ಎನ್‌ಟಿಸಿಎ) ಈಗಾಗಲೇ ದೇಶದ ಎಲ್ಲಾ ಹುಲಿ ಸಂರಕ್ಷಿತ ಪ್ರದೇಶಗಳ ಸಿಎಫ್, ಡಿಸಿಎಫ್‌ಗೆ ನಾಳೆಯಿಂದಲೇ ಎಲ್ಲಾ ಹುಲಿ ಸಂರಕ್ಷಿತ ಪ್ರದೇಶಗಳನ್ನೂ ಪ್ಲಾಸ್ಟಿಕ್ ಮುಕ್ತಗೊಳಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸೂಚನೆ ನೀಡಿದೆ ಅಲ್ಲದೆ, ಎಲ್ಲಾ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ ಎರಡು ಸಾವಿರ ಗಿಡ ನೆಡುವ ಕಾರ್ಯಕ್ರಮ ರೂಪಿಸಲಾಗಿದ್ದು, ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಲಾಗಿದೆ.

### ತಾಯಿಯ ಹೆಸರಲ್ಲಿ ಒಂದು ಮರ

ಅಂತರರಾಷ್ಟ್ರೀಯ ಹುಲಿ ದಿನದ ಅಂಗವಾಗಿ ಎಲ್ಲಾ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ 2 ಸಾವಿರ ಗಿಡ ನೆಡಲು ನ್ಯಾಷನಲ್ ಟೈಗರ್ ಕನ್ಸರ್‌ವೇಷನ್ ಅಥಾರಿಟಿ (ಎನ್‌ಟಿಸಿಎ) ಸೂಚನೆ ನೀಡಿದೆ. 'ತಾಯಿಯ ಹೆಸರಲ್ಲಿ ಒಂದು ಮರ' ಶೀರ್ಷಿಕೆಯಲ್ಲಿ ಗಿಡ ನೆಡುವ ಕಾರ್ಯಕ್ರಮ ಆಯೋಜಿಸಲು ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ, ಈ ಬಾರಿ ಎಲ್ಲಾ ಹುಲಿ ಸಂರಕ್ಷಿತ ಪ್ರದೇಶವನ್ನು ಕಟ್ಟುನಿಟ್ಟಾಗಿ ಪ್ಲಾಸ್ಟಿಕ್ ಮುಕ್ತಗೊಳಿಸಲು ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ.

– ಡಾ.ಪಿ.ರಮೇಶ್ ಕುಮಾರ್, ಸಿಎಫ್, ಹುಲಿ ಯೋಜನೆ

ಭಾರತ ಸೇರಿದಂತೆ ವಿಶ್ವದ 13 ರಾಷ್ಟ್ರಗಳಲ್ಲಿ ಹುಲಿ ಸಂತತಿ ಇದ್ದರೂ, ಶೇ.70ರಿಂದ 80ರಷ್ಟು ಹುಲಿಗಳು ಭಾರತದಲ್ಲೇ ಇವೆ. ಹಾಗಾಗಿ ವಿಶ್ವದ ಹುಲಿ ಸಾಮ್ರಾಜ್ಯಕ್ಕೆ ಭಾರತವೇ ದೊರೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಭಾರತದಲ್ಲಿ ಕಳೆದ ಕೆಲ ವರ್ಷಗಳ ಹಿಂದೆ ಅತೀ ಹೆಚ್ಚು ಹುಲಿಗಳನ್ನು ಹೊಂದಿದ್ದ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಿತ್ತು. ಆದರೆ, 2018 ಮತ್ತು 2022ರ ಹುಲಿ ಸಮೀಕ್ಷೆಯಲ್ಲಿ ಕರ್ನಾಟಕವನ್ನು ಹಿಂದಿಕ್ಕಿದ ಮಧ್ಯ ಪ್ರದೇಶ ದೇಶದ ನಂಬರ್ ಒನ್ ಹುಲಿ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದರೆ, ಕರ್ನಾಟಕ ಎರಡನೇ ಸ್ಥಾನದಲ್ಲಿ ಮುಂದುವರೆದಿದೆ.

**ಹುಲಿಗಳ ತಾಣ ಹಳೆ ಮೈಸೂರು:** ಕರ್ನಾಟಕದಲ್ಲಿ 2022ರ ಸಮೀಕ್ಷೆಯ ವರದಿ ಪ್ರಕಾರ 563 ಹುಲಿಗಳಿವೆ. ಅದರಲ್ಲಿ ರಾಜ್ಯದ ಮೊಟ್ಟ ಮೊದಲ ಹುಲಿ ಸಂರಕ್ಷಿತ ಪ್ರದೇಶ ಎಂಬ ಕೀರ್ತಿಗೆ ಪಾತ್ರವಾಗಿರುವ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಿರುವ ಬಂಡೀಪುರ ■6ನೇ ಪುಟಕ್ಕೆ



# ಯತೀಂದ್ರ, ಸಿಎಂ ಸಿದ್ದರಾಮಯ್ಯ ಮನೆಗೆ ನಾಲ್ವಡಿ ಅವರ ಜೀವನ ಚರಿತ್ರೆ ಪುಸ್ತಕವನ್ನು ಪೋಸ್ಟ್ ಮಾಡಿದ ಬಿಜೆಪಿ ಮುಖಂಡರು



ನಾಲ್ವಡಿ ಕೃಷ್ಣರಾಜ ಒಡೆಯರ್ ಜೀವನ ಚರಿತ್ರೆ ಪುಸ್ತಕವನ್ನು ಮೈಸೂರಿನ ಬಿಜೆಪಿ ಮುಖಂಡರು ಸಿದ್ದರಾಮಯ್ಯ, ಯತೀಂದ್ರ ಅವರ ಮನೆಗೆ ಪೋಸ್ಟ್ ಮಾಡಿದರು.

ಮೈಸೂರು, ಜು. 28– ಮೈಸೂರು ಸಂಸ್ಥಾನದ ಅತ್ಯಂತ ಜನಪರ ದೊರೆ ನಾಲ್ವಡಿ ಕೃಷ್ಣರಾಜ ಒಡೆಯರ್ ವಿಚಾರವಾಗಿ ಅಸಂಬದ್ಧ ಹೇಳಿಕೆ ನೀಡಿದ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಹಾಗೂ ಅವರ ತಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮನೆಗೆ ಶ್ರೀ ನಾಲ್ವಡಿ ಅವರ ಜೀವನ ಚರಿತ್ರೆ ಪುಸ್ತಕವನ್ನು ಬಿಜೆಪಿ ಮುಖಂಡ ದಿನೇಶ್ ಗೌಡ ಪೋಸ್ಟ್ ಮಾಡಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರಿಗಿಂತಲೂ ಸಿದ್ದರಾಮಯ್ಯ ಅಭಿವೃದ್ಧಿ ಮಾಡಿದ್ದಾರೆ ಎಂದು ಹೇಳಿಕೆ ನೀಡಿದ ಯತೀಂದ್ರ ಅವರ ಹೇಳಿಕೆ ಖಂಡಿಸಿ, ಪ್ರಧಾನ ಅಂಚೆ ಕಚೇರಿಯಿಂದ ನಾಲ್ವಡಿ ಅವರ ಜೀವನದ ಕೊಡುಗೆಗಳ ಪುಸ್ತಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಪುತ್ರ ಯತೀಂದ್ರ ನಿವಾಸಕ್ಕೆ ಪೋಸ್ಟ್ ಮಾಡುವ ಮೂಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆಗಳನ್ನು ಓದಿಕೊಳ್ಳುವಂತೆ ವ್ಯಂಗ್ಯವಾಡಿದ್ದಾರೆ.

ಇದೇ ವೇಳೆ ಬಿಜೆಪಿ ಮುಖಂಡ ದಿನೇಶ್ ಗೌಡ ಮಾತನಾಡಿ, ಯತೀಂದ್ರ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರು ಹೇಳುವ ಯೋಗ್ಯತೆ ಇದೆಯಾ? ಇನ್ನು ಮುಂದೆ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಪುಸ್ತಕವನ್ನು ಓದಿ ತಿಳಿದುಕೊಂಡು ನಂತರ ಸಾರ್ವಜನಿಕವಾಗಿ ಹೇಳಿಕೆ ನೀಡಬೇಕು. ಮೊದಲು ಮೈಸೂರು ಅಭಿವೃದ್ಧಿಯ ಬಗ್ಗೆ ಮಾತನಾಡಿ, ನಿಮ್ಮ ತಂದೆಯವರ ಅಭಿವೃದ್ಧಿ ಏನು ಎಂದು ನಿಮಗೆ ನೀವೇ ಪ್ರಶ್ನಿಸಿಕೊಳ್ಳಿ. ನಿಮ್ಮ ಪಕ್ಷದ ಒಳ ಜಗಳಗಳ ಬಗ್ಗೆ ಮಾತನಾಡಿ, ಅದನ್ನು ಬಿಟ್ಟು ನಾಲ್ವಡಿ ಕೃಷ್ಣರಾಜ ಒಡೆಯರ ಬಗ್ಗೆ ಮಾತನಾಡುವುದು ನಾಚಿಕೆಗೇಡಿನ ಸಂಗತಿ. ಕೂಡಲೇ ಬಹಿರಂಗವಾಗಿ ಕ್ಷಮೆಯಾಚಿಸಬೇಕೆಂದು ಒತ್ತಾಯಿಸಿದರು. ಯುವ ಮೋರ್ಚಾ ಅಧ್ಯಕ್ಷ ಅರ್ಜುನ್, ಪ್ರಧಾನ ಕಾರ್ಯದರ್ಶಿ ನಿಖಿಲ್, ಮಂಜು, ಪಂಕಜ್, ಶ್ರೀನಿವಾಸ್, ಸೂರ್ಯ, ಪ್ರವೀಣ್ ಶೆಟ್ಟಿ ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

## ಆರ್.ಅಶೋಕ್‌ಗೆ ಸ್ವಾಗತ...



ಸೋಮವಾರ ಮೈಸೂರಿಗೆ ಆಗಮಿಸಿದ ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್ ಅವರನ್ನು ಮಾಜಿ ಉಪಮೇಯರ್, ಮೈಸೂರು ನಗರ ಎಸ್‌ಸಿ ಮೋರ್ಚಾ ಅಧ್ಯಕ್ಷ ವಿ.ಶೈಲೇಂದ್ರ ಆತ್ಮೀಯವಾಗಿ ಸ್ವಾಗತಿಸಿದರು. ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ಬಿಜೆಪಿ ನಗರ ಅಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಪ್ರಧಾನ ಕಾರ್ಯದರ್ಶಿ ಗಿರಿಧರ ಉಪಸ್ಥಿತರಿದ್ದರು.

## ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅಭಿನಂದನೆ



ಮೈಸೂರು ನಮನ ಕಲಾ ಮಂಟಪದಲ್ಲಿ ನಾಗನವ ಕಲಾ ಸಾಹಿತ್ಯ ವೇದಿಕೆ ವತಿಯಿಂದ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.95ಕ್ಕೂ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ವೇದಿಕೆ ಗೌರವಾಧ್ಯಕ್ಷೆ ಎ.ಹೇಮಗಂಗಾ, ಸಮಾಜ ಸೇವಕ ರಘುರಾಂ ವಾಜಪೇಯಿ, ಕನ್ನಡ ಪ್ರಾಧ್ಯಾಪಕಿ ಅಂಬಿಕಾ ಶಿವನಂಜಪ್ಪ, ವೇದಿಕೆ ಅಧ್ಯಕ್ಷ ಹೊಮ್ಮ ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

## ಸ್ವಚ್ಛತೆ, ಗಿಡ ನೆಡುವ ಮೂಲಕ ಶ್ರಮದಾನ




ಮೈಸೂರಿನ ಎಂಐಟಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಘಟಕದ ವತಿಯಿಂದ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯಲ್ಲಿ ಶ್ರಮದಾನ ನಡೆಸಲಾಯಿತು. ಠಾಣೆಯ ಆವರಣದ ಸ್ವಚ್ಛತೆ, ಗಿಡ ನೆಡುವ ಮೂಲಕ ಶ್ರಮದಾನ ಯಶಸ್ವಿಗೊಳಿಸಲಾಯಿತು. ಸ್ವಯಂಸೇವಕರ ಜೊತೆಗೆ ಪೊಲೀಸ್ ಅಧಿಕಾರಿಗಳು, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಕೆ.ಎಂ.ಅಭಿನಂದನ್ ಭಾಗವಹಿಸಿದ್ದರು.

## ನಿಧನ

### ಶ್ರೀಮತಿ ಜಯಮ್ಮ



**ಮೈಸೂರು:** ಮೈಸೂರು ಜಯನಗರದ ನಿವಾಸಿಗಳಾದ ಕೆಂಪಲಿಂಗಪ್ಪನವರ ಜವರೇಗೌಡರ ಮಗ ಚಿಕ್ಕನಿಂಗಯ್ಯನವರ ಧರ್ಮಪತ್ನಿ ಶ್ರೀಮತಿ ಜಯಮ್ಮ (63) ಅವರು ಇಂದು ಸಂಜೆ ತಮ್ಮ ಮನೆಯಲ್ಲಿ ನಿಧನರಾದರು. ಮೃತರು ಪತಿ ಚಿಕ್ಕನಿಂಗಯ್ಯ, ಪುತ್ರಿ ಪೂರ್ಣಿಮಾ, ಪುತ್ರರಾದ ಸುರೇಶ್, ಭಾಸ್ಕರ್ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ಬೆಳಗ್ಗೆ 10.30ಕ್ಕೆ ಕೆಜಿ ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಶ್ರೀಮತಿ ಪುಟ್ನಂಜಮ್ಮ



ಮೈಸೂರಿನ ಉತ್ತನಹಳ್ಳಿ ಗ್ರಾಮದ ನಿವಾಸಿ ಲೇಟ್ ಬೀರಯ್ಯನವರ ಧರ್ಮಪತ್ನಿ ಶ್ರೀಮತಿ ಪುಟ್ನಂಜಮ್ಮ (79) ಅವರು ಸೋಮವಾರ ನಿಧನರಾದರು. ಮೃತರು ಓರ್ವ ಪುತ್ರ, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ನಾಳೆ (ಮಂಗಳವಾರ) ಮಧ್ಯಾಹ್ನ ಉತ್ತನಹಳ್ಳಿ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಪ್ರೊ. ಬಿ.ಜಿ. ಗಂಗಾರಾಂ



**ಮೈಸೂರು:** ಬೆಂಗಳೂರು ಹೋಂಸೈನ್ಸ್ ಕಾಲೇಜು ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಬಿ.ಜಿ.ಗಂಗಾರಾಂ (94) ಅವರು ಇಂದು ರಾತ್ರಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಕಳೆದ 2 ತಿಂಗಳಲ್ಲಿ ಮೈಸೂರಲ್ಲಿ ವಾಡಿಕೆಗಿಂತ ಕಡಿಮೆ ಮಳೆ: ಗಾಳಿ ಆರ್ಭಟ ಜೋರು

ಮೈಸೂರು, ಜು.28(ಎಂಕೆ)– ಮೈಸೂರಿನಲ್ಲಿ ಕಳೆದ ಎರಡು ತಿಂಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆ ಬಿದ್ದಿದ್ದು, ಗಾಳಿ ಆರ್ಭಟ ಜೋರಾಗಿದೆ...!



ಸುಮಂತ್‌ಕುಮಾರ್

ಮೋಡ ಕವಿದ ವಾತಾವರಣದೊಂದಿಗೆ ಕೆಲಕಾಲ ಇಬ್ಬನಿ, ಕೆಲಕಾಲ ಬಿಸಿಲಿದ್ದರೆ, ಜೋರಾಗಿ ಬೀಸುವ ಗಾಳಿ ಮೈ ಕೊರೆಯುವಂತೆ ಮಾಡಿದೆ. ಪ್ರಸಕ್ತ ಸಾಲಿನಲ್ಲಿ ಜನವರಿಯಿಂದ ಇಲ್ಲಿಯವರೆಗೆ (ಜು.28) ವಾಡಿಕೆ ಮಳೆ(411.1 ಮಿಲಿ ಮೀಟರ್)ಗಿಂತ ಶೇ.13ರಷ್ಟು(463.1 ಮಿ.ಮೀ) ಹೆಚ್ಚಾಗಿ ಮಳೆಯಾಗಿದೆ. ಆದರೆ, ಜೂನ್ ತಿಂಗಳಲ್ಲಿ ಶೇ.14ರಷ್ಟು, ಜುಲೈನಲ್ಲಿ ಶೇ.19ರಷ್ಟು ಮಳೆ ಕೊರತೆಯಾಗಿದೆ.

ಕರ್ನಾಟಕದಾದ್ಯಂತ ಮಾನ್ಸೂನ್ ಮಳೆಯ ಅಸಮಾನ ಹಂಚಿಕೆಯಿಂದಾಗಿದೆ ಕರಾವಳಿ ಮತ್ತು ಉತ್ತರಪ್ರದೇಶಗಳಲ್ಲಿ ಭಾರಿ ಮಳೆಯಾಗಿದ್ದರೆ, ಮೈಸೂರು ಸೇರಿದಂತೆ ದಕ್ಷಿಣ ಒಳನಾಡಿನಲ್ಲಿ ದುರ್ಬಲ ಮಾನ್ಸೂನ್ ಗಾಳಿ ಬೀಸುತ್ತಿದೆ. ಹವಾಮಾನ ಬದಲಾವಣೆಯಿಂದಾಗಿ ಮಾನ್ಸೂನ್ ಮಾದರಿಗಳಲ್ಲಿನ ಬದಲಾವಣೆ, ಒಳನಾಡಿನ ಪ್ರದೇಶಗಳಲ್ಲಿ ದುರ್ಬಲ ವಾತಾವರಣದಿಂದಾಗಿ ಮಳೆಯಾಗಿದೆ ಎಂದು ನಾಗನಹಳ್ಳಿ ಕೃಷಿ ಸಂಶೋಧನಾ ಕೇಂದ್ರದ ಹವಾಮಾನ ವಿಭಾಗದ ತಾಂತ್ರಿಕ ಅಧಿಕಾರಿ ಡಾ.ಜಿ.ವಿ. ಸುಮಂತ್‌ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಕಾಸರಗೋಡು ಸೇರಿದಂತೆ ಕರ್ನಾಟಕದ ಕರಾವಳಿ ಜಿಲ್ಲೆಗಳಾದ್ಯಂತ ಸಾಮಾನ್ಯ ಮಳೆಯ ಮುನ್ಸೂಚನೆ ಇದ್ದು, ಗಾಳಿಯ ರಭಸವೂ ಸ್ವಲ್ಪ ಮಟ್ಟಿಗೆ ಕಡಿಮೆಯಾಗಬಹುದು. ಈಗಿನಂತಹ ವಾತಾವರಣ ಆ.2ರ ತನಕ ಮುಂದುವರಿಯುವ ಸಾಧ್ಯತೆಗಳಿವೆ. ನಂತರ ಮೋಡ ಮತ್ತು ಬಿಸಿಲಿನ ವಾತಾವರಣದ ಸೂಚನೆಗಳಿವೆ ಎಂದರು.

ಕೊಡಗು, ಹಾಸನ, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳ ಕರಾವಳಿ ಜಿಲ್ಲೆಗಳಿಗೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಬಿಟ್ಟು ಬಿಟ್ಟು ಬೀಳುವ ಸಾಮಾನ್ಯ ಮಳೆಯ ಮುನ್ಸೂಚನೆ ಇದೆ. ಉಳಿದ ಭಾಗಗಳಲ್ಲಿ ಅಲ್ಲಲ್ಲಿ ತುಂತುರು ಮಳೆಯಾಗಲಿದೆ. ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಹಾವೇರಿ, ಗದಗ ಜಿಲ್ಲೆಗಳ ಅಲ್ಲಲ್ಲಿ ಹಾಗೂ ಮೈಸೂರು ಮತ್ತು ದಕ್ಷಿಣ ಒಳನಾಡಿನ ಬಹುತೇಕ ಭಾಗಗಳಲ್ಲಿ ಮೋಡ ಕವಿದ ವಾತಾವರಣ, ಒಂದೆರಡು ಕಡೆ ತುಂತುರು ಮಳೆಯ ಮುನ್ಸೂಚನೆ ಇದೆ ಎಂದು ಮಾಹಿತಿ ನೀಡಿದರು.

**14 ಕಿ.ಮೀ ವೇಗದ ಗಾಳಿ:** ಮೈಸೂರು ಭಾಗದಲ್ಲಿ ಜೂ.20ರಿಂದ ಇಲ್ಲಿವರೆಗೆ ಮಳೆಗಿಂತ ಗಾಳಿ ಹೆಚ್ಚಾಗಿದ್ದು, ಗಂಟೆಗೆ 14 ಕಿ.ಮೀ. ವೇಗದಲ್ಲಿ ಬೀಸುತ್ತಿದೆ. ಪರಿಣಾಮ ದ್ವಿಚಕ್ರ ವಾಹನ ಸವಾರರು ಪರದಾಡುವಂತಾಗಿದ್ದು, ಅಲ್ಲಲ್ಲಿ ಮರಗಳು ಧರೆಗುರುಳುತ್ತಿವೆ. ರಸ್ತೆಬದಿ ವ್ಯಾಪಾರಿಗಳು ಗಾಳಿಯಿಂದ ಕಂಗಲಾಗಿದ್ದಾರೆ.

## ಗಾಳಿ ರಭಸಕ್ಕೆ ಧರೆಗುರುಳಿದ ಬೃಹತ್ ಮರ: ಆಟೋ ಜಖಂ





ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕ ಎಲ್.ನಾಗೇಂದ್ರ ಭೇಟಿ ನೀಡಿ, ಆಟೋ ಮಾಲೀಕನಿಗೆ ಸಾಂತ್ವನ ಹೇಳಿದರು.

ಮೈಸೂರಿನ ಹೆಬ್ಬಾಳ್ ಲಕ್ಷ್ಮಿಕಾಂತನಗರದ ರಸ್ತೆ ಬದಿಯಲ್ಲಿದ್ದ ಬೃಹತ್ ಮರವೊಂದು ಭಾನುವಾರ ಮಧ್ಯಾಹ್ನ ಗಾಳಿ ರಭಸಕ್ಕೆ ಧರೆಗುರುಳಿದ್ದು, ಮರದ ಕೆಳಗೆ ನಿಲ್ಲಿಸಿದ್ದ ಆಟೋ ಸಂಪೂರ್ಣ ಜಖಂಗೊಂಡಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ವಿಷಯ ತಿಳಿಯುತ್ತಿದ್ದಂತೆ ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ ಪ್ರತ್ಯೇಕವಾಗಿ ಭೇಟಿ ನೀಡಿ ಆಟೋ ಮಾಲೀಕನಿಗೆ ಪರಿಹಾರ ದೊರಕಿಸಿ ಕೊಡುವ ಭರವಸೆ ನೀಡಿದ್ದಾರೆ. ಸೋಮವಾರ ಬೆಳಗ್ಗೆ ಸ್ಥಳಕ್ಕೆ ಭೇಟಿ ನೀಡಿದ ಮಾಜಿ ಸಂಸದ ಪ್ರತಾಪ್ ಸಿಂಹ, ಜಖಂಗೊಂಡ ಆಟೋ ಮಾಲೀಕನಿಗೆ ಆರ್ಥಿಕ ಸಹಾಯಧನ ನೀಡಿ, ಧೈರ್ಯ ತುಂಬಿದ್ದಾರೆ. ಈ ವೇಳೆ ಮುಖಂಡರಾದ ಎಂ.ಜೆ.ಕಿರಣ್‌ಗೌಡ, ಅರುಣ್ ಕಾಟ್ಕರ್, ಬಿ.ಟಿ.ರಾಜೇಂದ್ರ, ಗುರು, ಹರೀಶ್ ಸಿಂಧೆ, ಭಾಸ್ಕರ್, ಮಂಜುನಾಥ್, ರವಿ, ಅರುಣ್‌ಕುಮಾರ್ ಮತ್ತಿತರರಿದ್ದರು.

# ಶಿರಮಳ್ಳಿ ಗ್ರಾಮದ ಕುಟುಂಬಕ್ಕೆ ಬಹಿಷ್ಕಾರ

## ರಕ್ಷಣೆಗಾಗಿ ಮಹಿಳೆ ಮನವಿ

ಮೈಸೂರು,ಜು.28(ಎಂಟಿವೈ)– ಹಳೆ ದ್ವೇಷದ ಹಿನ್ನೆಲೆಯಲ್ಲಿ ಗ್ರಾಮದ ಕೆಲವರು ಬಹಿಷ್ಕಾರದೊಂದಿಗೆ ಕುಟುಂಬದ ಸದಸ್ಯರಿಗೆ ನಿರಂತರವಾಗಿ ಕಿರುಕುಳ ನೀಡುತ್ತಿದ್ದು, ರಕ್ಷಣೆ ನೀಡುವಂತೆ ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಹೋಬಳಿ ಶಿರಮಳ್ಳಿ ಗ್ರಾಮದ ರತ್ನಮ್ಮ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಲಿತ ಸಮುದಾಯಕ್ಕೆ ಸೇರಿದ ನಮ್ಮ ಕುಟುಂಬಕ್ಕೆ ನಮ್ಮದೇ ಸಮುದಾಯಕ್ಕೆ ಸೇರಿದ ಗ್ರಾಮದ ಕೆಲವರು ಕುತಂತ್ರ ನಡೆಸಿ ಬಹಿಷ್ಕಾರ ಹಾಕಿ ನಿರಂತರವಾಗಿ ಕಿರುಕುಳ ನೀಡುತ್ತಿದ್ದಾರೆ. ಕಳೆದ ಏ.27ರಂದು ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದ ಮೆರವಣಿಗೆ ವೇಳೆ ಡಿಜೆ ವಾಹನ ನಮ್ಮ ಮನೆ ಮುಂದೆ ತೆರಳುತ್ತಿದ್ದಾಗ ಪೊಲೀಸರು ಆಗಮಿಸಿ, ಡಿಜೆ ವಾಹನ ಹಾಗೂ ಚಾಲಕನನ್ನು ವಶಕ್ಕೆ ಪಡೆದಿದ್ದರು. ಆದರೆ, ಡಿಜೆ ವಾಹನ ವಶಕ್ಕೆ ಪಡೆದಿರುವುದಕ್ಕೂ ನಮ್ಮ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ, ಗ್ರಾಮದ ಕೆಲವರು ನಮ್ಮ ಕುಟುಂಬದವರೇ ಪೊಲೀಸರಿಗೆ ದೂರು ನೀಡಿದ್ದಾರೆ ಎಂದು ಸುಳ್ಳು ಆರೋಪ ಮಾಡಿ ನಮ್ಮ ಕುಟುಂಬಕ್ಕೆ ಬಹಿಷ್ಕಾರ ಹಾಕಿದ್ದಾರೆ ಎಂದು ಆರೋಪಿಸಿದರು.

ದಶಕದ ಹಿಂದೆ ನಮ್ಮ ತಂಗಿಯ ಗಂಡನನ್ನು ಹತ್ಯೆ ಮಾಡಲಾಗಿತ್ತು. ಈ ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಗ್ರಾಮದ ಕೆಲವರು ದೂರು ದಾಖಲಿಸದಂತೆ ಬೆದರಿಕೆ ಹಾಕಿದ್ದರು. ಆದರೆ, ನಾವು ಪ್ರಕರಣ ದಾಖಲಿಸಿದ್ದರಿಂದ ನಮ್ಮ ಕುಟುಂಬದ ಮೇಲೆ ದ್ವೇಷ ಕಾರುತ್ತಿರುವ ಗ್ರಾಮದ ಮಹದೇವಸ್ವಾಮಿ, ಶಿವರಾಜು, ಹುಚ್ಚಯ್ಯ, ಸುರೇಶ್, ಸಿದ್ದರಾಜು ಎಂಬುವವರು ಕಳೆದ 3 ತಿಂಗಳಿಂದ ಬಹಿಷ್ಕಾರ ಹಾಕಿದ್ದು, ಗ್ರಾಮದಲ್ಲಿ ನಮ್ಮನ್ನು ಯಾರೂ ಮಾತನಾಡಿಸುತ್ತಿಲ್ಲ, ಕೆಲಸಕ್ಕೆ ಕರೆಯುತ್ತಿಲ್ಲ. ಈ ಸಂಬಂಧ ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್, ಜಿಲ್ಲಾಧಿಕಾರಿ, ಮಹಿಳಾ ಆಯೋಗ, ತಹಶೀಲ್ದಾರ್, ಪಿಡಿಒ ಸೇರಿದಂತೆ ಎಲ್ಲರಿಗೂ ದೂರು ನೀಡಲಾಗಿದೆ. ಆದರೂ, ನಮಗೆ ರಕ್ಷಣೆ ಹಾಗೂ ನ್ಯಾಯ ಸಿಕ್ಕಿಲ್ಲ ಎಂದು ವಿಷಾದಿಸಿದರು.

ಈ ಸಂಬಂಧ ಹುಲ್ಲಹಳ್ಳಿ ಠಾಣೆಗೆ ದೂರು ನೀಡಿದ್ದರೂ, ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಲ್ಲ. ಆರೋಪಿಗಳ ಜೊತೆಗೆ ಪೊಲೀಸರು ಶಾಮೀಲಾಗಿದ್ದು, ನಮಗೆ ಕಿರುಕುಳ ನೀಡಲಾರಂಭಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರತವರು ಜಿಲ್ಲೆ, ಜಿಲ್ಲಾಮಂತ್ರಿ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ಶಾಸಕ ದರ್ಶನ್ ಧ್ರುವನಾರಾಯಣ್ ಅವರು ನಮಗೆ ನ್ಯಾಯ ದೊರಕಿಸಿಕೊಡದೆ ಇದ್ದರೆ, ಕುಟುಂಬದ ಸದಸ್ಯರು ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ. ನಮಗೆ ಅದೊಂದೆ ದಾರಿ ಉಳಿದಿದೆ ಎಂದರು. ಗೋಷ್ಠಿಯಲ್ಲಿ ಕುಟುಂಬದ ಸದಸ್ಯರಾದ ನಾಗಮಣಿ, ಪುಟ್ಟಸಿದ್ದಮ್ಮ ಇದ್ದರು.

# ಹೆಸರಾಂತ ಕೀರ್ತನ ಕಲಾವಿದರಾದ ಶ್ರೀ ಜ್ಞಾನಮೂರ್ತಿಯವರ ಅಗಲಿಕೆಗೆ ಸುತ್ತೂರು ಶ್ರೀಗಳ ಸಂತಾಪ



ಶ್ರೀ ಜ್ಞಾನಮೂರ್ತಿ

ಮೈಸೂರು, ಜು. 28– ಕರ್ನಾಟಕದ ಹೆಸರಾಂತ ಕೀರ್ತನಕಾರರಾದ ಎನ್.ಆರ್.ಜ್ಞಾನಮೂರ್ತಿಯವರ ನಿಧನಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಸಂತಾಪ ಸೂಚಿಸಿದ್ದಾರೆ.

ಶ್ರೀ ಜ್ಞಾನಮೂರ್ತಿಯವರು ಶರಣ ಸಾಹಿತ್ಯ, ದಾಸ ಸಾಹಿತ್ಯ, ವಚನಗಳು, ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆ ಮುಂತಾದ ವಿಷಯಗಳ ಬಗ್ಗೆ ಆಳವಾದ ತಿಳಿವಳಿಕೆ ಹೊಂದಿದ್ದರು. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಸದಸ್ಯರಾಗಿ ನಾಲ್ಕು ಅವಧಿಗೆ ಸೇವೆ ಸಲ್ಲಿಸಿದ ಹಿರಿಮೆ ಅವರದು. ನಿವೃತ್ತ ನ್ಯಾಯಮೂರ್ತಿಗಳಾಗಿದ್ದ ಡಿ.ಎಂ.ಚಂದ್ರಶೇಖರಮೂರ್ತಿಯವರ ಬಸವ ತತ್ತ್ವ ಪ್ರಸಾರ ಪರಿಷತ್‌ನಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದ್ದರು.

ಶ್ರೀಯುತರು ಕೋಲಾರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕರ್ನಾಟಕ ಕೀರ್ತನಕಲಾ ಪರಿಷತ್ತಿನ ಉಪಾಧ್ಯಕ್ಷರಾಗಿ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ವಿಶಿಷ್ಟ ಕಾಣಿಕೆಯನ್ನು ನೀಡಿದವರು. ಹಂಪಿ ಉತ್ಸವ, ಮೈಸೂರು ದಸರಾ, ಮುಂಬೈ, ಚೆನ್ನೈ, ಮಹಾರಾಷ್ಟ್ರ, ಕೇರಳ ಮುಂತಾದೆಡೆಗಳಲ್ಲಿ ಅವರ ಕಲಾಸೇವೆಯಿಂದ ಜನಮಾನಸಕ್ಕೆ ಸುಪರಿಚಿತರಾಗಿದ್ದರು. ಸುತ್ತೂರು ಶ್ರೀಕ್ಷೇತ್ರದಲ್ಲಿ ಶಿವರಾತ್ರಿ ಹಬ್ಬ ಮತ್ತು ಜಾತ್ರೆಯ ಸಂದರ್ಭಗಳಲ್ಲಿ ಹಲವಾರು ಬಾರಿ ಕೀರ್ತನೆಯನ್ನು ನಡೆಸಿಕೊಟ್ಟಿದ್ದರು.

ಶ್ರೀಯುತರ ವೈದುಷ್ಯ, ಪ್ರತಿಭೆಯನ್ನು ಮನಗಂಡು ಅವರಿಗೆ ಹಲವಾರು ಪ್ರಶಸ್ತಿ, ಪುರಸ್ಕಾರಗಳು ಲಭಿಸಿದ್ದುವು ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಕುಮಾರವ್ಯಾಸ ಪ್ರಶಸ್ತಿ, ಕರ್ನಾಟಕ ಕಲಾಶ್ರೀ ಪ್ರಶಸ್ತಿ, ನಾಡಪ್ರಭು ಕೆಂಪೇಗೌಡ ಪ್ರಶಸ್ತಿ, ಕೇಂದ್ರ ಸರ್ಕಾರದ ಸುವರ್ಣ ಮಹೋತ್ಸವ ಪ್ರಶಸ್ತಿ ಸೇರಿದಂತೆ ಹಲವಾರು ಗೌರವಗಳಿಗೆ ಭಾಜನರಾಗಿದ್ದರು. ಸರಳರು, ಸಜ್ಜನರು, ಧಾರ್ಮಿಕತೆಯನ್ನು ಮೈಗೂಡಿಸಿಕೊಂಡಿದ್ದ ಸಾಧಕರು. ಅವರ ನಿಧನದಿಂದಾಗಿ ಕನ್ನಡ ಸಾರಸ್ವತ ಹಾಗೂ ಸಾಂಸ್ಕೃತಿಕ ಲೋಕಕ್ಕೆ ಅಪಾರ ನಷ್ಟ ಉಂಟಾಗಿದೆ.

ಶ್ರೀ ಜ್ಞಾನಮೂರ್ತಿಯವರ ಆತ್ಮಕ್ಕೆ ಚಿರಶಾಂತಿಯನ್ನು, ಅವರ ಕುಟುಂಬವರ್ಗದವರಿಗೆ ಮತ್ತು ಅಸಂಖ್ಯಾತ ಅಭಿಮಾನಿಗಳಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಶ್ರೀಗಳು ಪ್ರಾರ್ಥಿಸಿದ್ದಾರೆ.


## ಉಚಿತ ಓರಿಯಂಟೇಶನ್ ಕಾರ್ಯಕ್ರಮ

ಮೈಸೂರು, ಜು.28–ಕೆಎಸ್‌ಎಫ್ ಸ್ಕೂಲ್ ಆಫ್ ಬಿಸಿನೆಸ್ ಅಂಡ್ ಟೆಕ್ನಾಲಜಿ, ಕೃಷಿಕ್ ಸರ್ವೋದಯ ಫೌಂಡೇಷನ್, ಮೈಸೂರು ಶಾಖೆ ವತಿಯಿಂದ ಮೂರು ದಿನಗಳ ಉಚಿತ ಓರಿಯಂಟೇಶನ್ ಕಾರ್ಯಕ್ರಮವನ್ನು ಆಗಸ್ಟ್ 11ರಿಂದ ಹಮ್ಮಿಕೊಳ್ಳಲಾಗಿದೆ. ಪಿಯುಸಿ (ಕಾಮರ್ಸ್) ಅಥವಾ 12ನೇ ತರಗತಿ ಕಾಮರ್ಸ್ ಪೂರ್ಣಗೊಳಿಸಿರುವವರು ಅರ್ಹರಾಗಿರುತ್ತಾರೆ. ಆಸಕ್ತ ಅಭ್ಯರ್ಥಿಗಳು ಕೆಎಸ್‌ಎಫ್, ಸಿಎ–25, ಜನರಲ್ ತಿಮ್ಮಯ್ಯ ರಸ್ತೆ, ವಿಜಯನಗರ ಎರಡನೇ ಹಂತ, ಮೊ. 9964982336, 6362847192 ಸಂಪರ್ಕಿಸಲು ಕೋರಲಾಗಿದೆ.

## ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಜು.28–ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜು.31ರಂದು ಬೆಳಗ್ಗೆ 10ರಿಂದ ರಾತ್ರಿ 8 ಗಂಟೆವರೆಗೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

29.07.2025 ಮಂಗಳವಾರ, ಮಳೆ ನಕ್ಷತ್ರ: ಪುಷ್ಯ, 20.07.2025ರಿಂದ 2.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಅರ್ಥರೈಟಿಸ್, ಹೈಪೋಥೈರಾಯ್ಡಿಸಮ್ ಯೋಗ ಚಿಕಿತ್ಸಾ ಶಿಬಿರ, ವೆರಿಕೋಸ್ ವೇನ್ಸ್ ಮತ್ತು ಅಲ್ಸರ್, ಇಸುಬು ರೋಗಗಳಿಗೆ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ಕ್ಕೆ

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜೆ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ಚಾರು ಮಂಜೂಷಾ–8 ವಿಶೇಷ ಮಕ್ಕಳ ಅಧ್ಯಾಪಕರಿಗಾಗಿ ಉಚಿತ ಪೇಪರ್ ಬ್ಯಾಗ್ ತಯಾರಿಕಾ ತರಬೇತಿ ಕಾರ್ಯಾಗಾರ–2, ಸಂಪನ್ಮೂಲ ವ್ಯಕ್ತಿ : ಶ್ರೀಮತಿ ಸಿ.ಸಿ. ವೀಣಾ, ಉಪಸ್ಥಿತರು : ಶ್ರೀಮತಿ ಎನ್. ಮಂಜುಳಾ ಪ್ರಭಾಕರ್, ಸ್ಥಳ: ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ಆರ್.ಟಿ. ನಗರ ಬಳಿ, ಬೆಳಗ್ಗೆ 10 ರಿಂದ.

■ **ಕರ್ನಾಟಕ ಸಾಹಿತ್ಯ ಅಕಾಡೆಮಿ, ಚಕೋರ ಸಾಹಿತ್ಯ ವಿಚಾರ ವೇದಿಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು :** ವಿಶೇಷ ಉಪನ್ಯಾಸ ಮಾಲಿಕೆ–6, ವಿಷಯ : ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದ ಮಂಥರೆ ಹಾಗೂ ಮಂಡೋದರಿ, ಅಧ್ಯಕ್ಷತೆ : ಮಹಾಜನ ಕಾಲೇಜು ಪ್ರಿನ್ಸಿಪಾಲ್ ಡಾ.ಬಿ.ಆರ್. ಜಯಕುಮಾರಿ, ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಎಚ್.ಎಂ. ಕಲಾಶ್ರೀ ಅವರಿಂದ ವಿಶೇಷ ಉಪನ್ಯಾಸ, ಉಪಸ್ಥಿತರು : ಡಾ. ಎಚ್.ಆರ್. ತಿಮ್ಮೇಗೌಡ, ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಸಂಚಾಲಕ ಪ್ರೊ. ಎಚ್. ಚಂದ್ರಕಿರಣ್ ಕುಳವಾಡಿ, ಡಾ. ಎನ್. ಯೋಗೇಶ, ಶಬಾನ ಮೈಸೂರು, ಸ್ಥಳ: ಎವಿಸಿ–3, ಮಹಾಜನ ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಸ್ನೇಹ ಸಿಂಚನ ಮತ್ತು ತರಗತಿ ಪ್ರತಿನಿಧಿಗಳ ಪದಗ್ರಹಣ ಹಾಗೂ ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಅಧ್ಯಕ್ಷತೆ : ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಶಾರದ, ಉಪಸ್ಥಿತರು : ಡಾ. ಜಿ. ಪ್ರಸಾದಮೂರ್ತಿ, ಶ್ರೀಮತಿ ಎಂ.ಎಸ್. ಸಂಧ್ಯಾರಾಣಿ, ಎಂ.ಎನ್. ಸೂರಜ್, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ.

■ **ಮೈಸೂರು ತಾಲೂಕು ಒಕ್ಕಲಿಗರ ಸಂಘ :** ಮೈಸೂರು ನಗರ ಮತ್ತು ಜಿಲ್ಲೆಯ ಒಕ್ಕಲಿಗ ಸಂಘಟನೆಗಳ ಅಭಿವೃದ್ಧಿ ಮತ್ತು ವಿವಿಧ ಜನಾಂಗಗಳಲ್ಲಿ ಸಾಮರಸ್ಯ ಮೂಡಿಸಿ ವಿವಿಧ ಸಮಾಜ ಸೇವಾ ಕಾರ್ಯಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಉದ್ದೇಶದಿಂದ ವಿವಿಧ ಒಕ್ಕಲಿಗ ಸಂಘಟನೆಗಳ ಪದಾಧಿಕಾರಿಗಳ ಸಭೆ, ಸ್ಥಳ: ಸಿಎ ನಿವೇಶನ ಸಂಖ್ಯೆ–16, ಎ–1 ಬ್ಲಾಕ್, ಜಯನಗರ 3ನೇ ಹಂತ, ಬೆಳಗ್ಗೆ 11ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು, ವಾಚನ : ವಿಶ್ರಾಂತ ಕಾರ್ಯಪಾಲಕ ಅಭಿಯಂತರ ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತುಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಗೀತಾ ವೈ ಪುಟ್ಟಿ ಹಾಗೂ ಕೆ.ಪಿ. ರೇವತಿ, ವ್ಯಾಖ್ಯಾನ– ಡಾ. ಎನ್.ಎಸ್. ತಾರಾನಾಥ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 8.30 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು ಗ್ರಾಮೀಣ ಅಭಿವೃದ್ಧಿ ಕ್ಷೇತ್ರದ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಮಂಡ್ಯದ ವಿಕಸನ ಗ್ರಾಮೀಣ ಹಾಗೂ ನಗರಾಭಿವೃದ್ಧಿ ಸಂಸ್ಥೆಯ ನಿರ್ದೇಶಕರಾದ ಮಹೇಶ್ ಚಂದ್ರಗುರು ಅವರೊಂದಿಗೆ ಸಂದರ್ಶನ, ಇವರೊಂದಿಗೆ ಭಾಗವಹಿಸುತ್ತಾರೆ–ಎನ್. ಕೇಶವಮೂರ್ತಿ, 9.05 ಪ್ರಾಯೋಜಿತ ಕಾರ್ಯಕ್ರಮ–ಆರೋಗ್ಯ ಧಾರೆ, 9.00 ಕರೆಗೊಂದು ಗೀತೆ –ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಕೊಡಿಯಾಲಾ ಕೆ.ಎನ್. ಕೃಷ್ಣಮೂರ್ತಿ ಮತ್ತು ಕೆ.ಎನ್. ಸುರೇಂದ್ರ–ನಾಗಸ್ವರ ದ್ವಂದ್ವವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಹೊಂಗಿರಣ–ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ–ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ. ಜಿ. ಕವಿತಾ

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ– ಮಂಟೇಸ್ವಾಮಿ ಕಾವ್ಯ ಮತ್ತು ಹರಿಹರನ ಪುಷ್ಪ ರಗಳೆಯಲ್ಲಿ ಕಂಡುಬರುವ ಪುಷ್ಪಪೂಜೆಯ ತೌಲನಿಕ ವಿಶ್ಲೇಷಣೆ ಈ ಕುರಿತು ಮಾತನಾಡುತ್ತಾರೆ ಪ್ರೊ. ನಂಜುಂಡಯ್ಯ ಎಂ., 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಅರುಣ ಸಾಯಿರಾಂ – ಹಾಡುಗಾರಿಕೆ, 4.00 ಕಥಾಕಾಲಕ್ಷೇಪ–ಶ್ರೀ ಕೃಷ್ಣ ಗಾರುಡಿ, ಪ್ರಸ್ತುತಿ–ಶ್ರೀ ಗುರುರಾಜುಲು ನಾಯ್ಡು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ – ಕಿಸಾನ್‌ವಾಣಿ –ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ ತರಂಗ–ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಸಮಗ್ರ ಮೀನು ಕೃಷಿ ಪದ್ಧತಿ ಈ ಕುರಿತು ಮೈಸೂರು ಜಿಲ್ಲಾ ಮೀನುಗಾರಿಕೆ ಉಪನಿರ್ದೇಶಕರಾದ ಜಿ. ಹೆಚ್. ಮಂಜುನಾಥ್ ಅವರೊಂದಿಗೆ ಸಂದರ್ಶನ. ಸಂದರ್ಶಕರು – ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಬಿ. ದಿಗ್ವಿಜಯ್, 8.00 ಸಂಸತ್ ಸಮೀಕ್ಷಾ, 8.15 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಡಾ. ಎಸ್. ವಿಜಯರಾಘವನ್ – ವೀಣಾವಾದನ, 10.00 ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ

ಮೈಸೂರು ಮಿತ್ರ



### ಅಶೋಕಪುರಂ ರೈಲ್ವೆ ನಿಲ್ದಾಣಕ್ಕೆ 2 ಕೋಟಿ ವೆಚ್ಚದಲ್ಲಿ

# ಕೋಚ್ ಗೈಡ್‌ಲೈನ್ಸ್ ಡಿಸ್‌ಪ್ಲೇ ಸಿಸ್ಟಂ ವ್ಯವಸ್ಥೆ

**ಜೊತೆಗೆ ನಾಲ್ಕು ಲಿಫ್ಟ್‌ಗಳ ಸೌಲಭ್ಯ ; ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾಹಿತಿ**

**ರೈಲ್ವೆ ನಿಲ್ದಾಣಕ್ಕೆ ಭೇಟಿ ನೀಡಿ ವಿವಿಧ ಅಭಿವೃದ್ಧಿ ಕಾಮಗಾರಿ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದ ಸಂಸದರು**



ಮೈಸೂರಿನ ರೈಲ್ವೆ ನಿಲ್ದಾಣಕ್ಕೆ ಸಂಸದ ಯದುವೀರ್ ಒಡೆಯರ್ ಸೋಮವಾರ ಭೇಟಿ ನೀಡಿ ವಿವಿಧ ಅಭಿವೃದ್ಧಿ ಕಾರ್ಯಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಮೈಸೂರು,ಜು.28(ಪಿಎಂ)– ಮೈಸೂರಿನ ಅಶೋಕಪುರಂ ರೈಲ್ವೆ ನಿಲ್ದಾಣದಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ಕೋಚ್ ಗೈಡ್‌ಲೈನ್ಸ್ ಡಿಸ್‌ಪ್ಲೇ ಸಿಸ್ಟಂ ವ್ಯವಸ್ಥೆ ಕಲ್ಪಿಸುವ ಯೋಜನೆ ಮಂಜೂರಾಗಿದ್ದು, ಜೊತೆಗೆ ಇದೇ ನಿಲ್ದಾಣದಲ್ಲಿ ನಾಲ್ಕು ಲಿಫ್ಟ್‌ಗಳನ್ನು ಅಳವಡಿಸಲಾಗುತ್ತಿದೆ ಎಂದು ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಮೈಸೂರಿನ ಕೇಂದ್ರ ರೈಲ್ವೆ ನಿಲ್ದಾಣಕ್ಕೆ ಸೋಮವಾರ ಭೇಟಿ ನೀಡಿದ ಅವರು, ವಿವಿಧ ಅಭಿವೃದ್ಧಿ ಕಾಮಗಾರಿಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು ವಿವಿಧ ಸಲಹೆ–ಸೂಚನೆ ನೀಡಿದ ಬಳಿಕ ಮಾಧ್ಯಮದರೊಂದಿಗೆ ಅವರು ಮಾತನಾಡಿದರು.

ಈಗಾಗಲೇ ಅಶೋಕಪುರಂ ರೈಲ್ವೆ ನಿಲ್ದಾಣವನ್ನು ಕೇಂದ್ರ ಸರ್ಕಾರದ ಅನುದಾನದಲ್ಲಿ ಮೇಲ್ದರ್ಜೆಗೇರಿಸಲಾಗಿದೆ. ಈಗ ಈ ನಿಲ್ದಾಣಕ್ಕೆ ನಾಲ್ಕು ಲಿಫ್ಟ್‌ಗಳು ಮಂಜೂರಾಗಿವೆ. ಜೊತೆಗೆ ಕೋಚ್ ಗೈಡ್‌ಲೈನ್ಸ್ ಡಿಸ್‌ಪ್ಲೇ ಸಿಸ್ಟಂ ವ್ಯವಸ್ಥೆ ಕಲ್ಪಿಸುವ ಯೋಜನೆಯೂ ಮಂಜೂರಾಗಿದೆ. ಜೊತೆಗೆ ಚಾಮರಾಜನಗರ–ತಿರುಪತಿ ಎಕ್ಸ್‌ಪ್ರೆಸ್ ಅನ್ನು ಅಶೋಕಪುರಂ ನಿಲ್ದಾಣದಲ್ಲಿ ನಿಲ್ಲಿಸಬೇಕೆಂಬ ಬೇಡಿಕೆ ಇತ್ತು. ಅದನ್ನು ಪರಿಗಣಿಸಲಾಗುತ್ತಿದೆ ಎಂದರು.

ದಸರಾ, ದೀಪಾವಳಿ ಹಬ್ಬದ ಸಂದರ್ಭದಲ್ಲಿ ವಿಶೇಷ ರೈಲುಗಳ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಕಳೆದ ಬಾರಿ ಈ ಸಂದರ್ಭದಲ್ಲಿ ವಿಶೇಷ ರೈಲುಗಳನ್ನು ಕಲ್ಪಿಸಿದ್ದಾಗ ಉಂಟಾಗಿದ್ದ ಸಮಸ್ಯೆಗಳು ಮರುಕಳಿಸದಂತೆ ಕ್ರಮ ವಹಿಸಲಾಗುವುದು. ಅಂತಹ ಸಮಸ್ಯೆ ಕೂಡ ಆಗಿಲ್ಲ. ಆದರೆ ಈ ಬಾರಿ ಬಹುಶಃ ಪ್ರವಾಸಿಗರ ಸಂಖ್ಯೆ ಹೆಚ್ಚಾಗಬಹುದು ಎಂದು ಅಂದಾಜಿಸಲಾಗಿದೆ. ಈ ನಿಟ್ಟಿನಲ್ಲಿ ಸೂಕ್ತ ವ್ಯವಸ್ಥೆ ಬಗ್ಗೆ ಅವಲೋಕಿಸಿ ವಿಶೇಷ ರೈಲುಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದರು.

ಮೈಸೂರು ರೈಲ್ವೆ ನಿಲ್ದಾಣದ ಪುನರಾಭಿವೃದ್ಧಿ ಯೋಜನೆಯಡಿ 3ನೇ ಪ್ರವೇಶ ದ್ವಾರ ನಿರ್ಮಾಣ ಸಂಬಂಧ ವಾಸ್ತುಶಿಲ್ಪ ಕುರಿತಂತೆ ಆನ್‌ಲೈನ್ ಸಮೀಕ್ಷೆಯಲ್ಲಿ ಆಕ್ಷೇಪ ವ್ಯಕ್ತವಾಗಿದೆ. ಹಾಗಾಗಿ ಇದನ್ನು ಪುನರ್ ಪರಿಶೀಲನೆ ಮಾಡಿ ಮೈಸೂರು ವಾಸ್ತುಶಿಲ್ಪಕ್ಕೆ ಪೂರಕವಾಗಿ ರೂಪಿಸುವಂತೆ ತಿಳಿಸಿದ್ದೇನೆ. ಮೈಸೂರು ರೈಲ್ವೆ ನಿಲ್ದಾಣದ ಹಳೇ ಕಟ್ಟಡದ ವಾಸ್ತುಶಿಲ್ಪಕ್ಕೆ ಅನುಗುಣವಾಗಿಯೇ ಇದೂ ಸಹ ನಿರ್ಮಾಣವಾಗಬೇಕಿದೆ. ಜೊತೆಗೆ ಆಧುನಿಕ ಕಾಲಕ್ಕೂ ಪೂರಕವಾಗಿ ಎಲ್ಲಾ ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ಸೂಚನೆ ನೀಡಲಾಗಿದೆ ಎಂದರು.

ಮೈಸೂರಿನ ಬೋಗಾದಿ ರಸ್ತೆಯಲ್ಲಿ ಕ್ರಾಫರ್ಡ್ ಭವನದ ಹಿಂಭಾಗದ ರೈಲ್ವೆ ಗೇಟ್‌ನಲ್ಲಿ ಮೇಲ್ಸೇತುವೆ ನಿರ್ಮಾಣ ಸಂಬಂಧ ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ. ಈಗ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಅಭಿವೃದ್ಧಿ ಸಂಬಂಧ ಹೊಸ ಪ್ಯಾಕೇಜ್ ಬಂದಿದ್ದು, ರೈಲ್ವೆಗೆ ಸಂಬಂಧಿಸಿದಂತೆಯೂ ಅನೇಕ ವ್ಯವಸ್ಥೆಗಳು ಮೇಲ್ದರ್ಜೆಗೇರಿಸಲಾಗುತ್ತಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಅರಸೀಕೆರೆ–ಮೈಸೂರು ಮೂಲಕ ಹಾಸನ ಮಾರ್ಗ ಡಬಲಿಂಗ್ (ಜೋಡಿ ಹಳಿ ನಿರ್ಮಾಣ) ಆಗಿದೆ. ವಿಶೇಷವಾಗಿ ಮೈಸೂರು–ಚಾಮರಾಜನಗರ ಜೋಡಿ ಹಳಿ ನಿರ್ಮಾಣ ಕೂಡ ಆಗುತ್ತಿದೆ. ಈ ಮಾರ್ಗದಲ್ಲಿ ಶೀಘ್ರದಲ್ಲಿ ಪ್ರಯಾಣಿಸಲು ಇದು ಒಳ್ಳೆಯ ವ್ಯವಸ್ಥೆಯಾಗಲಿದೆ. ನಂಜನಗೂಡು–ಚಾಮರಾಜನಗರ ನಡುವೆ ಬಹಳ ಸಮಯ ತೆಗೆದುಕೊಳ್ಳುವ ಕಾರಣ ಮತ್ತು ಕೆಲವು ನಿಲುಗಡೆ ಅಗತ್ಯವಿದೆ ಎಂದು ಬೇಡಿಕೆಗಳು ಬಂದ ಹಿನ್ನೆಲೆಯಲ್ಲಿ ಕ್ರಾಸಿಂಗ್ ಸ್ಟೇಷನ್ ನಿರ್ಮಿಸಲಾಗುತ್ತಿದೆ ಎಂದರು.

**ಭೂಮಿ ನೀಡಲು ವಿಳಂಬ:** ನಾಗನಹಳ್ಳಿಯಲ್ಲಿ ಟರ್ಮಿನಲ್ ನಿರ್ಮಾಣ ಸಂಬಂಧ ಭೂ ಸ್ವಾಧೀನ ಪ್ರಕ್ರಿಯೆ ಮುಗಿದ ಕೂಡಲೇ ಕಾಮಗಾರಿ ಆರಂಭಿಸಲಾಗುವುದು. ಭೂಮಿ ಒದಗಿಸುವ ಸಂಬಂಧ ರಾಜ್ಯ ಸರ್ಕಾರದಿಂದ ಯಾವುದೇ ರೀತಿಯ ಪ್ರಕ್ರಿಯೆ ಕಾಣುತ್ತಿಲ್ಲ. ಈಗಾಗಲೇ ಜಿಲ್ಲಾಧಿಕಾರಿಗಳ ಖಾತೆಗೆ ಈ ಸಂಬಂಧ ಹಣ ಸಂದಾಯ ಮಾಡಲಾಗಿದೆ. ಕೆಲ ಜಮೀನಿನ ಮಾಲೀಕರು ವಿದೇಶದಲ್ಲಿ ಇದ್ದು, ಸರಿಯಾದ ಪ್ರತಿಕ್ರಿಯೆ ಅವರಿಂದ ಸಿಗುತ್ತಿಲ್ಲವೆಂದು ಡಿಸಿಯವರು ಹೇಳಿದ್ದಾರೆ. ಹಾಗಾಗಿ ಬೇರೆ ರೀತಿಯಲ್ಲಿ ಭೂಮಿ ಸ್ವಾಧೀನ ಮಾಡಬಹುದೇ ಎಂದು ಪರಿಶೀಲನೆ ಮಾಡಲು ಹೇಳಿದ್ದೇವೆ ಎಂದು ತಿಳಿಸಿದರು. ನೈರುತ್ಯ ರೈಲ್ವೆ ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್, ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಶಮ್ಮಾಸ್ ಹಮೀದ್ ಹಾಗೂ ಇನ್ನಿತರ ಹಿರಿಯ ಅಧಿಕಾರಿಗಳು ಹಾಜರಿದ್ದರು.

---

## ಮೈಸೂರು–ಚಾ.ನಗರ ರೈಲ್ವೆ ಜೋಡಿ ಹಳಿ ಕಾಮಗಾರಿಗೆ ಡಿಪಿಆರ್ ಪ್ರಕ್ರಿಯೆ ಆರಂಭ

- ಇದೇ ಆಗಸ್ಟ್‌ನಲ್ಲಿ ರೈಲ್ವೆ ಮಂಡಳಿಗೆ ಡಿಪಿಆರ್ ಸಲ್ಲಿಸುವ ಉದ್ದೇಶ
- ಅರಸೀಕೆರೆಯ ಮೂಲಕ ಹಾಸನ-ಮೈಸೂರು ರೈಲ್ವೆ ಮಾರ್ಗದಲ್ಲೂ ಜೋಡಿ ಹಳಿ ನಿರ್ಮಾಣ
- ಪ್ರಗತಿಯಲ್ಲಿ ಸಮೀಕ್ಷೆ

ಮೈಸೂರು,ಜು.28(ಪಿಎಂ)–ಮೈಸೂರು–ಚಾಮರಾಜನಗರ ರೈಲ್ವೆ ಜೋಡಿ ಹಳಿ ಕಾಮಗಾರಿ ಸಂಬಂಧ ವಿಸ್ತೃತ ಯೋಜನಾ ವರದಿ (ಡಿಪಿಆರ್)ಸಿದ್ಧಗೊಳ್ಳುತ್ತಿದ್ದು, ಇದೇ ಆಗಸ್ಟ್‌ನಲ್ಲಿ ಡಿಪಿಆರ್ ಅನ್ನು ರೈಲ್ವೆ ಮಂಡಳಿಗೆ ಸಲ್ಲಿಸುವ ಉದ್ದೇಶ ಹೊಂದಲಾಗಿದೆ.





ಮೈಸೂರಿನ ನೈರುತ್ಯ ರೈಲ್ವೆ ಮೈಸೂರು ವಿಭಾಗದ ಡಿಆರ್‌ಎಂ ಅವರ ಕಚೇರಿ ಸಭಾಂಗಣದಲ್ಲಿ ಸೋಮವಾರ ಸಂಸದ ಯದುವೀರ ಒಡೆಯರ್ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಮೈಸೂರಿನ ನೈರುತ್ಯ ರೈಲ್ವೆ ಮೈಸೂರು ವಿಭಾಗದ ಡಿಆರ್‌ಎಂ ಅವರ ಕಚೇರಿ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ರೈಲ್ವೆ ಮೂಲಸೌಕರ್ಯ ಹಾಗೂ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ರೈಲ್ವೆ ಅಧಿಕಾರಿಗಳು ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಈ ಮಾಹಿತಿ ನೀಡಿದರು.

ಈ ಮಾರ್ಗ 60 ಕಿ.ಮೀ. ವ್ಯಾಪ್ತಿ ಹೊಂದಿದ್ದು, ಈ ಯೋಜನೆಯ ಕ್ಷೇತ್ರ ಸಮೀಕ್ಷೆ ಪೂರ್ಣಗೊಂಡಿದೆ. ಈಗ ವಿವರವಾದ ಯೋಜನಾ ವರದಿ (ಡಿಪಿಆರ್) ತಯಾರಾಗುತ್ತಿದೆ. ಅದೇ ರೀತಿಯಲ್ಲಿ ಅರಸೀಕೆರೆಯ ಮೂಲಕ ಹಾಸನ–ಮೈಸೂರು ರೈಲ್ವೆ ಮಾರ್ಗದ ಡಬಲಿಂಗ್ ಕಾರ್ಯದ ಬಗ್ಗೆಯೂ ಮಾಹಿತಿ ನೀಡಲಾಯಿತು.

ಈ ಮಾರ್ಗವು 165.80 ಕಿ.ಮೀ. ಇದ್ದು, ಇದರ ಅಂತಿಮ ಸ್ಥಳ ಸಮೀಕ್ಷೆಗೆ ರೈಲ್ವೆ ಮಂಡಳಿಯಿಂದ 14 ಆಗಸ್ಟ್ 2024ರಂದು ಅನುಮೋದನೆ ದೊರಕಿದೆ. ಹೆಲಿಕಾಪ್ಟರ್ ಆಧಾರಿತ ಗಗನ ಸಮೀಕ್ಷೆ ಪೂರ್ಣಗೊಂಡಿದ್ದು, ಪ್ರಸ್ತುತ ಭೂ ಸಮೀಕ್ಷೆ ನಡೆಯುತ್ತಿದೆ. ಸದರಿ ಯೋಜನೆ ಅನುಷ್ಠಾನದ ಬಳಿಕ ಈ ಮಾರ್ಗದಲ್ಲಿ ರೈಲು ಸಂಚಾರ ಸಾಮರ್ಥ್ಯವು ಹೆಚ್ಚಳವಾಗಲಿದ್ದು, ಕಾರ್ಯಾಚರಣೆ ದಕ್ಷತೆಗೂ ಸಹಕಾರಿ ಆಗಲಿದೆ ಎಂದು ವಿವರಗಳನ್ನು ಒದಗಿಸಲಾಯಿತು.

**ನಾಗನಹಳ್ಳಿ ರೈಲ್ವೆ ಟರ್ಮಿನಲ್:** ಅಲ್ಲದೆ, ಮೈಸೂರಿನ ರೈಲ್ವೆ ನಿಲ್ದಾಣದ ಒತ್ತಡ ತಗ್ಗಿಸಲು ರೂಪಿಸಿರುವ ಪ್ರಸ್ತಾಪಿತ ನಾಗನಹಳ್ಳಿ ಹೊಸ ಟರ್ಮಿನಲ್ ನಿರ್ಮಾಣ ಕಾಮಗಾರಿಯ ಬಗ್ಗೆಯೂ ಚರ್ಚೆ ನಡೆಯಿತು. ಈ ಯೋಜನೆಯಡಿ 580 ಮೀ. ಉದ್ದ ಮತ್ತು 10.5 ಮೀ. ಅಗಲದಲ್ಲಿ ಫ್ಲಾಟ್ ಫಾರ್ಮ್ ವಿಸ್ತರಣೆ ಮಾಡಲಾಗುತ್ತಿದೆ.

ಅಂತೆಯೇ 760 ಮೀ. ಉದ್ದದ ಪ್ಯಾಸೆಂಜರ್ ಲೈನ್ ಮತ್ತು ಸ್ಟೆಬ್ಲಿಂಗ್ ಲೈನ್ ನಿರ್ಮಾಣ, 750 ಮೀ. ಉದ್ದದ ಶಂಟಿಂಗ್ ನೆಕ್, ಡ್ರೈ ಪಿಟ್ ಲೈನ್, 350 ಮೀ. ಉದ್ದದ ಮೆಷಿನ್ ಸೈಡಿಂಗ್, 1,176 ಚದರ ಮೀ. ವ್ಯಾಪ್ತಿಯ ಪ್ಲಾಟ್‌ಫಾರ್ಮ್ ಛಾವಣಿ ನಿರ್ಮಾಣ, ನಾಲ್ಕು ಸಣ್ಣ ಸೇತುವೆ ಹಾಗೂ ಒಂದು ರಸ್ತೆ ಕೆಳ ಸೇತುವೆ ವಿಸ್ತರಣೆ ನಿರ್ಮಿಸಲಾಗುತ್ತದೆ. ಈ ಯೋಜನೆಗಾಗಿ ಒಟ್ಟು 8 ಎಕರೆ 29 ಗುಂಟೆ ಭೂಮಿ ಗುರುತಿಸಲಾಗಿದೆ ಎಂದು ವಿವರಿಸಿದ ಅಧಿಕಾರಿಗಳು, ಭೂ ಸ್ವಾಧೀನ ಪ್ರಕ್ರಿಯೆ ತ್ವರಿತಗೊಳಿಸಲು ಕ್ರಮ ವಹಿಸಲು ಸಂಸದರಿಗೆ ಮನವಿ ಮಾಡಿದರು.

2022–23ನೇ ಆರ್ಥಿಕ ವರ್ಷದಲ್ಲಿ ಅನುಮೋದನೆಗೊಂಡ ಈ ಯೋಜನೆಯು ಐದು ಪ್ಲಾಟ್‌ಫಾರ್ಮ್, ಐದು ರನ್ನಿಂಗ್ ಲೈನ್, ನಾಲ್ಕು ಸ್ಟೇಬ್ಲಿಂಗ್ ಲೈನ್, ಶಂಟಿಂಗ್ ನೆಕ್, ಹೊಸ ಸ್ಟೇಷನ್ ಕಟ್ಟಡ, ಪಾದಚಾರಿ ಮೇಲ್ಸೇತುವೆ, ಸಬ್‌ವೇ, ಪಿಟ್ ಲೈನ್, ಸಿಬ್ಬಂದಿ ಕ್ವಾರ್ಟರ್‌ಗಳ ಪುನರ್ನಿರ್ಮಾಣ, ಸೇವಾ ಕಟ್ಟಡಗಳು ಮತ್ತು ಸುಧಾರಿತ ಸಿಬ್ಬಂದಿ ಸೌಲಭ್ಯಗಳನ್ನು ಒಳಗೊಂಡಿದೆ ಎಂದು ತಿಳಿಸಿದರು.

ಹೆಚ್ಚಿನ ಜನರಿಗೆ ಸೌಲಭ್ಯ ನೀಡುವ ಉದ್ದೇಶದಿಂದ ವಿರಾಜಪೇಟೆಯಿಂದ ಮಡಿಕೇರಿಗೆ ಇಂಡಿಯಾ ಪೋಸ್ಟ್ ಪ್ಯಾಸೆಂಜರ್ ರಿಸರ್ವೇಶನ್ ಸಿಸ್ಟಮ್ ಕಚೇರಿ ಸ್ಥಳಾಂತರಿಸುವ ಪ್ರಸ್ತಾವನೆ ಸೇರಿದಂತೆ ವಿವಿಧ ವಿಷಯಗಳು ಚರ್ಚಿಸಲಾಯಿತು. ಅಂತಿಮವಾಗಿ ಸಂಸದರು, ಪ್ರಯಾಣಿಕ ಸೌಲಭ್ಯಗಳ ಅನುಕೂಲತೆಗೆ ಹಲವು ಸಲಹೆಗಳನ್ನು ನೀಡಿದರು. ನೈರುತ್ಯ ರೈಲ್ವೆ ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್, ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಶಮ್ಮಾಸ್ ಹಮೀದ್ ಮತ್ತಿತರ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

---

**ಮೈಸೂರು–ಬೆಳಗೊಳ–ಕುಶಾಲನಗರ ರೈಲು ಮಾರ್ಗ ನಿರ್ಮಾಣ ಸಂಬಂಧ**

## ಶೀಘ್ರ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಲು ರಾಜ್ಯ ಸರ್ಕಾರಕ್ಕೆ ಆಗ್ರಹ

ಮೈಸೂರು, ಜು.28(ಪಿಎಂ)– ಮೈಸೂರು–ಬೆಳಗೊಳ–ಕುಶಾಲನಗರ ರೈಲು ಮಾರ್ಗ ನಿರ್ಮಾಣ ಸಂಬಂಧ ಶೀಘ್ರ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ರಾಜ್ಯ ಸರ್ಕಾರವನ್ನು ಆಗ್ರಹಿಸುವುದಾಗಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಮೈಸೂರು–ಬೆಳಗೊಳದಿಂದ ಕುಶಾಲನಗರ ರೈಲ್ವೆ ಲೈನ್ ನಿರ್ಮಾಣ ಕೆಲಸ ಆರಂಭವಾಗಬೇಕಿತ್ತು. ಇದನ್ನು ರಾಜ್ಯ ಸರ್ಕಾರ ಹಣದ ಕೊರತೆಯಿಂದ ಮುಂದೂಡಿದೆ. ಹೀಗಾಗಿ ಯಾವ ರೀತಿ ಇದನ್ನು ಅನುಷ್ಠಾನ ಮಾಡಬೇಕೆಂದು ಚರ್ಚೆ ಮಾಡುತ್ತಿದ್ದೇವೆ. ಆದರೆ ರಾಜ್ಯ ಸರ್ಕಾರ ಇದಕ್ಕೆ ಕೈಜೋಡಿಸದೇ ಇದ್ದರೆ ಕಷ್ಟವಾಗಲಿದೆ ಎಂದರು.

ಕೊಡಗಿಗೆ ರೈಲ್ವೆ ಸಂಪರ್ಕ ಕಲ್ಪಿಸಬೇಕಿರುವುದು ಅತ್ಯವಶ್ಯಕವಾಗಿದೆ. ಅಲ್ಲಿ ಅನೇಕ ಉತ್ಪನ್ನಗಳನ್ನು ಉತ್ಪಾದಿಸಲಾಗುತ್ತದೆ. ಕುಶಾಲನಗರದಲ್ಲಿ ಕೈಗಾರಿಕ ಬಡಾವಣೆ ಸಹ ಇದೆ. ಎಲ್ಲದ್ದಕ್ಕೂ ಅನುಕೂಲವಾಗುವ ದೃಷ್ಟಿಯಲ್ಲಿ ಇದೊಂದು ಒಳ್ಳೆಯ ಯೋಜನೆ. ಆದಷ್ಟು ಶೀಘ್ರದಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ರಾಜ್ಯ ಸರ್ಕಾರವನ್ನು ಆಗ್ರಹಿಸುತ್ತೇನೆ ಎಂದು ಹೇಳಿದರು.

ಶ್ರವಣಬೆಳಗೊಳದಿಂದ ಮಡಿಕೇರಿಗೆ ಹೋಗುವ ರೈಲ್ವೆ ಲೈನ್ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಒಪ್ಪಿಕೊಂಡಿದೆ. ಅವರು ಭೂ ಸ್ವಾಧೀನ ಪ್ರಕ್ರಿಯೆ ಮಾಡುತ್ತಿದ್ದಾರೆ. ಇದು ಪೂರ್ಣಗೊಂಡ ಕೂಡಲೇ ನಾವು ಕೆಲಸ ಪ್ರಾರಂಭಕ್ಕೆ ಚಾಲನೆ ನೀಡಲಿದ್ದೇವೆ ಎಂದರು. ರೈಲ್ವೆ ಟಿಕೆಟ್ ಖರೀದಿಗಾಗಿ ವಿರಾಜಪೇಟೆಯಲ್ಲಿ ಕಿಯೋಸ್ಕ್ ಸೆಂಟರ್ ಇತ್ತು. ಆದರೆ ಅಲ್ಲಿ ಕೇವಲ 2ರಿಂದ 3 ಅರ್ಜಿ ತಿಂಗಳಿಗೆ ಬರುತ್ತಿದ್ದ ಕಾರಣ ಮುಚ್ಚಲಾಗಿತ್ತು. ಆದರೆ ಇದೀಗ ಬೇಡಿಕೆಗಳು ಬರುತ್ತಿವೆ. ಹಾಗಾಗಿ ಮತ್ತೆ ಇದನ್ನು ತೆರೆಯಲು ಡಿಎಂಆರ್ ಅವರಿಗೆ ಸೂಚನೆ ಕೊಟ್ಟಿದ್ದೇನೆ ಎಂದು ಹೇಳಿದರು.

---

## ಅರ್ಹ ಅಲ್ಪಸಂಖ್ಯಾತರ ಫಲಾನುಭವಿಗಳಿಗೆ ಪಾರದರ್ಶಕವಾಗಿ ಸೌಲಭ್ಯ ನೀಡಿ

**ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಸೂಚನೆ**

ಮೈಸೂರು,ಜು.28– ಪ್ರಧಾನ ಮಂತ್ರಿಗಳ 15 ಅಂಶಗಳ ಕಾರ್ಯಕ್ರಮದಡಿ ಅಲ್ಪಸಂಖ್ಯಾತರ ಅರ್ಹ ಫಲಾನುಭವಿಗಳಿಗೆ ಪಾರದರ್ಶಕವಾಗಿ ಸೌಲಭ್ಯಗಳನ್ನು ತಲುಪಿಸಿ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಇಂದು ಜಿಲ್ಲಾಧಿಕಾರಿಗಳ ಕಛೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪ್ರಧಾನ ಮಂತ್ರಿಗಳ 15 ಅಂಶಗಳ ಕಾರ್ಯಕ್ರಮದಡಿ ಅಲ್ಪಸಂಖ್ಯಾತರ ಅಭಿವೃದ್ಧಿ ಸಂಬಂಧ ಹಮ್ಮಿಕೊಂಡಿದ್ದ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಅಲ್ಪಸಂಖ್ಯಾತರಿಗೆ ಇರುವ ತೊಂದರೆಗಳ ಕುರಿತು ಪಟ್ಟಿ ಮಾಡಿ ಸಭೆಯಲ್ಲಿ ಮಂಡಿಸುವಂತೆ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಅವರಿಗೆ ಸೂಚನೆ ನೀಡಿದರು.

ನರಸಿಂಹರಾಜ ವಿಧಾನ ಸಭಾ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಮಾತನಾಡಿ, ಸಮುದಾಯಗಳ ನಡುವೆ ಅಸಮಾನತೆಯನ್ನು ಹೋಗಲಾಡಿಸಲು ಪ್ರಧಾನ ಮಂತ್ರಿಗಳ 15 ಅಂಶಗಳ ಕಾರ್ಯಕ್ರಮದಡಿ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಈ ಸೌಲಭ್ಯಗಳನ್ನು ಅಲ್ಪಸಂಖ್ಯಾತರು ಬಳಸಿಕೊಳ್ಳಬೇಕು. ಆರೋಗ್ಯ ಶಿಕ್ಷಣ ಹಾಗೂ ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಒತ್ತು ನೀಡಬೇಕು. ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಕಮಿಟಿಯಲ್ಲಿ ಇರುವ ಸದಸ್ಯರು ಜಿಲ್ಲೆಯಲ್ಲಿ ಪ್ರವಾಸ ಮಾಡಿ ಅಲ್ಪಸಂಖ್ಯಾತರು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸಿ ಸಭೆಯಲ್ಲಿ ಚರ್ಚಿಸಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳ ಮಾಡಲು ಶಿಕ್ಷಣ ಇಲಾಖೆ ಕ್ರಮ ವಹಿಸಬೇಕು. ಉರ್ದು ಶಾಲೆಗಳಲ್ಲಿ ಮಕ್ಕಳಿಗೆ ಉರ್ದು ಭಾಷೆಯ ಜೊತೆಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಕಲಿಕೆಗೂ ಒತ್ತು ನೀಡಬೇಕು. ಜಿಲ್ಲಾ ಕೈಗಾರಿಕಾ ಕೇಂದ್ರದಿಂದ ಅಲ್ಪಸಂಖ್ಯಾತ ನಿರುದ್ಯೋಗ ಯುವಕರಿಗೆ ಸ್ವ ಉದ್ಯೋಗ ಕೈಗೊಳ್ಳಲು ಪ್ರೋತ್ಸಾಹ ಕಲ್ಪಿಸಬೇಕು. ಇದರಿಂದ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗುತ್ತದೆ.

ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಶಿಲ್ಪಾ ಮಾತನಾಡಿ, ಮೈಸೂರು ಜಿಲ್ಲೆಯಲ್ಲಿ 3,61,778 ಅಲ್ಪಸಂಖ್ಯಾತರ ಜನಸಂಖ್ಯೆ ಇದೆ. ಇವರಿಗೆ ಪ್ರಧಾನಮಂತ್ರಿಗಳ 15 ಅಂಶಗಳ ಕಾರ್ಯಕ್ರಮದಡಿ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಸಮಿತಿಯ ನಾಮ ನಿರ್ದೇಶಿತ ಸದಸ್ಯರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



---

### ಹಿರಿಯ ನಾಗರಿಕರ 'ದಂತಪಕ್ತಿ' ಯೋಜನೆಗೆ ವಯೋಮಿತಿ ಇಳಿಕೆ ಮಾಡಿದ ಸರ್ಕಾರ

ಬೆಂಗಳೂರು, ಜು.28– ದಂತ ಭಾಗ್ಯ ಯೋಜನೆ ಸೌಲಭ್ಯ ಪಡೆಯಲು ಹಿರಿಯ ನಾಗರಿಕರ ವಯೋಮಿತಿ ಯನ್ನು 60 ವರ್ಷದಿಂದ 45 ವರ್ಷಕ್ಕೆ ಇಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಅದೇ ವೇಳೆ ಸಂಪೂರ್ಣ ದಂತಪಕ್ತಿಗೆ 750 ರೂ. ರಿಂದ 2000 ರೂ.ಗೆ ಹಾಗೂ ಭಾಗಶಃ ದಂತ ಪಂಕ್ತಿಗೆ 300 ರೂ. ರಿಂದ 1000 ರೂ.ಗೆ ಹೆಚ್ಚಳ ಮಾಡಿ ಆದೇಶ ಹೊರಡಿಸಲಾಗಿದೆ.

ದಂತ ಭಾಗ್ಯ ಯೋಜನೆಯಲ್ಲಿ ದಂತಪಕ್ತಿಗಳನ್ನು ತಯಾರಿಸುವ ಸಾಮಾಗ್ರಿಗಳು, ಕನ್ಸೂಮಬಲ್ ಮತ್ತು ಇತರೆ ತಯಾರಿಕ ವೆಚ್ಚಗಳು ಹೆಚ್ಚಾಗುತ್ತಿರುವುದರಿಂದ ಪ್ರಸ್ತುತ ದರಗಳನ್ನು ಪರಿಷ್ಕರಿಸಬೇಕಾಗುತ್ತದೆ. ಆದುದರಿಂದ ದಂತಭಾಗ್ಯ ಯೋಜನೆಯಡಿ ಸಂಪೂರ್ಣ ದಂತಪಕ್ತಿಗೆ ನೀಡಲಾಗುತ್ತಿರುವ ರೂ. 2000 ಗಳನ್ನು ರೂ. 3000 ಗಳಿಗೆ ಹೆಚ್ಚಿಸಲು, ರೂ. 50.00 ಲಕ್ಷಗಳ ಹೆಚ್ಚುವರಿ ದಂತಭಾಗ್ಯದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕೋರಲಾಗಿದೆ. ದಂತ ಭಾಗ್ಯ ಯೋಜನೆಯ ದಂತ ಪಕ್ತಿಗಳ ಯೂನಿಟ್ ದರಗಳ ಹೆಚ್ಚಳದಿಂದ ಉಂಟಾಗುವ ಹೆಚ್ಚುವರಿ ಮೊತ್ತ ವನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಇಲಾಖೆಗೆ ಒದಗಿಸಲಾದ ಅನುದಾನಕ್ಕೆ ಸೀಮಿತಗೊಳಿಸಿ ವೆಚ್ಚ ಭರಿಸುವ ಷರತ್ತಿಗೊಳಪಟ್ಟು ಸಹಮತಿ ನೀಡಲಾಗಿದೆ ಎಂದು ಆದೇಶ ಪತ್ರದಲ್ಲಿದೆ.

### ವಾಣಿಜ್ಯ ತೆರಿಗೆಗಳ ಇಲಾಖೆಯಿಂದ ಹೆಲ್ಪ್‌ಲೈನ್ ಆರಂಭ

ಮೈಸೂರು, ಜು.28(ಪಿಎಂ)– ಆನ್‌ಲೈನ್ ಪೇಮೆಂಟ್ (ಯುಪಿಐ, ಫೋನ್ ಪೇ, ಪೇಟಿಎಂ) ಆಧಾರದಲ್ಲಿ ವರ್ತಕರಿಗೆ ಹೊರಡಿಸಲಾದ ನೋಟಿಸ್‌ಗಳು ಅಥವಾ ಜಿಎಸ್‌ಟಿ ನೋಂದಣಿ ಸಂಬಂಧ ಮಾಹಿತಿ ಒದಗಿಸಲು ಅಥವಾ ಈ ಕುರಿತಂತೆ ಸಮಸ್ಯೆಗಳಿಗೆ ಸ್ಪಂದಿಸಲು ವಾಣಿಜ್ಯ ತೆರಿಗೆಗಳ ಇಲಾಖೆ ಮೈಸೂರು ವಿಭಾಗದ ವತಿಯಿಂದ (ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳ ವ್ಯಾಪ್ತಿಗೆ ಮಾತ್ರ ಸಂಬಂಧಿಸಿದಂತೆ) ಹೆಲ್ಪ್‌ಲೈನ್ (0821–2420360) ಆರಂಭಿಸಲಾಗಿದೆ. ಕರ್ತವ್ಯದ ದಿನಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಹೆಲ್ಪ್‌ಲೈನ್ ಸಂಖ್ಯೆ ಸಂಪರ್ಕಿಸಬಹುದು ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

---

## ದರ್ಶನ್ ಅಭಿಮಾನಿಗಳ ವಿರುದ್ಧ ಪೊಲೀಸ್ ಆಯುಕ್ತರಿಗೆ ರಮ್ಯಾ ದೂರು

ಬೆಂಗಳೂರು, ಜು.28– ರೇಣುಕಾಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗಲಿ ಎಂದು ಹೇಳಿದ್ದ ರಮ್ಯಾ ವಿರುದ್ಧ ದರ್ಶನ್ ಅಭಿಮಾನಿಗಳು ಟ್ರೋಲ್ ಮಾಡಲು ಆರಂಭಿಸಿದರು. ಸೋಶಿಯಲ್ ಮೀಡಿಯಾದಲ್ಲಿ ರಮ್ಯಾ ಅವರಿಗೆ ಅಶ್ಲೀಲವಾಗಿ ಕಮೆಂಟ್ ಮಾಡಿ, ಅಸಭ್ಯ ಸಂದೇಶಗಳನ್ನು ಕಳಿಸಲಾಗಿದೆ. ದರ್ಶನ್ ಅಂತಹ ಫ್ಯಾನ್ಸ್ ವಿರುದ್ಧ ಬೆಂಗಳೂರು ಪೊಲೀಸ್ ಕಮಿಷನರ್ ಕಚೇರಿಯಲ್ಲಿ ರಮ್ಯಾ ದೂರು ಸಲ್ಲಿಸಿದ್ದಾರೆ.



> ಪೊಲೀಸರು ಏನು ಕ್ರಮ ತೆಗೆದುಕೊಳ್ಳಬೇಕು ತೆಗೆದುಕೊಳ್ಳುತ್ತಾರೆ. ಸೈಬರ್ ಕ್ರೈಂ ಪೊಲೀಸರು ಸೆನ್ಸಿಟೀವ್ ಇರುವ ವ್ಯಕ್ತಿಗಳನ್ನು ಬ್ಲಾಕ್ ಮಾಡ್ತಾರೆ. ಇಲ್ಲವೇ ದೂರು ಕೊಟ್ಟರೆ ಕ್ರಮ ಕೈಗೊಳ್ಳುತ್ತಾರೆ. ಈ ಬಗ್ಗೆ ದೂರು ಕೊಡದಿದ್ದರೂ ಕೆಲವೊಮ್ಮೆ ಸುಮೋಟೋ ಪ್ರಕರಣ ದಾಖಲಿಸುತ್ತಾರೆ. ಆದರೆ ದೂರು ಬಂದರೆ ಸೀರಿಯಸ್ ಆಗಿ ಕ್ರಮ ಆಗುತ್ತದೆ. ಇದಕ್ಕೆಲ್ಲಾ ಸರ್ಕಾರ ನಿರ್ದೇಶನ ಕೊಡಲ್ಲ. ಆ ವ್ಯಾಪ್ತಿಯ ಪೊಲೀಸರು ಕ್ರಮ ಕೈಗೊಳ್ತಾರೆ.
>
> – ಡಾ.ಜಿ.ಪರಮೇಶ್ವರ್, ಗೃಹ ಸಚಿವ

ರೇಣುಕಾಸ್ವಾಮಿ ಮಾಡಿದ್ದ ಸಂದೇಶಕ್ಕೂ ದರ್ಶನ್ ಅಭಿಮಾನಿಗಳು ಮಾಡುವ ಸಂದೇಶಕ್ಕೂ ಯಾವುದೇ ವ್ಯತ್ಯಾಸ ಇಲ್ಲ. ಇಂತಹ ಸ್ತ್ರೀದ್ವೇಷಿ ಮನಸ್ಥಿತಿಯ ಕಾರಣದಿಂದಲೇ ಸಮಾಜದಲ್ಲಿ ಅತ್ಯಾಚಾರ, ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚಾಗುತ್ತಿವೆ ಎಂದು ರಮ್ಯಾ ಹೇಳಿದ್ದಾರೆ.

ಮತ್ತೊಂದೆಡೆ ಅಶ್ಲೀಲ ಕಮೆಂಟ್‌ಗಳ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ರಾಜ್ಯ ಮಹಿಳಾ ಆಯೋಗ ಕೂಡ ಪೊಲೀಸ್ ಆಯುಕ್ತರಿಗೆ ಸೂಚಿಸಿದೆ. ಸೆಲೆಬ್ರಿಟಿಯಾದ ನಮಗೆ ಟ್ರೋಲ್ ಇದ್ದೇ ಇರುತ್ತದೆ. ಆದರೆ ಈ ಮಟ್ಟಕ್ಕೆ ನನಗೆ ಯಾವಾಗಲೂ ಅನುಭವ ಆಗಿರಲಿಲ್ಲ. ರೇಣುಕಾಸ್ವಾಮಿ ಸಂದೇಶ ಕಳಿಸಿದ್ದಕ್ಕೂ ದರ್ಶನ್ ಫ್ಯಾನ್ಸ್ ಸಂದೇಶ ಕಳಿಸಿದ್ದಕ್ಕೂ ಯಾವುದೇ ವ್ಯತ್ಯಾಸ ಇಲ್ಲ ಎನಿಸಿತು. ನನಗೆ ಈ ರೀತಿ ಕಳಿಸಿದ್ದಾರೆ ಎಂದರೆ ಸಾಮಾನ್ಯ ಹೆಣ್ಣು ಮಕ್ಕಳಿಗೆ ಇನ್ನು ಯಾವ ರೀತಿ ಸಂದೇಶ ಕಳಿಸಿರಬಹುದು. ನಮ್ಮ ಸಮಾಜ ಎಷ್ಟು ಕೀಳು ಮಟ್ಟಕ್ಕೆ ಬಂದಿದೆ ಅಂತ ನನಗೆ ಬೇಸರ ಆಯಿತು. ಇದನ್ನು ಸುಮ್ಮನೆ ಬಿಡಬಾರದು ಅಂತ ನನಗೆ ಅನಿಸಿತು. ಹಾಗಾಗಿ ನಾನು ಕಮೀಷನರ್ ಸಾಹೇಬರಿಗೆ ದೂರು ಕೊಟ್ಟಿದ್ದೇನೆ ಎಂದು ನಟಿ ರಮ್ಯಾ ಅವರು ಹೇಳಿದ್ದಾರೆ.

---

# ಆ.1ರಿಂದ ಮೈಸೂರು ಮೃಗಾಲಯ, ಕಾರಂಜಿಕೆರೆ ಪ್ರವೇಶ ಶುಲ್ಕ ಹೆಚ್ಚಳ

ಮೈಸೂರು,ಜು.28(ಎಂಟಿವೈ)– ವಿದೇಶಿ ಪ್ರಾಣಿಗಳ ಆಗಮನ ಹಾಗೂ ಮೃಗಾಲಯದ ನಿರ್ವಹಣೆ ವೆಚ್ಚ ಸರಿದೂಗಿಸುವ ನಿಟ್ಟಿನಲ್ಲಿ ಮೃಗಾಲಯ ಹಾಗೂ ಕಾರಂಜಿಕೆರೆಯ ಪ್ರವೇಶ ಶುಲ್ಕವನ್ನು ಹೆಚ್ಚಳ ಮಾಡಲು ಕರ್ನಾಟಕ ಮೃಗಾಲಯ ಪ್ರಾಧಿಕಾರ ನಿರ್ಧರಿಸಿದ್ದು, ಆ.1ರಿಂದ ಹೊಸ ದರ ಜಾರಿಯಾಗಲಿದೆ.





ಇತ್ತೀಚೆಗೆ ನಡೆದ ಕರ್ನಾಟಕ ಮೃಗಾಲಯ ಪ್ರಾಧಿಕಾರದ 159ನೇ ಆಡಳಿತ ಮಂಡಳಿ ಸಭೆಯಲ್ಲಿ ಮೃಗಾಲಯ ಹಾಗೂ ಕಾರಂಜಿಕೆರೆಯ ಪ್ರವೇಶ ಶುಲ್ಕ ಪರಿಷ್ಕರಿಸುವ ನಿರ್ಧಾರ ಕೈಗೊಳ್ಳಲಾಗಿತ್ತು. ಮೈಸೂರಿನ ಚಾಮರಾಜೇಂದ್ರ ಮೃಗಾಲಯ ಮತ್ತು ಕಾರಂಜಿಕೆರೆಗೆ ನಾಲ್ಕು ವರ್ಷದ ಹಿಂದೆ ಪ್ರವೇಶ ಶುಲ್ಕ ಪರಿಷ್ಕರಿಸಲಾಗಿತ್ತು. ಕೋವಿಡ್ ಸಂಕಷ್ಟದಿಂದ ಹೊರ ಬರಲು ತಿಣುಕಾಡಿದ್ದ ಮೈಸೂರು ಮೃಗಾಲಯಕ್ಕೆ ಪ್ರಾಣಿ ಪ್ರಿಯರು, ಸಾರ್ವಜನಿಕರು ನೆರವು ನೀಡಿದ್ದರು. ಆರ್ಥಿಕ ಸ್ವಾಯತ್ತತೆ ಹೊಂದಿರುವ ಮೈಸೂರು ಮೃಗಾಲಯದ ನಿರ್ವಹಣೆಗೆ ಸರ್ಕಾರದಿಂದ ಯಾವುದೇ ಅನುದಾನ ಬರುವುದಿಲ್ಲ. ರಾಜ್ಯದ ವಿವಿಧ ಮೃಗಾಲಯಗಳಿಗೂ ಮೈಸೂರು ಮೃಗಾಲಯ ಮಾತೃ ಸಂಸ್ಥೆಯಾಗಿದ್ದು, ಇಲ್ಲಿ ಪ್ರವಾಸಿಗರ ಪ್ರವೇಶ ಶುಲ್ಕದಿಂದ ಸಂಗ್ರಹವಾಗುವ ಆರ್ಥಿಕ ಸಂಪನ್ಮೂಲದಿಂದ ಸಿಬ್ಬಂದಿ ವೇತನ, ಪ್ರಾಣಿ–ಪಕ್ಷಿಗಳಿಗೆ ಆಹಾರ, ಆರೋಗ್ಯ ಹಾಗೂ ನಿರ್ವಹಣೆ ಮಾಡಲಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಮೃಗಾಲಯದ ನಿರ್ವಹಣಾ ವೆಚ್ಚ ಹೆಚ್ಚಾಗಿರುವುದರಿಂದ ಹಾಗೂ ಇತ್ತೀಚೆಗೆ ವಿದೇಶದಿಂದ ಗೊರಿಲ್ಲಾ, ಜಾಗ್ವಾರ್, ಆಫ್ರಿಕಾದ ಬೇಟೆ ಚಿರತೆ ಸೇರಿದಂತೆ ಇನ್ನಿತರ ಅಪರೂಪದ ಪ್ರಾಣಿಗಳನ್ನು ಮೈಸೂರು ಮೃಗಾಲಯಕ್ಕೆ ತರಲಾಗಿದೆ. ಇದರಿಂದ ನಿರ್ವಹಣಾ ವೆಚ್ಚ ಸರಿದೂಗಿಸುವ ನಿಟ್ಟಿನಲ್ಲಿ ಮೃಗಾಲಯ ಹಾಗೂ ಕಾರಂಜಿಕೆರೆಯ ಪ್ರವೇಶ ಶುಲ್ಕ ಹೆಚ್ಚಳ ಮಾಡುವುದಕ್ಕೆ ಆಡಳಿತ ಮಂಡಳಿ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿಗೆ ಪಡೆಯಲಾಗಿದೆ.

**ಆ.1ರಿಂದ ಹೊಸ ದರ ಅನ್ವಯ:** ಕರ್ನಾಟಕ ಮೃಗಾಲಯ ಪ್ರಾಧಿಕಾರ ಮೈಸೂರು ಮೃಗಾಲಯ, ಕಾರಂಜಿಕೆರೆ ಪ್ರವೇಶ ಶುಲ್ಕ ಪರಿಷ್ಕರಿಸಿರುವ ಹೊಸ ದರ ಆ.1ರಿಂದ ಜಾರಿಗೊಳಿಸಲಾಗುತ್ತದೆ. ಮೃಗಾಲಯಕ್ಕೆ ವಯಸ್ಕರಿಗೆ ಹೊಸದರ 120 ರೂ.( ಹಳೆ ದರ 100), 5ರಿಂದ 12 ವರ್ಷದೊಳಗಿನ ಮಕ್ಕಳಿಗೆ 60 ರೂ.(50), ಕಾರಂಜಿಕೆರೆಗೆ ವಯಸ್ಕರಿಗೆ 60 ರೂ., 5 ರಿಂದ 12 ವರ್ಷದೊಳಗಿನ ಮಕ್ಕಳಿಗೆ 30 ರೂ., ಮೃಗಾಲಯ ಹಾಗೂ ಕಾರಂಜಿಕೆರೆ ಕಾಂಬೋ ಟಿಕೆಟ್ ವಯಸ್ಕರಿಗೆ 150 ರೂ., ಮಕ್ಕಳಿಗೆ ಕಾಂಬೋ ಟಿಕೆಟ್ 80 ರೂ., ದರ ನಿಗದಿ ಮಾಡಲಾಗಿದೆ.

**ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ರಿಯಾಯಿತಿ ದರ:** ಮೃಗಾಲಯ ಹಾಗೂ ಕಾರಂಜಿಕೆರೆಗೆ ಶಾಲಾ–ಕಾಲೇಜು ವತಿಯಿಂದ ಬರುವ ವಿದ್ಯಾರ್ಥಿಗಳಿಗೆ ರಿಯಾಯಿತಿ ದರ ಟಿಕೆಟ್ ನೀಡಲಾಗುತ್ತಿದ್ದು, ಹೊಸ ದರದಂತೆ ಎಲ್‌ಕೆಜಿ, ಯುಕೆಜಿ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ, 1 ರಿಂದ 7ನೇ ತರಗತಿ ವಿದ್ಯಾರ್ಥಿಗಳಿಗೆ ತಲಾ 40 ರೂ., 8ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ತಲಾ 50 ರೂ., 50 ವಿದ್ಯಾಥಿಗಳ ತಂಡಕ್ಕೆ ಇಬ್ಬರು ಶಿಕ್ಷಕರಿಗೆ ತಲಾ 50 ರೂ. ಟಿಕೆಟ್ ದರ ನಿಗಧಿ ಮಾಡಲಾಗಿದೆ. ಮೃಗಾಲಯದಲ್ಲಿ ಪ್ರಾಣಿ ವೀಕ್ಷಣೆಗೆ ಬ್ಯಾಟರಿ ಚಾಲಿತ ವಾಹನದಲ್ಲಿ ತೆರಳಲು ವಯಸ್ಕರಿಗೆ 240 ರೂ., 5ರಿಂದ 12 ವರ್ಷದೊಳಗಿನ ಮಕ್ಕಳಿಗೆ ಹಾಗೂ ಹಿರಿಯ ನಾಗರೀಕರಿಗೆ 180 ರೂ.ದರ ನಿಗಧಿ ಮಾಡಿರುವುದಾಗಿ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಚುನಾವಣಾ ಕಾರ್ಯಕ್ಕೆ ಶಿಕ್ಷಕೇತರರ ಬಳಕೆ: ಶಾಲಿನಿ ರಜನೀಶ್

ಬೆಂಗಳೂರು, ಜು.28–ಚುನಾವಣಾ ಕರ್ತವ್ಯಗಳಿಗೆ ಶಿಕ್ಷಕರನ್ನು ಹೊರತುಪಡಿಸಿ ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಹಾಗೂ ಬೋಧಕೇತರ ಸಿಬ್ಬಂದಿಯನ್ನು ನಿಯೋಜಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಎಲ್ಲ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಮತದಾರರ ಪಟ್ಟಿ ಪರಿಷ್ಕರಣಾ ಕಾರ್ಯ ಹಾಗೂ ಮತಗಟ್ಟೆ ಅಧಿಕಾರಿಗಳಾಗಿ ಶಿಕ್ಷಕರನ್ನು ನೇಮಿಸುತ್ತಿರುವುದರಿಂದ ನಿತ್ಯದ ಪಾಠಗಳಿಗೆ ತೊಂದರೆಯಾಗುತ್ತಿದೆ. ಇದರಿಂದ ಮಕ್ಕಳ ಕಲಿಕೆಯ ಮೇಲೆ ಪರಿಣಾಮ ಬೀರುತ್ತಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮುಖ್ಯ ಚುನಾವಣಾಧಿಕಾರಿಗೆ ಪತ್ರ ಬರೆದು, ಮನವಿ ಮಾಡಿದ್ದರು. ಸುಪ್ರೀಂಕೋರ್ಟ್ ಸಹ ರಜಾ ದಿನಗಳು, ಬೋಧಕೇತರ ಅವಧಿಯಲ್ಲಿ ಶಿಕ್ಷಕರನ್ನು ಚುನಾವಣಾ ಕಾರ್ಯಕ್ಕೆ ನಿಯೋಜಿಸಬಹುದು ಎಂದಿದೆ. ಹಾಗಾಗಿ, ಬೋಧಕೇತರ ಹಾಗೂ ಇತರೆ ಇಲಾಖೆಯ ಸಿಬ್ಬಂದಿಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಚುನಾವಣಾ ಕಾರ್ಯಗಳಿಗೆ ಬಳಸಿಕೊಳ್ಳುವಂತೆ ಮುಖ್ಯಕಾರ್ಯದರ್ಶಿಗಳು ಸೂಚಿಸಿದ್ದಾರೆ.

## ನಕ್ಕರೆ ಅದೇ ಸ್ವರ್ಗ

ಶಿಕ್ಷಕ : ಲೋ... ನಾಗೇಶ ಜನರೇಷನ್ ಅಂದರೇನು?
ನಾಗೇಶ : ಜನರಿಗೆ ರೇಷನ್ ಕೊಡೊ ಡಿಪೋ ಸಾರ್!

ಮೈಸೂರು ಮಿತ್ರ
ಮಂಗಳವಾರ, 29 ಜುಲೈ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತ ವಾಹಿನಿ.........

ಸುಳ್ಳಿನಿಂದ ಪಡೆದ ಸ್ಥಾನ, ದರ್ಪದಿಂದ ಸಂಪಾದಿಸಿದ ಗೌರವ, ಮೋಸದಿಂದ ಗಳಿಸಿದ ಹಣ ಎಂದೂ ಶಾಶ್ವತವಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಂತ್ರಕ್ಕಿಂತ ಉಗುಳೇ ಹೆಚ್ಚು.

## ನಿಮ್ಮ ಪತ್ರಗಳು

### ■ ರಾಜ ರಾಜರೇ, ರಾಜಕಾರಣಿ ರಾಜಕಾರಣಿಯೇ...

ಮಾನ್ಯರೆ,

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪುತ್ರ, ವಿಧಾನಪರಿಷತ್ ಸದಸ್ಯರೂ ಆದ ಡಾ.ಯತೀಂದ್ರ ಸಿದ್ದರಾಮಯ್ಯನವರು, ನನ್ನ ತಂದೆ ಸಿದ್ದರಾಮಯ್ಯನವರು ಮೈಸೂರಿಗೆ ನಾಲ್ವಡಿ ಕೃಷ್ಣ ರಾಜ ಒಡೆಯರ್ ಅವರಿಗಿಂತಲೂ ಹೆಚ್ಚಿನ ಅನುದಾನ ಕೊಟ್ಟಿದ್ದಾರೆ, ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ ಎಂದು ಮತ್ತೊಮ್ಮೆ ವಿವಾದವೆಬ್ಬಿಸಿದ್ದಾರೆ. ಇದು ಮೈಸೂರಿನ ಮಹಾರಾಜರ ಬಗ್ಗೆ ಅವರಿಗಿರುವ ಅಸಹನೆಯನ್ನು ತೋರಿಸುತ್ತದೆ. ಹಿಂದೊಮ್ಮೆ ಸಿದ್ದರಾಮಯ್ಯನವರು ಮೈಸೂರು ಮಹಾರಾಜರ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮಾತನಾಡುತ್ತಾ, ರಾಜರೇನು ಅವರ ಹಣದಿಂದ ಮಾಡಿರುವರೇ, ಜನರ ತೆರಿಗೆ ಹಣದಿಂದ ಮಾಡಿದ್ದಾರೆ ಎಂದು ಹೇಳಿಕೆ ನೀಡಿ, ತಮ್ಮ ಅಸಹನೆಯನ್ನು ತೋರ್ಪಡಿಸಿದ್ದರು. ಈಗ ಅದನ್ನು ಅವರ ಪುತ್ರ ಹೇಳುತ್ತಿದ್ದಾರೆ. 10 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ನೀಡಿ ನಾನು ಎಲ್ಲರಿಗೂ ಅನ್ನ ನೀಡಿದೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ಅದರಲ್ಲಿ 5 ಕೆಜಿ ಅಕ್ಕಿ ಕೇಂದ್ರ ಸರ್ಕಾರ ಕೊಡುತ್ತಿದೆ ಎಂದು ಎಲ್ಲಿಯೂ ಹೇಳುವುದಿಲ್ಲ. ಹಾಗೆಂದು ಹಿಂದೆ ಪಡಿತರ ಅಕ್ಕಿ ನೀಡುತ್ತಿರಲಿಲ್ಲವೇ? ಆಗಲೂ 5 ಕೆಜಿ ಅಕ್ಕಿಯನ್ನು ಕೊಡುತ್ತಿದ್ದರು. ಆದರೆ ದುರುಪಯೋಗವಾಗಬಾರದೆಂದು ಕೆಜಿಗೆ 2 ರೂ ದರ ನಿಗದಿ ಇತ್ತು. ಇದೆಲ್ಲವೂ ಕರ್ನಾಟಕದ ಜನರ ತೆರಿಗೆ ಹಣ ಎನ್ನುವುದನ್ನು ಮರೆಯುತ್ತಾರೆ. ಹಾಗಾದರೆ ಅವರ ತಂದೆ ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಇವರ ಸ್ವಂತ, ಹಣದಿಂದ, ಇವರ ಆಸ್ತಿಯನ್ನು ಮಾರಿ, ಒತ್ತೇ ಇಟ್ಟು ಮಾಡಿರುವರೇ? ರಾಜರಲ್ಲಿದ್ದ ದೂರ ದೃಷ್ಟಿ, ನಿಸ್ವಾರ್ಥ ಮನೋಭಾವ ಇವರಲ್ಲಿದೆಯೇ?

ಮುಖ್ಯಮಂತ್ರಿ ಕುರ್ಚಿ ವಿವಾದ ಆರಂಭವಾದಾಗ 5 ವರ್ಷ ನಮ್ಮ ತಂದೆಯೇ ಮುಖ್ಯಮಂತ್ರಿ ಎಂದರು. ಮುಡಾ ವಿವಾದದ ಪ್ರಕರಣ ಕೋರ್ಟ್‌ನಲ್ಲಿ ನಮ್ಮಂತೆಯೇ ಆಗುತ್ತದೆ. ನಂತರ ನ್ಯಾಯಾಲಯದ ಮುಖಾಂತರವೇ ಆ 14 ಸೈಟ್‌ಗಳನ್ನು ವಾಪಾಸ್ ಪಡೆಯುತ್ತೇವೆ ಎಂದರು.

ಇದೀಗ ಇವರ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸಿದ್ದರಾಮಯ್ಯನವರು ಮಹಾರಾಜರು ಕೊಡುಗೆಗಳ ಮಾತನಾಡದೆ, ನಾವು ಬಿಜೆಪಿಯವರಿಗಿಂತ ಹೆಚ್ಚು ಅಭಿವೃದ್ಧಿ ಕೆಲಸ ಮಾಡಿದ್ದೇವೆ ಎಂದು ತೇಲಿಕೆಯ ಉತ್ತರ ನೀಡಿದ್ದಾರೆ. ಮಹಾರಾಜರ ಕೊಡುಗೆಗಳ ಬಗ್ಗೆ ಮಾತನಾಡಲು, ಹಿಂಜರಿಕೆ ಏಕೆ? ಮಗನ ಹೇಳಿಕೆಗೆ ಸೂಕ್ತ ರೀತಿ ಪ್ರತಿಕ್ರಿಯಿಸಿ, ವಿವಾದಕ್ಕೆ ತೆರೆ ಎಳೆಯಬಹುದಿತ್ತಲ್ಲವೆ?

ಇವರ ಕೊಡುಗೆ ಏನು ಎನ್ನುವುದು ಮೈಸೂರಿನ ಜನರಿಗೆ ಗೊತ್ತಿದೆ. ಮೈಸೂರು ಮಹಾರಾಜರ ಕೊಡುಗೆ ಏನು ಎನ್ನುವುದು ಇಡೀ ವಿಶ್ವಕ್ಕೇ ಗೊತ್ತಿದೆ. ಸಾಹಿತಿ ಪ್ರೊ.ಕೃಷ್ಣೇಗೌಡರು ಉಲ್ಲೇಖಿಸಿರುವಂತೆ, ಲಂಡನ್‌ನಲ್ಲಿ ನಡೆದ ಮೊದಲನೇ ದುಂಡು ಮೇಜಿನ ಸಭೆಯಲ್ಲಿ, ಜಾನ್ ಸ್ಯಾಂಕಿ ಎನ್ನುವವರು, 'ಮೈಸೂರ್ ಇಸ್ ದಿ ಬೆಸ್ಟ್ ಆಡ್ಮಿನಿಸ್ಟ್ರೇಟಿವ್ ಸ್ಟೇಟ್ ಇನ್ ದಿ ವರ್ಲ್ಡ್' ಎಂದು ಕೊಂಡಾಡಿದ್ದಾರೆ. ನಾಲ್ವಡಿಯವರು ಕಟ್ಟಿದ ಮೈಸೂರು ಇಡೀ ಏಷ್ಯಾದಲ್ಲೇ ಶ್ರೇಷ್ಠ ಯೋಜಿತ ನಗರ ಎಂದು ಜಗತ್ತಿನ ಹಲವು ನಗರ ಯೋಜಕರು ಶ್ಲಾಘಿಸಿದ್ದಾರೆ. ನಾಲ್ವಡಿಯವರ ನಿಧನ ವಾರ್ತೆಯನ್ನು ಪ್ರಕಟಿಸಿದ ದಿ ಟೈಮ್ಸ್ ಪತ್ರಿಕೆ ಇವರು ಆಡಳಿತ ಮತ್ತು ದಾರ್ಶನಿಕತೆಯಲ್ಲಿ ಜಗತ್ತಿನ ಯಾವ ದೊರೆಗೂ ಎರಡನೆಯವರಲ್ಲ ಎಂದು ಕೊಂಡಾಡಿದೆ.ಇಂತಹ ಯೋಗ್ಯತೆ ಯಾರಿಗಾದರೂ ಇದೆಯೇ? ರಾಜರು ರಾಜರೇ, ರಾಜಕಾರಣಿ, ರಾಜಕಾರಣಿಯೇ ಎನ್ನುವುದು ಮಾತ್ರ ಅಲ್ಲಗಳೆಯಲಾಗದ ಸತ್ಯ.

**–ಮುಳ್ಳೂರು ಪ್ರಕಾಶ್, ಕನಕದಾಸ ನಗರ, ಮೈಸೂರು.**

### ■ ಪ್ರಯಾಣದ ವೇಳೆ ರೈಲು, ಬಸ್‌ಗಳಲ್ಲಿ ಸೆಲ್‌ಫೋನ್ 'ಕಿರಿಕಿರಿ'

ಮಾನ್ಯರೆ,

ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ರೈಲು ನಿಲ್ದಾಣ, ಆಸ್ಪತ್ರೆಗಳೂ ಸೇರಿದಂತೆ ರೈಲು, ಬಸ್ಸುಗಳಲ್ಲಿ ಪ್ರಯಾಣದ ಸಮಯದಲ್ಲಿ ಇತ್ತೀಚಿನ ದಿನಗಳಲ್ಲಿ ಕೆಲವರು ತಮ್ಮ ತಮ್ಮ ಸೆಲ್ ಫೋನ್‌ಗಳನ್ನು ಕೈಯ್ಯಲ್ಲಿ ಹಿಡಿದು ಅತಿಯಾದ ಕರ್ಕಶ ಶಬ್ದಗಳನ್ನು ಬಳಸಿ ಟಿ.ವಿ ನೇರ ಪ್ರಸಾರ, ಮುಖಪುಟದ ವಿಡಿಯೋ, ರಾಜಕೀಯ ಸಂಭಾಷಣೆ, ಚಲನಚಿತ್ರ ಗೀತೆ, ಭಕ್ತಿಗೀತೆ, ರೇಡಿಯೋ ಹಾಗೂ ರೀಲ್ಸ್‌ಗಳನ್ನು ನೋಡುತ್ತಿದ್ದು ಇದರಿಂದಾಗಿ ಅಕ್ಕಪಕ್ಕವಿರುವ ಪ್ರಯಾಣಿಕರು, ಸಾರ್ವಜನಿಕರಿಗೆ ತೀವ್ರ ಕಿರಿಕಿರಿ ಉಂಟಾಗುತ್ತಿದ್ದು, ಇದನ್ನು ಪ್ರಶ್ನಿಸುವವರ ವಿರುದ್ಧವೇ ಹರಿಹಾಯುವುದು, ಹಲ್ಲೆ ನಡೆಸುವ ಪ್ರಕರಣಗಳ ಉದಾಹರಣೆಯೂ ಸಾಕಷ್ಟಿವೆ. ಇವು ದಿನನಿತ್ಯ ನಡೆಯುತ್ತಲೇ ಇವೆ. ಹಾಗಾಗಿ ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳು ಸಾರ್ವಜನಿಕ ಸ್ಥಳಗಳಲ್ಲಿ ಫೋನ್‌ನಿಂದ ಹೊರಸೂಸುವ ಅತಿಯಾದ ಧ್ವನಿಯನ್ನು ನಿಷೇಧಿಸುವುದೂ ಸೇರಿದಂತೆ ಇದರ ಬಗ್ಗೆ ಎಲ್ಲರಿಗೂ ತಿಳಿಯಲು ಭಿತ್ತಿಪತ್ರ ಅಂಟಿಸಿ ಜಾಗೃತಿ ಮೂಡಿಸಿ, ಅದನ್ನು ಪಾಲಿಸದವರ ವಿರುದ್ಧ ದಂಡ (ಫೈನ್) ಪ್ರಯೋಗ ನಡೆಸಲಿ ಎಂಬುದು ನನ್ನ ಮನವಿ. **– ಪ್ರದೀಪ್ ಜಿ., ಮೈಸೂರು.**

### ■ ಸೈನಿಕ ಉದ್ಯಾನವನ ಅಭಿವೃದ್ಧಿಪಡಿಸಿ

ಮಾನ್ಯರೆ,

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹಾಗೂ ಅವರ ಪುತ್ರ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡರು ಮೈಸೂರು ನಗರದ ಡಿ–ಬ್ಲಾಕ್ ಬಡಾವಣೆಯ ಸೈನಿಕ ಉದ್ಯಾನವನವನ್ನು ಉದ್ಘಾಟಿಸಿದ್ದರು. ಆದರೆ ಈಗ ಈ ಉದ್ಯಾನವನದ ಸಮರ್ಪಕ ನಿರ್ವಹಣೆ ಇಲ್ಲದೆ ಅನೈತಿಕ ಚಟುವಟಿಕೆಗಳ ತಾಣವಾಗಿದೆ. ಹಾವುಗಳು, ಹಸು, ನಾಯಿಗಳು ಇನ್ನಿತರ ಪ್ರಾಣಿಗಳು ಉದ್ಯಾನವವನ್ನು ಹಾಳು ಮಾಡುತ್ತಿವೆ. ಇತ್ತ ಗಮನ ಹರಿಸಿ ಉದ್ಯಾನವನಕ್ಕೆ ಬೇಕಾದ ಅಗತ್ಯ ಮೂಲ ಸೌಕರ್ಯಗಳಾದ ಮಕ್ಕಳ ಆಟದ ಪರಿಕರ, ಹೆಚ್ಚುವರಿ ದೀಪಗಳು, ವಾಚ್‌ಮನ್, ಜಿಮ್ ಸಾಮಗ್ರಿಗಳು, ಹೆಚ್ಚಿನ ಸಸಿಗಳನ್ನು ನೆಡುವುದು ಸೇರಿದಂತೆ ಉದ್ಯಾನವನದ ಕಾಂಪೌಂಡ್ ಅನ್ನು ದುರಸ್ತಿಗೊಳಿಸಿ, ಕೂರಲು ಕುರ್ಚಿಗಳ ವ್ಯವಸ್ಥೆ ಮಾಡುವಂತೆ ದಟ್ಟಗಳ್ಳಿ, ಕನಕದಾಸನಗರ 3ನೇ ಹಂತ, ಡಿ–ಬ್ಲಾಕ್, ಲಕ್ಷ್ಮಿ ದೇವಸ್ಥಾನದ ಸುತ್ತಮುತ್ತಲಿನ ನಿವಾಸಿಗಳು ಶಾಸಕ ಜಿ.ಟಿ. ದೇವೇಗೌರಲ್ಲಿ ಮನವಿ ಮಾಡಿದ್ದಾರೆ.



**–ಬಡಾವಣೆಗಳ ನಿವಾಸಿಗಳು.**



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

# ಎಂದೆಂದಿಗೂ ಕನ್ನಡಕ್ಕೊಬ್ಬನೇ ಕೈಲಾಸಂ

ನಡೆದಾಡುವ ರಂಗ ಭೂಮಿ ಎನ್ನಿ, ಹವ್ಯಾಸಿ ರಂಗಭೂಮಿಯ ಅನರ್ಘ್ಯ ರತ್ನವೆನ್ನಿ, ಅನುಕರಣಾಸಾರ್ವಭೌಮನೆನ್ನಿ, ಚಂಡ ಪ್ರಚಂಡ ನಟನೆನ್ನಿ, ಅದ್ಭುತ ಆಶುಕವಿಯೆನ್ನಿ, ನವ್ಯಶೈಲಿಯ ನಾಟಕದ ನಾಂದಿ ಪುರುಷನೆನ್ನಿ ಖಂಡಿತ ನಿಮ್ಮ ಊಹೆ ಸರಿ. ಅದು ಟಿ.ಪಿ. ಕೈಲಾಸಂ! ಅವರಿಗೆ ಮಾತ್ರ ಒಪ್ಪುವ ವಿಶೇಷಣಗಳಿವು.

ಕನ್ನಡಕ್ಕೊಬ್ಬನೇ ಕೈಲಾಸಂ ಎನಿಸಿ ಕನ್ನಡ ನಾಡಿನಲ್ಲಿ ಮೆರೆದ ಟಿ.ಪಿ. ಕೈಲಾಸಂ ಅವರು ಕೈಲಾಸವಾಸಿಯಾಗಿ (ನಿಧನ 24.11.1946) ಮುಕ್ಕಾಲು ಶತಮಾನವೇ ಕಳೆದಿದೆ. ಆದರೂ ಇನ್ನೊಬ್ಬ ಕೈಲಾಸಂರನ್ನು ಕನ್ನಡ ನಾಡು ಇನ್ನೂ ಕಂಡಿಲ್ಲ, ಕಾಣಲು ಸಾಧ್ಯವೂ ಇಲ್ಲವೆನ್ನಿ. ಅಂದು, ಇಂದು, ಎಂದೆಂದೂ ಕನ್ನಡಕ್ಕೊಬ್ಬನೇ ಕೈಲಾಸಂ. One And Only kailasam For kannada!



ಟಿ.ಪಿ. ಕೈಲಾಸಂ

ಕೈಲಾಸಂ ಎಂಬುದು ಕೇವಲ ಒಂದು ಹೆಸರಲ್ಲ. ರಂಗಭೂಮಿ ಮತ್ತು ಸಾಹಿತ್ಯ ಕ್ಷೇತ್ರಗಳೆರಡರಲ್ಲೂ ತಮ್ಮ ದೈತ್ಯ ಪ್ರತಿಭೆಯ ಪ್ರಭೆಯಿಂದ ಕನ್ನಡ ನಾಡನ್ನು ಬೆಳಗಿದ ಪ್ರಜ್ವಲ ಬೆಳಕವರು. ತಮ್ಮ ಅಪ್ರತಿಮ ಪ್ರತಿಭೆಯಷ್ಟೇ ತಮ್ಮ ವಿಲಕ್ಷಣ ನಡವಳಿಕೆಯಿಂದಲೂ ಪ್ರಸಿದ್ಧರವರು. ಅಂದ ಹಾಗೆ ಅವರ ಪೂರ್ಣ ಹೆಸರು ತ್ಯಾಗರಾಜ ಪರಮಶಿವ ಅಯ್ಯರ್ ಕೈಲಾಸಂ.

ಬದುಕಿದ್ದಾಗಲೇ ದಂತ ಕಥೆಯಾಗಿದ್ದ ಕರ್ನಾಟಕ ರತ್ನ ವರನಟ ಡಾ.ರಾಜ್‌ಕುಮಾರ್ ಅವರು ತಮ್ಮ 'ಆಕಸ್ಮಿಕ' ಚಿತ್ರದಲ್ಲಿ "ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು, ಮೆಟ್ಟಿದರೆ ಕನ್ನಡ ಮಣ್ಣ ಮೆಟ್ಟಬೇಕು" ಎಂದು ಕನ್ನಡ ನಾಡಿನ ಹಿರಿಮೆಯನ್ನು ಸಾರುತ್ತಾ "ಕೈಲಾಸಂ ಕಂಡ ನಮಗೆ ಕೈಲಾಸ ಯಾಕೆ ಬೇಕು?" ಎಂದು ಹಾಡುತ್ತಾರೆ. ಇದೊಂದು ಸಾಲು ಸಾಕು ಕೈಲಾಸಂ ಏನೆಂಬುದಕ್ಕೆ. ಹಂಸಲೇಖಾರಂಥ ಚಲನಚಿತ್ರ ಸಾಹಿತಿಯ ಲೇಖನಿಯ ಕಣ್ಣಲ್ಲಿ ಕೈಲಾಸಂ ಅವರು ಕೈಲಾಸಕ್ಕಿಂತಲೂ ಮಿಗಿಲಾಗಿ ಕಂಡಿದ್ದಾರೆಂದರೆ, ಡಾ.ರಾಜ್‌ಕುಮಾರ್‌ರಂಥ ಮಹಾನ್ ಕಲಾವಿದರ ನಾಲಿಗೆಯಲ್ಲಿ ಕೈಲಾಸಂ ಅವರು ಕೈಲಾಸವಾಗಿ ನಲಿದಿದ್ದಾರೆಂದರೆ ನಿಜಕ್ಕೂ ಅವರು ಕನ್ನಡದ ಕೈಲಾಸವೇ ಸರಿ. ಏಕೆಂದರೆ ಕನ್ನಡವನ್ನು, ಕರ್ನಾಟಕವನ್ನು ಕಟ್ಟುವಲ್ಲಿ ಕೈಲಾಸಂರವರ ಕೊಡುಗೆ ಅಮೋಘವಾದದ್ದು. ಕೈಲಾಸದಷ್ಟೇ ಎತ್ತರವಾದದ್ದು. ಮಹತ್ತರವಾದದ್ದು. ಅಂದ ಹಾಗೆ ಕೈಲಾಸಂ ಸಹ ಬದುಕಿದ್ದಾಗಲೇ ದಂತಕಥೆಯಾಗಿ ಜನಮಾನಸದಲ್ಲಿ ಮೆರೆದವರು.

ವೃತ್ತಿ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಗೆ ಕಳೆದ 20ನೇ ಶತಮಾನದ ಕೊಡುಗೆ ಅಪಾರ. ಅದರಲ್ಲೂ ವಿಶೇಷವಾಗಿ ಹವ್ಯಾಸಿ ರಂಗಭೂಮಿಗೆ ವೇಗ ಸಿಕ್ಕಿದ್ದು ಇಲ್ಲಿಯೇ. ಅನೇಕ ಮಂದಿ ಶ್ರೇಷ್ಠ ನಾಟಕಕಾರರನ್ನು ಹಾಗೂ ನಟರನ್ನು ಕಂಡ ಶತಮಾನವದು. ಅಂಥ ಶ್ರೇಷ್ಠರಲ್ಲಿ ಕೈಲಾಸಂ ಮೊದಲಿಗರು.ಮತ್ತೊಬ್ಬರು ಸಂಸ, ಇನ್ನೊಬ್ಬರು 'ಶ್ರೀರಂಗ' ಕಾವ್ಯನಾಮದ ಆದ್ಯ ರಂಗಾಚಾರ್ಯರು. ಆದರೆ ಈ ಮೂವರ ಪೈಕಿ ಕಥಾವಸ್ತುವಿನಿಂದ ಹಿಡಿದು ಕನ್ನಡ–ಇಂಗ್ಲೀಷ್ ಮಿಶ್ರಿತ ತಮ್ಮ ವಿಶಿಷ್ಟ ಸಂಭಾಷಣೆಯ ತನಕ, ಸಂಗೀತ, ದೃಶ್ಯ, ಪ್ರಸಾದನ... ಹೀಗೆ ನಾಟಕದ ಪ್ರತಿಯೊಂದು ವಿಭಾಗದಲ್ಲೂ ಹೊಸದೊಂದು ಮಾರ್ಗವನ್ನೇ ಹುಟ್ಟುಹಾಕಿ ಕನ್ನಡ ನಾಟಕ ರಚನೆಯನ್ನೂ, ಕನ್ನಡ ನಾಟಕ ಪ್ರದರ್ಶನವನ್ನೂ ಹೊಸತನಕ್ಕೆ ತಿರುಗಿಸಿದ ಕೀರ್ತಿ ಕೈಲಾಸಂಗೇ ಸಲ್ಲುತ್ತದೆ. ಇಂಗ್ಲಿಷಿನ ಜೊತೆಗೆ ತಮಿಳು, ತೆಲುಗು, ಉರ್ದು, ಮಲೆಯಾಳಂ ಮತ್ತು ಸಂಸ್ಕೃತ ಭಾಷೆಗಳನ್ನೂ ನಾಟಕಗಳಲ್ಲಿ ಹೆಣೆದು ಆಡು ಭಾಷೆಯಿಂದ ಕೈಲಾಸಂ ಪ್ರೇಕ್ಷಕರನ್ನು ಬೆರಗುಗೊಳಿಸುತ್ತಿದ್ದ ಪರಿಯನ್ನು ಬಲ್ಲವರೇ ಬಲ್ಲರು.

ಹತ್ತೊಂಬತ್ತನೇ ಶತಮಾನದ ಕೊನೆಯ ಭಾಗ. ಸರ್ ಕೆ.ಶೇಷಾದ್ರಿ ಅಯ್ಯರ್ ಅವರು ಮೈಸೂರು ಸಂಸ್ಥಾನದ ದಿವಾನರಾಗಿದ್ದ ಕಾಲವದು. ಆಗ ಶೇಷಾದ್ರಿ ಅಯ್ಯರ್ ಅವರು ಬಹಳಷ್ಟು ಮಂದಿ ಪ್ರತಿಭಾವಂತ ರನ್ನು ತಮಿಳುನಾಡಿನಿಂದ ಕರೆತಂದು ಇಲ್ಲಿ ಉನ್ನತ ಹುದ್ದೆ ನೀಡಿದ್ದರು. ಅಂಥವರಲ್ಲಿ ಜಸ್ಟೀಸ್ ತ್ಯಾಗರಾಜ ಪರಮ ಶಿವ ಅಯ್ಯರ್ ಸಹ ಒಬ್ಬರು. ಎಡೆಯತ ಮಂಗಲಂ ನಾರಾಯಣ ಶಾಸ್ತ್ರಿಗಳ ಮಗಳು ಕಮಲಮ್ಮ ಇವರ ಧರ್ಮಪತ್ನಿ. ಈ ಸುಸಂಸ್ಕೃತ ದಂಪತಿಗಳ ಜೇಷ್ಠ ಪುತ್ರನಾಗಿ 1885ರ ಜುಲೈ 29ರಂದು ಟಿ.ಪಿ. ಕೈಲಾಸಂ ಅವರು ತಾತ ನಾರಾಯಣಶಾಸ್ತ್ರಿಯವರ ಮನೆಯಲ್ಲಿ ಮೈಸೂರಿನಲ್ಲಿ ಜನಿಸಿದರು. ಇವರ ಜನ್ಮ ದಿನಾಂಕದ ಬಗ್ಗೆ ಹಲವು ಗೊಂದಲಗಳಿದ್ದು ಒಂದೊಂದು ಕಡೆ ಒಂದೊಂದು ರೀತಿ ಇದೆ ಯಾದರೂ ಕನ್ನಡ ಸಾಹಿತ್ಯ ಪರಿಷತ್ತಿನ ದಾಖಲೆಯ ಪ್ರಕಾರ ಇದೇ ಸರಿಯಾದದ್ದೆಂದು ನಂಬಬಹುದಾಗಿದೆ.

ಬೆಂಗಳೂರು ಮತ್ತು ಹಾಸನದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಕಲಿತ ಕೈಲಾಸಂ ಪ್ರೌಢಶಾಲಾ ವ್ಯಾಸಂಗವನ್ನು ಮೈಸೂರಿನಲ್ಲಿ ಮಾಡಿದರು. ಆ ಸಂದರ್ಭದಲ್ಲಿ ಇವರಿದ್ದ ವಿದ್ಯಾರ್ಥಿನಿಲಯದಲ್ಲೇ ಇವರ ಸಹಪಾಠಿಗಳಾಗಿ ಕನ್ನಡ ಕಣ್ವ ಬಿ.ಎಂ.ಶ್ರೀ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲ ಪತಿಗಳಾಗಿದ್ದ ಎನ್.ಎಸ್.ಸುಬ್ಬರಾಯರೂ ಇದ್ದರಂತೆ. ಆಗ ಕೈಲಾಸಂರ ತುಂಟತನ, ಚೇಷ್ಟೆಗಳನ್ನು ತಡೆಯಲಾಗದೆ ಅವರಿಬ್ಬರೂ ಬೇರೊಂದು ರೂಮನ್ನು ಹುಡುಕಿಕೊಂಡಿದ್ದರಂತೆ. ಮುಂದೆ ಕೈಲಾಸಂ ಕಾಲೇಜು ವಿದ್ಯಾಭ್ಯಾಸವನ್ನು ಮದರಾಸಿನ ಪ್ರತಿಷ್ಠಿತ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಮುಂದುವರಿಸಿ 1907ರಲ್ಲಿ ಇಡೀ ಮದರಾಸು ಪ್ರಾಂತ್ಯಕ್ಕೇ ಮೊದಲ ಸ್ಥಾನಗಳಿಸಿ ಕ್ರೊಮಾಟ ಪದಕದೊಡನೆ ಬಿ.ಎ. ಪದವಿ ಪಡೆದರು. ನಂತರ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಕೈಲಾಸಂ ಮೈಸೂರು ಸರ್ಕಾರದ ವಿದ್ಯಾರ್ಥಿವೇತನ ಪಡೆದು 1908ರಲ್ಲಿ ಉನ್ನತ ವ್ಯಾಸಂಗಕ್ಕಾಗಿ ಲಂಡನ್‌ಗೆ ತೆರಳಿದರು. ಅಲ್ಲಿನ ರಾಯಲ್ ಸ್ಕೂಲ್ ಆಫ್ ಸೈನ್ಸ್ ಕಾಲೇಜಿ ನಲ್ಲಿ ಭೂಗರ್ಭಶಾಸ್ತ್ರ ಅಧ್ಯಯನ ಮಾಡಿ 1915ರಲ್ಲಿ ಏಳು ಪಾರಿತೋಷಕಗಳೊಡನೆ ಉನ್ನತ ಶ್ರೇಣಿಯಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಆಗ ಲಂಡನ್ನಿನ ರಾಯಲ್ ಜಿಯಾಲಾಜಿಕಲ್ ಸೊಸೈಟಿ ಕೈಲಾಸಂ ಅವರಿಗೆ ಪ್ರತಿಷ್ಠಿತ ಫೆಲೊ ಸದಸ್ಯತ್ವ ನೀಡಿ ಗೌರವಿಸಿದ್ದು ಅವರ ಘನ ಪ್ರತಿಭೆಗೊಂದು ಮೆರಗು ನೀಡಿತ್ತು.

> “ ಬುದ್ಧನಾಗುವ ಮುನ್ನ ಸಿದ್ದಾರ್ಥ ಎಲ್ಲವನ್ನೂ ಬಿಟ್ಟು ಎದ್ದು ಬಂದಂತೆ. ಹೀಗೆ ಎಲ್ಲವನ್ನೂ ಬಿಟ್ಟು ಬಂದ ಕೈಲಾಸಂ ಕೋಳಿ ಗೂಡಿನಂತಹ ಒಂದು ಕೊಠಡಿಯನ್ನು ತಮ್ಮ ಕರ್ಮಭೂಮಿ ಮಾಡಿಕೊಂಡಿದ್ದೇ ಒಂದು ಪವಾಡ. ಇಂಥ ಕರ್ಮ ಭೂಮಿಯಲ್ಲಿ ಅರಳಿದ ಕಲಾ ಕುಸುಮಗಳೂ ಪವಾಡ ಸದೃಶವಾದಂಥವು. ಹೀಗೆ ಕನ್ನಡ ರಂಗ ಭೂಮಿಗೆ ತಮ್ಮನ್ನೇ ಸಮರ್ಪಿಸಿಕೊಂಡ ಕೈಲಾಸಂ ಕನ್ನಡಕ್ಕೊಬ್ಬರೇ ಅಲ್ಲದೆ ಇನ್ನೊಬ್ಬರೆಲ್ಲಿದ್ದಾರೆ?

ಏಳು ವರ್ಷಗಳ ನಂತರ 1915ರಲ್ಲಿ ಕೈಲಾಸಂ, ತವರಿಗೆ ಮರಳುತ್ತಿದ್ದಂತೆಯೇ ಅವರನ್ನು ಸ್ವತಃ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರೇ ಪ್ರೊಬೆಷನರಿ ಸಬ್ ಅಸಿಸ್ಟೆಂಟ್ ಜಿಯಾಲಜಿಸ್ಟ್ ಆಗಿ ನೇಮಿಸಿದರು. ಆದರೆ ಅವರಿದ್ದದ್ದು ಕೇವಲ ನಾಲ್ಕೈದು ವರ್ಷಗಳಷ್ಟೆ. ಏಳು ವರ್ಷಗಳು ಲಂಡನ್ನಿನಲ್ಲಿದ್ದಾಗ ಅಲ್ಲಿನ ಅನೇಕ ನಾಟಕಗಳನ್ನು ನೋಡಿ ಪ್ರಭಾವಿತರಾಗಿದ್ದ ಕೈಲಾಸಂ ಚಿತ್ತ ಅತ್ತಲೇ ಸುತ್ತುತ್ತಿದ್ದರಿಂದ ಮತ್ತು ಒಂದೇ ಕಡೆ ನಿಲ್ಲುವ ಜಾಯಮಾನದವರಲ್ಲದ ಅವರು 1920ರಲ್ಲಿ ತಮ್ಮ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ ಹೊರ ಬಂದು ಕೈನಲ್ಲಿ ಲೇಖನಿ ಹಿಡಿದರು. ನಾಟಕ ರಚನೆ ಮತ್ತು ನಟನೆಯನ್ನೇ ಗಟ್ಟಿ ಮಾಡಿಕೊಂಡರು. ಅದಾಗಲೇ ಜಿಯಾಲಜಿಸ್ಟ್ ನೌಕರಿಯ ನಡುವೆಯೇ 1918ರಲ್ಲಿ ಮೊಟ್ಟಮೊದಲಿಗೆ ಅವರು ರಚಿಸಿದ್ದ 'ಟೊಳ್ಳುಗಟ್ಟಿ' ನಾಟಕಕ್ಕೆ ಬಿ.ಎಂ.ಶ್ರೀ ಮತ್ತು ಬೆನಗಲ್ ರಾಮರಾವ್‌ರಂಥವರು ತೀರ್ಪುಗಾರರಾಗಿದ್ದ ಬೆಂಗಳೂರಿನ ಅಮೆಚೂರ್ಸ್ ನಾಟಕ ಸಂಘದಿಂದ ಪ್ರಥಮ ಬಹುಮಾನ ಬಂದಾಗಿತ್ತು. ಇದರ ಸ್ಫೂರ್ತಿ ಕೈಲಾಸಂ ಲೇಖನಿಯ ವೇಗವನ್ನು, ರಂಗಭೂಮಿಯ ಬಗ್ಗೆ ಅವರಿಗಿದ್ದ ಸೆಳೆತದ ಆ ವೇಗವನ್ನು ಹೆಚ್ಚಿಸಿತ್ತು. ಆಗ ಇವರೊಳಗಿನ ಪ್ರತಿಭೆ ಹುಚ್ಚು ಹೊಳೆಯಂತೆ ಉಕ್ಕಿ ಹರಿದಿತ್ತು. ಒಂದರ ಹಿಂದೊಂದರಂತೆ ನಾಟಕ ಕೃತಿಗಳು ಇವರಿಂದ ರೂಪುಗೊಂಡು ಹವ್ಯಾಸಿ ನಾಟಕ ರಂಗದಲ್ಲೊಂದು ಹೊಸ ಕ್ರಾಂತಿಯೇ ನಡೆದದ್ದು ಈಗ ಇತಿಹಾಸ.

ಕೆಲಸಕ್ಕೆ ರಾಜೀನಾಮೆ ನೀಡಿ ಬಯಸಿ ಬಯಸಿ ಕೈಲಾಸಂ ಅವರು ನಾಟಕ ರಂಗಕ್ಕೆ ಬಂದಾಗ ಕೇವಲ ಕೆಲಸವನ್ನಷ್ಟೇ ಅವರು ಬಿಟ್ಟು ಬಂದಿರಲಿಲ್ಲ. ತಾವು ವಾಸಿಸುತ್ತಿದ್ದ ಭವ್ಯವಾದ ವೈಟ್ ಹೌಸ್ ಅನ್ನೂ ಬಿಟ್ಟಿದ್ದರು. ಜೊತೆಗಿದ್ದ ತಮ್ಮಿಡೀ ಕುಟುಂಬ ವರ್ಗವನ್ನೂ ಬಿಟ್ಟಿದ್ದರು. ಒಟ್ಟಾರೆ ತಮ್ಮ ಆಗರ್ಭ ಶ್ರೀಮಂತಿಕೆಯೆಲ್ಲವನ್ನೂ ಬಿಟ್ಟು ಹೊರಬಂದಿದ್ದರು. ಒಂದು ರೀತಿ ಬುದ್ಧನಾಗುವ ಮುನ್ನ ಸಿದ್ದಾರ್ಥ ಎಲ್ಲವನ್ನೂ ಬಿಟ್ಟು ಎದ್ದು ಬಂದಂತೆ. ಹೀಗೆ ಎಲ್ಲವನ್ನೂ ಬಿಟ್ಟು ಬಂದ ಕೈಲಾಸಂ ಕೋಳಿಗೂಡಿನಂತಹ ಒಂದು ಕೊಠಡಿಯನ್ನು ತಮ್ಮ ಕರ್ಮಭೂಮಿ ಮಾಡಿಕೊಂಡಿದ್ದೇ ಒಂದು ಪವಾಡ. ಇಂಥ ಕರ್ಮಭೂಮಿಯಲ್ಲಿ ಅರಳಿದ ಕಲಾ ಕುಸುಮಗಳೂ ಪವಾಡ ಸದೃಶವಾದಂಥವು. ಹೀಗೆ ಕನ್ನಡ ರಂಗಭೂಮಿಗೆ ತಮ್ಮನ್ನೇ ಸಮರ್ಪಿಸಿಕೊಂಡ ಕೈಲಾಸಂ ಕನ್ನಡಕ್ಕೊಬ್ಬರೇ ಅಲ್ಲದೆ ಇನ್ನೊಬ್ಬರೆಲ್ಲಿದ್ದಾರೆ?

ಎ.ವಿ.ವರದಾಚಾರ್ಯರ ರತ್ನಾವಳಿ ಥಿಯೇಟರ್ ಸೇರಿದಂತೆ ಆ ಕಾಲದ ಹಲವಾರು ಪ್ರಸಿದ್ಧ ನಾಟಕ ಕಂಪನಿಗಳಲ್ಲಿ ತೊಡಗಿಸಿಕೊಂಡಿದ್ದ ಕೈಲಾಸಂ 1926ರಲ್ಲಿ ಎ.ವಿ.ವರದಾ ಚಾರ್ಯರು ನಿಧನರಾದ ಮೇಲೆ ರತ್ನಾವಳಿ ಥಿಯೇಟರನ್ನು ತಾವೇ ವಹಿಸಿಕೊಂಡು ಮುನ್ನಡೆಸಿದ್ದರು. 1929ರಲ್ಲಿ ಭವನಾನಿ ಎನ್ನುವವರು ಇಂಗ್ಲೆಂಡಿನ ಮುರ್ರೇ ಎಂಬುವವರೊಡಗೂಡಿ ಮೂಕಿ ಚಿತ್ರಗಳ ಕಾಲದಲ್ಲೇ 'ವಸಂತಸೇನೆ' ಚಲನಚಿತ್ರ ತಯಾರಿಸಲು ಮುಂದಾದಾಗ ಕೈಲಾಸಂ ಆ ಚಿತ್ರದಲ್ಲಿ ಶಕಾರನ ಪಾತ್ರ ಮಾಡಿದ್ದರು. ಕೂತಲ್ಲಿ ಕಂಪನಿ, ನಿಂತಲ್ಲಿ ನಾಟಕ, ನಡೆದಲ್ಲಿ ಚಲನಚಿತ್ರ ಎಂಬಂತೆ ಕಾಲಿಗೆ ಚಕ್ರ ಜೋಡಿಸಿ ಕೊಂಡವರಂತೆ ಕೈಲಾಸಂ ಒಂದು ಕಡೆ ನಿಲ್ಲದೆ ನಿತ್ಯ ಚಲನಶೀಲರಾಗಿದ್ದರು.

ಹುಟ್ಟುತ್ತಲೇ ಚಿನ್ನದ ಚಮಚವನ್ನು ಬಾಯಲ್ಲಿ ಇಟ್ಟುಕೊಂಡೇ ಅತ್ಯಂತ ಸಿರಿವಂತ ಕುಟುಂಬದಲ್ಲಿ ಕೈಲಾಸಂ ಜನಿಸಿದ್ದರೂ ಬಡತನದಲ್ಲೇ ಬದುಕಿದರು. ಆದರೆ ಅವರ ಹೃದಯ ಅತ್ಯಂತ ಶ್ರೀಮಂತಿಕೆಯಿಂದ ಕೂಡಿತ್ತು. ಎಲ್ಲರ ಕಷ್ಟ–ಸುಖಗಳಿಗೂ ಮಿಡಿಯುತ್ತಿದ್ದ ಅವರ ಹೃದಯ ವೈಶಾಲ್ಯತೆಗೆ ಕೈಲಾಸ ಪರ್ವತವೂ ಸಮನಲ್ಲವೆಂಬುದು ಅವರನ್ನು ಹತ್ತಿರದಿಂದ ಬಲ್ಲವರ ಅಭಿಮತ. ಗುರು ಹಿರಿಯರ ಬಗ್ಗೆ ಅಪಾರ ಗೌರವ ಹೊಂದಿದ್ದ ಕೈಲಾಸಂ ಕಿರಿಯರನ್ನು ಪ್ರೋತ್ಸಾಹಿಸುವುದರಲ್ಲಿ ಎತ್ತಿದಕೈ. ಆದರೆ ತಮ್ಮ ಗೌರವ, ಘನತೆ, ಸ್ವಾಭಿಮಾನಕ್ಕೆ ಕಿಂಚಿತ್ತು ಧಕ್ಕೆಯಾದರೂ ಅವರು ಸಹಿಸುತ್ತಿರಲಿಲ್ಲ. 1944ರಲ್ಲಿ ರಬಕವಿಯಲ್ಲಿ ಜರುಗಬೇಕಿದ್ದ 28ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಸರ್ವಾನುಮತದಿಂದ ಕನ್ನಡ ಸಾಹಿತ್ಯ ಪರಿಷತ್ತು ಕೈಲಾಸಂ ಅವರನ್ನು ಆಯ್ಕೆ ಮಾಡಿತ್ತು. ಆದರೆ ಪರಿಷತ್‌ನ ಆಹ್ವಾನ ಕೈಲಾಸಂ ಅವರ ಕೈ ತಲುಪಲೇ ಇಲ್ಲ. ಆಗ ಸಮ್ಮೇಳನಾಧ್ಯಕ್ಷತೆಯ ಪೀಠ ಏರಲು ಕೈಲಾಸಂ ನಿರಾಕರಿಸಿಯೇ ಬಿಟ್ಟರು. ಮುಂದಿನ ವರ್ಷ ಪರಿಷತ್ತು ಕೈಲಾಸಂರನ್ನು ಬಿಡದೆ ಹಠವಿಡಿದು ಒಪ್ಪಿಸಿದ್ದರಿಂದ 1945ರಲ್ಲಿ ಮದರಾಸಿನಲ್ಲಿ ನಡೆದ 29ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠವನ್ನು ಅವರು ಅಲಂಕರಿಸಿದ್ದರು. ಈ ಪೀಠದಿಂದ ಪ್ರತಿಧ್ವನಿಸಿದ ಅವರ ಮಾತುಗಳಾದರೂ ಎಂಥವು? ನೋಡಿ–

"ಈ ಸಲದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿ ತಾವು ಹೊಸಗನ್ನಡ ನಾಟಕದ ಮೇಲೆ ತಮಗಿರುವ ಆದರವನ್ನು ವ್ಯಕ್ತಪಡಿಸಿದ್ದೀರಿ. ಅಲ್ಲವಾದರೆ ನಾನು ಈ ಗೌರವಕ್ಕೆ ತಕ್ಕವನೆ? ತಾವು ತೋರಿಸಿದ ಈ ಗೌರವ ನಮ್ಮ ನಾಡಿನ ಸಾತು, ಪಾತು, ನಾಗತ್ತೆ, ಪೋಲಿ ಕಿಟ್ಟಿ ಇತ್ಯಾದಿ ನನ್ನ ಬಸುರಿನ ಕೂಸುಗಳಿಗೆ ಸಂದ ಗೌರವ. ನಾನೋ ಬರಿ ನಿಮಿತ್ತ, ನೆಪ! ಸಾತು,ಪಾತುಗಳನ್ನು ನಿಮ್ಮ ಮುಂದೆ ಒಪ್ಪಿಸುವ ಸೂತ್ರದಾರ, ಆ ಪಾತ್ರಗಳ ಪರವಾಗಿ ಸಮಾಜ ಬಳಸುತ್ತಿರುವ ಕನ್ನಡ ನಾಟಕದ ಪ್ರಪಂಚದ ಪರವಾಗಿ ತಮ್ಮನ್ನು ನಾನು ವಂದಿಸುತ್ತೇನೆ." ನಾಟಕದ ಮೇಲಿದ್ದ ಕೈಲಾಸಂರ ಅನನ್ಯ ಪ್ರೇಮಕ್ಕೆ ಈ ಮಾತುಗಳೇ ಸಾಕು.

# ಆಪರೇಷನ್ ಸಿಂಧೂರ್: 9 ಉಗ್ರ ನೆಲೆಗಳು ನಾಶ, 100 ಭಯೋತ್ಪಾದಕರ ನಿರ್ನಾಮ

## ಲೋಕಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಾಹಿತಿ



ರಕ್ಷಣಾ ಸಚಿವ ರಾಜನಾಥ್ ಸಿಂಗ್ ಲೋಕಸಭೆಯಲ್ಲಿ ಆಪರೇಷನ್ 'ಸಿಂಧೂರ್' ಮಾಹಿತಿ ನೀಡಿದರು.

ನವದೆಹಲಿ, ಜು.28–ಭಾರತದ ಗಡಿಗಳನ್ನು ರಕ್ಷಿಸಲು ಸಶಸ್ತ್ರ ಪಡೆಗಳು ಸದಾ ಜಾಗರೂಕವಾಗಿವೆ ಮತ್ತು ಒಂಬತ್ತು ಭಯೋತ್ಪಾದಕ ತಾಣಗಳ ಮೇಲೆ ಆಪರೇಷನ್ ಸಿಂಧೂರ ಪರಿಣಾಮಕಾರಿ ಮತ್ತು ಸುಸಂಘಟಿತ ದಾಳಿಯಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೋಮವಾರ ಪ್ರತಿಪಾದಿಸಿದರು.

ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭೀಕರ ಭಯೋತ್ಪಾದಕ ದಾಳಿ, ಆಪರೇಷನ್ ಸಿಂಧೂರ ಕುರಿತು ಲೋಕಸಭೆಯಲ್ಲಿ ಚರ್ಚೆಯನ್ನು ಆರಂಭಿಸಿದ ಅವರು, ಪಾಕ್ ಆಕ್ರಮಿತ ಕಾಶ್ಮೀರ (ಪಿಓಕೆ) ಮತ್ತು ಪಾಕಿಸ್ತಾನದೊಳಗೆ ಉಂಟಾದ ಹಾನಿಯ ಪುರಾವೆಗಳು ಭಾರತದ ಬಳಿ ಇವೆ ಎಂದರು. ರಾಷ್ಟ್ರಕ್ಕಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ ವೀರ ಸೈನಿಕರಿಗೆ ನಾನು ಗೌರವವನ್ನು ಸಲ್ಲಿಸುತ್ತೇನೆ. ಪಹಲ್ಗಾಮ್ ಉಗ್ರ ದಾಳಿ ನಂತರ, ನಮ್ಮ ಸಶಸ್ತ್ರ ಪಡೆಗಳು ಕ್ರಮ ಕೈಗೊಂಡವು ಮತ್ತು 100 ಕ್ಕೂ ಹೆಚ್ಚು ಭಯೋತ್ಪಾದಕರು, ಅವರ ತರಬೇತುದಾರರು ಮತ್ತು ನಿರ್ವಾಹಕರು ತಂಗಿದ್ದ ಒಂಬತ್ತು ಉಗ್ರ ತಾಣಗಳ ಮೇಲೆ ನಿಖರವಾಗಿ ದಾಳಿ ಮಾಡಿದವು.

ನಮ್ಮ ಸಶಸ್ತ್ರ ಪಡೆಗಳು ನಡೆಸಿದ ಸಂಘಟಿತ ದಾಳಿಗಳು 9 ಭಯೋತ್ಪಾದಕ ನೆಲೆಗಳನ್ನು ನಾಶ ಮಾಡಿದವು. ಈ ಮಿಲಿಟರಿ ಕಾರ್ಯಾಚರಣೆಯಲ್ಲಿ ನೂರಕ್ಕೂ ಹೆಚ್ಚು ಭಯೋತ್ಪಾದಕರು, ಅವರ ತರಬೇತುದಾರರು, ನಿರ್ವಾಹಕರು, ಸಹಚರರು ಕೊಲ್ಲಲ್ಪಟ್ಟರು ಎಂದು ಅಂದಾಜಿಸಲಾಗಿದೆ. ಇವರಲ್ಲಿ ಹೆಚ್ಚಿನವರು ಜೈಶ್–ಎ–ಮೊಹಮ್ಮದ್, ಲಷ್ಕರ್–ಎ–ತೈಬಾ ಮತ್ತು ಹಿಜ್ಬುಲ್ ಮುಜಾಹಿದ್ದೀನ್ ನಂತಹ ಭಯೋತ್ಪಾದಕ ಸಂಘಟನೆಗಳೊಂದಿಗೆ ಸಂಬಂಧ ಹೊಂದಿದ್ದರು ಎಂದು ಮಾಹಿತಿ ನೀಡಿದರು.

ಈ ಮಿಲಿಟರಿ ಕಾರ್ಯಾಚರಣೆಯನ್ನು ಕೇವಲ 22 ನಿಮಿಷಗಳಲ್ಲಿ ಪೂರ್ಣಗೊಳಿಸಲಾಯಿತು ಮತ್ತು ಪಹಲ್ಗಾಮ್‌ನಲ್ಲಿ ನಡೆದ ಹತ್ಯೆಗಳಿಗೆ ಪ್ರತೀಕಾರ ತೀರಿಸಿಕೊಳ್ಳಲಾಯಿತು. ಈ ದಾಳಿಗಳನ್ನು ದೊಡ್ಡ ಸಂಘರ್ಷ ಅಥವಾ ಯುದ್ಧವನ್ನು ಪ್ರಚೋದಿಸುವುದನ್ನು ತಪ್ಪಿಸಲು ಎಚ್ಚರಿಕೆಯಿಂದ ಯೋಜಿಸಲಾಗಿತ್ತು. ಅವುಗಳನ್ನು ಸೀಮಿತ ಪ್ರತಿಕ್ರಿಯೆಯಾಗಿ ಉದ್ದೇಶಿಸಲಾಗಿತ್ತು ಎಂದರು.

ಆಪರೇಷನ್ ಸಿಂಧೂರವನ್ನು ಕಾರ್ಯಗತಗೊಳಿಸುವ ಮೊದಲು, ನಮ್ಮ ಪಡೆಗಳು ಪ್ರತಿಯೊಂದು ಅಂಶವನ್ನು ಅಧ್ಯಯನ ಮಾಡಿ, ಭಯೋತ್ಪಾದಕರಿಗೆ ಗರಿಷ್ಠ ಹಾನಿಯನ್ನುಂಟುಮಾಡುವ ಆಯ್ಕೆಯನ್ನು ಆರಿಸಿಕೊಂಡವು. ಆದರೆ, ಮುಗ್ಧ ನಾಗರಿಕರಿಗೆ ಯಾವುದೇ ಹಾನಿಯಾಗದಂತೆ ನೋಡಿಕೊಳ್ಳುತ್ತಿದ್ದವು ಎಂದು ಸಿಂಗ್ ಹೇಳಿದರು.

# ನಾಳೆ ನಿಸಾರ್ ಉಪಗ್ರಹ ಉಡಾವಣೆ

ಚೆನ್ನೈ,ಜು.28–ಜುಲೈ 30ರಂದು ಭಾರತೀಯ ಬಾಹ್ಯಾಕಾಶ ಸಂಸ್ಥೆಯ ಮಹತ್ವಕಾಂಕ್ಷಿ ನಿಸಾರ್ ಉಪಗ್ರಹ ಉಡಾವಣೆ ನಡೆಯಲಿದೆ ಎಂದು ಹೇಳಲಾಗಿದೆ.



ಇಸ್ರೊ ಮತ್ತು ನಾಸಾ ಸಂಸ್ಥೆಗಳು ಜಂಟಿಯಾಗಿ ಅಭಿವೃದ್ಧಿಪಡಿಸಿರುವ ಭೂ ಸಮೀಕ್ಷೆಯ ಸಿಂಥೆಟಿಕ್ ಅಪರ್ಚರ್ ರೇಡಾರ್ (ನಿಸಾರ್) ಉಪಗ್ರಹವನ್ನು ಜುಲೈ 30ರಂದು ಉಡ್ಡಯನ ಮಾಡಲಾಗುವುದು ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ತಿಳಿಸಿದೆ.

ಈ ಕುರಿತು ಮಾತನಾಡಿದ ಇಸ್ರೊ ಅಧ್ಯಕ್ಷ ವಿ. ನಾರಾಯಣನ್ ಅವರು, 'ನಾಸಾ–ಇಸ್ರೊ ಸಹಯೋಗದಲ್ಲಿ ಸಿಂಥೆಟಿಕ್ ಅಪರ್ಚರ್ ರೇಡಾರ್ ಎಂಬ ವಿಶಿಷ್ಟ ಭೂ ವೀಕ್ಷಣಾ ಉಪಗ್ರಹವನ್ನು ಜುಲೈ 30ರಂದು ಶ್ರೀಹರಿ ಕೋಟಾದಿಂದ GSLV-F16 ರಾಕೆಟ್ ಮೂಲಕ ಉಡ್ಡಯನ ಮಾಡಲಾಗುವುದು. ಈ ಉಪಗ್ರಹ ಉಡಾವಣೆಯಿಂದ ಭಾರತ, ಅಮೆರಿಕ ಸೇರಿದಂತೆ ಇಡೀ ಜಗತ್ತಿಗೆ ನೆರವಾಗಲಿದೆ.

ನೈಸರ್ಗಿಕ ಸಂಪನ್ಮೂಲಗಳ ನಿಗಾ ವಹಿಸಲು ಅತ್ಯಂತ ನಿರ್ಣಾಯಕವಾಗಿದೆ. ದಿನದ 24 ತಾಸು ಭೂಮಿಯ ಚಿತ್ರವನ್ನು ತೆಗೆಯಲು, ಭೂಕುಸಿತ ಪತ್ತೆ, ಹವಾಮಾನ ಬದಲಾವಣೆ, ವಿಪತ್ತು ನಿರ್ವಹಣೆಗೆ ಸಹಾಯ ಮಾಡಲು ನೆರವಾಗಲಿದೆ ಎಂದು ತಿಳಿಸಿದ್ದಾರೆ. ಅಂತೆಯೇ ಈ ಉಪಗ್ರಹವನ್ನು ಭೂಮಿಯಿಂದ 743 ಕಿ.ಮೀ ಎತ್ತರದಲ್ಲಿ ಸೂರ್ಯನ ಸಮಕಾಲೀನ ಕಕ್ಷೆಯಲ್ಲಿ ನೆಲೆಗೊಳಿಸಲಾಗುವುದು. ಇದರಿಂದ ನಿರಂತರವಾಗಿ ಭೂವೀಕ್ಷಣೆಗೆ ಸೂರ್ಯನ ಬೆಳಕು ಲಭ್ಯವಾಗುತ್ತದೆ. 'ನಿಸಾರ್' ಉಪಗ್ರಹದ ತೂಕ 2392 ಕೆ.ಜಿ ಆಗಿದೆ. ಅವಳಿ ತರಂಗಾಂತರಗಳನ್ನೊಳಗೊಂಡ ಮೊದಲ ಸಿಂಥೆಟಿಕ್ ಅಪರ್ಚರ್ ರೇಡಾರ್ ಇದಾಗಿದೆ. ಇದರಲ್ಲಿ ನಾಸಾದ ಎಲ್ ಬ್ಯಾಂಡ್ ಮತ್ತು ಇಸ್ರೊದ ಎಸ್ ಬ್ಯಾಂಡ್ ಇವೆ. ಎರಡೂ ತರಂಗಾಂತರಗಳಿಗೆ 12 ಮೀಟರ್‌ನ ಅಗಲದ ಬಿಡಿಸಲಾಗದ ಮೆಷ್ ಅಳವಡಿಸಿದ ಪ್ರತಿಫಲಕ ಆಂಟೆನಾ ಅಳವಡಿಸಲಾಗಿರುತ್ತದೆ ಎಂದರು.

ಈ ಉಪಗ್ರಹವು ಇಡೀ ಭೂಮಿಯನ್ನು ಎಲ್ಲ ಋತುಮಾನಗಳು, ಹಗಲು–ರಾತ್ರಿ ವೀಕ್ಷಣೆ ನಡೆಸುತ್ತದೆ. ಭೂಮಿಯ ಮೇಲೆ ಆಗುವ ಸಣ್ಣಪುಟ್ಟ ಬದಲಾವಣೆಗಳ ಮಾಹಿತಿ ನೀಡುವ, ನೆಲದ ವಿರೂಪ, ಮಂಜುಗಡ್ಡೆಯ ಪದರದ ಚಲನೆ, ಹಡಗುಗಳ ಪತ್ತೆ, ಮಣ್ಣಿನ ತೇವಾಂಶದಲ್ಲಿನ ಬದಲಾವಣೆ, ಕಡಲಿನ ಮೇಲೆ ಕಣ್ಗಾವಲು, ಮೇಲ್ಮೈ ನೀರಿನ ಸಂಗ್ರಹದ ಮೇಲೆ ನಿಗಾ, ನೈಸರ್ಗಿಕ ವಿಕೋಪದ ಸೇರಿದಂತೆ ಹಲವು ಮಾಹಿತಿಗಳನ್ನು ಸಂಗ್ರಹಿಸಲಿದೆ ಎಂದು ಇಸ್ರೊ ತಿಳಿಸಿದೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

ಮೈಸೂರು ಮಿತ್ರ ಮಂಗಳವಾರ 29 ಜುಲೈ 2025

### ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ

## ಸ್ನೇಹಮಯಿ ಕೃಷ್ಣ ದೂರಿನ ಬಗ್ಗೆ ಸ್ಪಷ್ಟನೆ ನೀಡಿ; ಲೋಕಾಯುಕ್ತರಿಗೆ ಕೋರ್ಟ್ ಆದೇಶ




ಮೈಸೂರು, ಜು.28(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದಲ್ಲಿ ನಾನು ನೀಡಿರುವ ದಾಖಲಾತಿ ಸಮೇತದ ಸಾಕ್ಷ್ಯಗಳನ್ನು ಪರಿಗಣಿಸಿ ತನಿಖೆ ನಡೆಸಿಲ್ಲ ಎಂಬ ದೂರುದಾರ ಸ್ನೇಹಮಯಿ ಕೃಷ್ಣ ಆರೋಪದ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಲೋಕಾಯುಕ್ತರಿಗೆ ಆದೇಶ ನೀಡಿದೆ.

ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದ ಬಗ್ಗೆ ಇಂದು ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ಸಂತೋಷ್ ಗಜಾನನ ಭಟ್, ಈ ಆದೇಶ ನೀಡಿದ್ದರು.

ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದ ತನಿಖೆ ಆರಂಭವಾದ ದಿನದಿಂದ ನ್ಯಾಯಾಲಯಕ್ಕೆ ವರದಿ ಸಲ್ಲಿಸುವ ತನಕ 17 ಬಾರಿ ಲೋಕಾಯುಕ್ತ ಕಚೇರಿಗೆ ಭೇಟಿ ನೀಡಿ ದಾಖಲಾತಿ ಸಮೇತ ಹಲವು ಸಾಕ್ಷ್ಯಗಳನ್ನು ನೀಡಿದ್ದೆ. ಆದರೆ ಲೋಕಾಯುಕ್ತರು ನಾನು ನೀಡಿದ ಸಾಕ್ಷ್ಯ ಪರಿಗಣಿಸಿಲ್ಲ ಎಂದು ಸ್ನೇಹಮಯಿ ಕೃಷ್ಣ ಇಂದಿನ ವಿಚಾರಣೆ ವೇಳೆ ದೂರಿದರು.

ಈ ವಿಚಾರಕ್ಕೆ ಸ್ಪಷ್ಟನೆ ನೀಡಲು ಇಂದು ವಿಚಾರಣೆ ವೇಳೆ ಲೋಕಾಯುಕ್ತರ ಪರವಾಗಿ ವಕೀಲರು ಹಾಗೂ ಲೋಕಾಯುಕ್ತ ಅಧಿಕಾರಿಗಳು ಹಾಜರಿರಲಿಲ್ಲ. ಈ ಹಿನ್ನೆಲೆಯಲ್ಲಿ ಸ್ನೇಹಮಯಿ ಕೃಷ್ಣ ಆರೋಪದ ಬಗ್ಗೆ ವಿವರ ನೀಡುವಂತೆ ನ್ಯಾಯಾಲಯ ಲೋಕಾಯುಕ್ತರಿಗೆ ಆದೇಶ ನೀಡಿ ಮುಂದಿನ ವಿಚಾರಣೆಯನ್ನು ಆ.12ಕ್ಕೆ ಮುಂದೂಡಿದೆ.

### ಹುಟ್ಟುಹಬ್ಬದ ಶುಭಾಶಯ



ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರಿಗೆ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಶಾಸಕರಾದ ಅನಿಲ್‌ಕುಮಾರ್, ಡಿ.ರವಿಶಂಕರ್, ಮಾಜಿ ಕಾರ್ಪೋರೇಟರ್‌ಗಳಾದ ಲೋಕೇಶ್ ಪಿಯಾ, ಗೋಪಿ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು.

## ನಾಲ್ವಡಿಯವರಿಗೆ ತಮ್ಮ ತಂದೆಯ ಸಾಧನೆ ಹೋಲಿಸಿದ ಯತೀಂದ್ರ ವಿರುದ್ಧ

# ಜೆಡಿಎಸ್, ಕನ್ನಡಾಂಬೆ ರಕ್ಷಣಾ ವೇದಿಕೆ ಪ್ರತಿಭಟನೆ



ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಿದ್ದರಾಮಯ್ಯ ಅವರನ್ನು ಹೋಲಿಕೆ ಮಾಡಿ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ನೀಡಿರುವ ಹೇಳಿಕೆ ಖಂಡಿಸಿ ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಕನ್ನಡಾಂಬೆ ರಕ್ಷಣಾ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಜು.28(ಎಂಟಿವೈ)– ಮೈಸೂರು ಸಂಸ್ಥಾನದ ಪ್ರಖ್ಯಾತ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೂ ಮೀರಿದ ಮೈಸೂರು ಅಭಿವೃದ್ಧಿಯನ್ನು ಸಿಎಂ ಸಿದ್ದರಾಮಯ್ಯ ಮಾಡಿದ್ದಾರೆ ಎಂದು ಹೇಳಿಕೆ ನೀಡಿರುವ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ವಿರುದ್ಧ ಜೆಡಿಎಸ್ ಹಾಗೂ ಕನ್ನಡಾಂಬೆ ರಕ್ಷಣಾ ವೇದಿಕೆ ಕಾರ್ಯಕರ್ತರು ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಜೆಡಿಎಸ್ ನಗರ ಘಟಕದ ಕಾರ್ಯಕರ್ತರು ಪ್ರತಿಭಟನೆ ಮಾಡಿದರೆ, ಕನ್ನಡಾಂಬೆ ರಕ್ಷಣಾ ವೇದಿಕೆ ಕಾರ್ಯಕರ್ತರು ಹಳೇ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ವಿರುದ್ಧ ಘೋಷಣೆ ಕೂಗಿದರು.

**ಜೆಡಿಎಸ್ ಪ್ರತಿಭಟನೆ:** ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಜೆಡಿಎಸ್ ವತಿಯಿಂದ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಸ್ಥಳೀಯ ಮುಖಂಡರು, ಪಕ್ಷದ ಕಾರ್ಯಕರ್ತರು ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಇದೇ ವೇಳೆ ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚಲುವೇಗೌಡ ಮಾತನಾಡಿ, ಡಾ.ಯತೀಂದ್ರ ಅವರಿಗೆ ಅವರ ತಂದೆಯ ಬಗ್ಗೆ ಅಭಿಮಾನವಿದ್ದರೆ ಅವರ ತಂದೆಯ ಸಾಧನೆಯನ್ನು ಬೇರೆ ರಾಜಕಾರಣಿಗಳ ಜತೆ ಹೋಲಿಕೆ ಮಾಡಿಕೊಳ್ಳಲಿ. ನಮ್ಮದೇನು ಅಭ್ಯಂತರವಿಲ್ಲ. ಆದರೆ ಮೈಸೂರು ರಾಜ್ಯದ ಇತಿಹಾಸದ ಬಗ್ಗೆ ಅರಿವಿಲ್ಲದೆ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಧನೆಯನ್ನು ಇವರ ತಂದೆಯ ಸಾಧನೆಯ ಜತೆಗೆ ಹೋಲಿಕೆ ಮಾಡಲು ಹೋಗಿ ಅಪಹಾಸ್ಯಕ್ಕಿಡಾಗಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕೆಆರ್‌ಎಸ್ ಜಲಾಶಯವನ್ನು ನಿರ್ಮಿಸಿ, ಲಕ್ಷಾಂತರ ಜನರ ಜೀವನಕ್ಕೆ ಆಧಾರವಾದವರು. ಇದರಿಂದ ಸಾವಿರಾರು ಎಕರೆ ಭೂಮಿ ಕೃಷಿಭೂಮಿಯಾಗಿ ಪರಿವರ್ತನೆಯಾಗಿ ರೈತರ ಕಣ್ಮಣಿಯಾದರು. ಮೈಸೂರು, ಮಂಡ್ಯ, ಬೆಂಗಳೂರು ಜನರಿಗೆ ಕುಡಿಯುವ ನೀರನ್ನು ಒದಗಿಸುವ ಮೂಲಕ ಅಲ್ಲಿಯ ಜನರ ಬಾಯಾರಿಕೆಯನ್ನು ಹೋಗಲಾಡಿಸಿದರು ಎಂದು ತಿಳಿಸಿದರು.

ವಿಧಾನಪರಿಷತ್ ಸದಸ್ಯ ವಿವೇಕಾನಂದ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಸೇರಿದಂತೆ ಮೈಸೂರು ರಾಜವಂಶಸ್ಥರಿಗೆ ಹೋಲಿಕೆಯಾಗುವ ಯಾವ ರಾಜಕಾರಣಿಯೂ ದೇಶ–ರಾಜ್ಯದಲ್ಲಿಲ್ಲ. ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ರಾಜವಂಶಸ್ಥರು ನೀಡಿದ ಕೊಡುಗೆ ಅಪಾರ. ಸಿಎಂ ಸಿದ್ದರಾಮಯ್ಯ ಮೈಸೂರಿಗೆ ಹೇಳಿಕೊಳ್ಳುವಷ್ಟರ ಮಟ್ಟಿಗೆ ಕೊಡುಗೆಯನ್ನು ನೀಡಿಲ್ಲ. ಆದರೆ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ತಂದೆಯ ಮೇಲಿನ ಅಭಿಮಾನಕ್ಕೆ ರಾಜವಂಶಸ್ಥರಿಗೆ ಹೋಲಿಕೆ ಮಾಡಿರುವುದು ಖಂಡನೀಯ ಎಂದರು.

**ಹೆಚ್‌ಡಿಕೆ ಕೊಡುಗೆ ಅಪಾರ:** ಮೈಸೂರಿನ ಅಭಿವೃದ್ಧಿಗೆ ಮಾಜಿ ಮುಖ್ಯಮಂತ್ರಿ, ಹಾಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನೀಡಿರುವ ಕೊಡುಗೆ ಅಪಾರ. ಮೈಸೂರಲ್ಲಿ ಜಯದೇವ ಆಸ್ಪತ್ರೆ ಸ್ಥಾಪನೆಗೆ ಕ್ರಮ ಕೈಗೊಂಡಿದ್ದು ಕುಮಾರಸ್ವಾಮಿ. ಇದರಿಂದಾಗಿ ಕೆ.ಆರ್.ಆಸ್ಪತ್ರೆಯ ಕಟ್ಟಡದಲ್ಲಿ ಮೊದಲಿಗೆ ಜಯದೇವ ಆಸ್ಪತ್ರೆ ಆರಂಭವಾಯಿತು. ಇಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಿಎಂ ಸಿದ್ದರಾಮಯ್ಯ ಅವರನ್ನು ಹೋಲಿಕೆ ಮಾಡಿರುವುದು ಸರಿಯಲ್ಲ. ಚರ್ಚೆಗೆ ಬಂದರೆ ಹೆಚ್.ಡಿ.ಕುಮಾರಸ್ವಾಮಿ ನೀಡಿರುವ ಕೊಡುಗೆ ಬಗ್ಗೆ ವಿವರಿಸುತ್ತೇವೆ. ಕೂಡಲೇ ಯತೀಂದ್ರ ಅವರು ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜೆಡಿಎಸ್ ರಾಜ್ಯ ವಕ್ತಾರ ರವಿಚಂದ್ರೇಗೌಡ, ಮಾಜಿ ಮೇಯರ್ ಎಂ.ಜೆ. ರವಿಕುಮಾರ್, ಮಾಜಿ ಉಪಮೇಯರ್ ಕೃಷ್ಣ, ಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ರಮೇಶ್, ಮುಖಂಡರಾದ ಹೆಚ್.ಕೆ.ರಾಮು, ಸುರೇಶ್, ಹೆಚ್.ಕೆ. ರಮೇಶ್, ಎಂ.ಎನ್.ರಾಮು, ಪ್ರಕಾಶ್ ಎಸ್. ಪ್ರಿಯದರ್ಶನ್ ಇನ್ನಿತರರಿದ್ದರು.

**ಕನ್ನಡಾಂಬೆ ರಕ್ಷಣಾ ವೇದಿಕೆ:** ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಕನ್ನಡಾಂಬೆ ರಕ್ಷಣಾ ವೇದಿಕೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಿಎಂ ಸಿದ್ದರಾಮಯ್ಯ ಅವರನ್ನು ಹೋಲಿಕೆ ಮಾಡಿರುವ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಕ್ಷಮೆ ಯಾಚಿಸುವಂತೆ ಆಗ್ರಹಿಸಿದರು. ವೇದಿಕೆ ರಾಜ್ಯಾಧ್ಯಕ್ಷ ಬಿ.ಬಿ. ರಾಜಶೇಖರ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ಮೈಸೂರಿನ ಪ್ರಕಾಶ್ ಜ್ಯುವೆಲರ್ಸ್‌ನಲ್ಲಿ ವರಮಹಾಲಕ್ಷ್ಮಿ ವಿಶೇಷ ಬೆಳ್ಳಿ ಕೊಡುಗೆ!



ಪ್ರಕಾಶ್ ಜ್ಯುವೆಲರ್ಸ್‌ನಲ್ಲಿ ವರಮಹಾಲಕ್ಷ್ಮಿ ಹಬ್ಬದ ವ್ಯಾಪಾರ–ವಹಿವಾಟು.

ಮೈಸೂರು, ಜು.28– ಮೈಸೂರಿನ ಪ್ರಕಾಶ್ ಜ್ಯುವೆಲರ್ಸ್, ವರಮಹಾಲಕ್ಷ್ಮಿ ಹಬ್ಬದ ಸಂಭ್ರಮಕ್ಕೆ ಮತ್ತಷ್ಟು ಮೆರುಗು ನೀಡುತ್ತಿದೆ. ಜುಲೈ 25ರಿಂದ ಆ.8 ರವರೆಗೆ ಬೆಳ್ಳಿ ಪದಾರ್ಥಗಳ ಮೇಲೆ ಭಾರಿ ರಿಯಾಯಿತಿ ಲಭ್ಯವಿದೆ.

ಪ್ರತಿ ಕಿಲೋ ಗ್ರಾಂಗೆ ರೂ.11,500 (ಪ್ರತಿ ಗ್ರಾಂಗೆ ರೂ.11.50) ರಿಯಾಯಿತಿ ಲಭ್ಯವಿದೆ. ಎಲ್ಲಾ ಬೆಳ್ಳಿ ಫೋಟೋ ಫ್ರೇಮ್‌ಗಳ ಮೇಲೆ ಶೇ.20 ರಿಯಾಯಿತಿ. ಹಾಗೆಯೇ ಉಡುಗೊರೆ ಇಲ್ಲವೇ ಮನೆಯ ಅಂದ ಹೆಚ್ಚಿಸುವಂತಹ ಖರೀದಿಗೂ ಭಾರಿ ಕೊಡುಗೆ ಇದೆ. ವರಮಹಾಲಕ್ಷ್ಮಿ ಹಬ್ಬವನ್ನು ಮತ್ತಷ್ಟು ಸಂಭ್ರಮದಿಂದ ಆಚರಿಸಲು ಪ್ರಕಾಶ್ ಜ್ಯುವೆಲರ್ಸ್ ಖಜಾನೆಯಾಗಿದೆ. ಮಾಹಿತಿಗಾಗಿ 0821–2421844, ವಾಟ್ಸಾಪ್‌ಗೆ +91 88678 53355 ಅನ್ನು ಸಂಪರ್ಕಿಸಬಹುದು. ಮಳಿಗೆ ಶಿವರಾಂಪೇಟೆ. ಹಬ್ಬದ ಆಫರ್‌ಗಳು ಸೀಮಿತ ಅವಧಿಗೆ ಮಾತ್ರ.

## ತಬಲಾ ಕಲಾವಿದ ರಮೇಶ ಧನ್ನೂರ ಟ್ರಸ್ಟ್ ಉದ್ಘಾಟನೆ




ಮೈಸೂರಿನಲ್ಲಿ ತಬಲಾ ಕಲಾವಿದರಾದ ರಮೇಶ ಧನ್ನೂರ ಟ್ರಸ್ಟ್ ಅನ್ನು ಉದ್ಯಮಿ ವಿಶ್ವಪ್ರಸಾದ್ ಆಳ್ವ ಉದ್ಘಾಟಿಸಿದರು.

**ಮೈಸೂರು:** ತಬಲಾ ಕಲಾವಿದರಾದ ರಮೇಶ ಧನ್ನೂರ ಅವರು ಸರಳ, ಸಜ್ಜನಿಕೆಯ ಅಪರೂಪದ ಕಲಾವಿದರು. ಅವರ ಬಳಿ ಕಲಿತವರೆಲ್ಲಾ ಸೇರಿ ಅವರ ಹೆಸರಲ್ಲಿ ಟ್ರಸ್ಟ್ ಆರಂಭಿಸಿದ್ದು ಶ್ಲಾಘನೀಯ ಎಂದು ಉದ್ಯಮಿ ವಿಶ್ವಪ್ರಸಾದ್ ಆಳ್ವ ಹೇಳಿದರು.

ನಗರದ ಗಾನಭಾರತೀ ಸಭಾಂಗಣದಲ್ಲಿ ಶ್ರೀ ಗುರು ಧನ್ನೂರ ಪ್ರತಿಷ್ಠಾನ, ಪಂ.ಪುಟ್ಟರಾಜ ಗವಾಯಿಗಳು, ಪಂ.ರಾಜೀವ ತಾರಾನಾಥ ಮತ್ತು ಉಸ್ತಾದ್ ಝಾಕೀರ್ ಹುಸೇನ್ ಅವರಿಗೆ ಭಾನುವಾರ ಏರ್ಪಡಿಸಿದ್ದ ಗುರುವಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು. ಸಂಗೀತ ಕುರಿತ ಇಂಥ ಟ್ರಸ್ಟ್ ಅಗತ್ಯವಿದ್ದು, ಸಂಗೀತ ಪರಂಪರೆ ಬೆಳೆಸಲಿ ಎಂದು ಹಾರೈಸಿದರು.

ಮುಖ್ಯ ಅತಿಥಿ ತಬಲಾ ಕಲಾವಿದರಾದ ಬೀದರದ ಗಣೇಶ್ ಗೋರಟಾ ಮಾತನಾಡಿ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಮೈಸೂರಿಗೆ ಬರಲು ಕಾರಣರಾದವರು ಪಂ.ಪಂಚಾಕ್ಷರಿ ಗವಾಯಿಗಳು. ಅದನ್ನು ಮುಂದುವರಿಸಿದವರು ಪಂ.ಪುಟ್ಟರಾಜ ಗವಾಯಿಗಳು. ಇವರ ಬಳಿ ಮೈಸೂರಿನ ಜೆಎಸ್‌ಎಸ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಸೋಮಶೇಖರ್ ಅವರು ಹೋಗಿ ಮೈಸೂರಲ್ಲಿ ಶಾಸ್ತ್ರೀಯ ಸಂಗೀತ ಬೆಳೆಸಲು ಶಿಷ್ಯರನ್ನು ಕಳಿಸಲು ಕೋರಿದರು. ಹಾಗಾಗಿ ಗದಗಿನ ಪುಣ್ಯಾಶ್ರಮದಲ್ಲಿ ಕಲಿತ ವೀರಭದ್ರಯ್ಯ ಹಿರೇಮಠ, ರಮೇಶ ಧನ್ನೂರ, ಶಿವದೇವ ಹಿರೇಮಠ ನಾವದಗಿ, ಭೀಮಾಶಂಕರ ಬಿದನೂರು ಇಲ್ಲಿಗೆ ಬಂದರು. ಇದರಿಂದ ಶಾಸ್ತ್ರೀಯ ಸಂಗೀತ ಬೆಳೆಯಲು ಸಾಧ್ಯವಾಯಿತು ಎಂದು ತಿಳಿಸಿದರು.

ಇನ್ನೊಬ್ಬ ಅತಿಥಿ ಡಾ.ದುಂಡಯ್ಯ ಪೂಜಾರ ಮಾತನಾಡಿ, ಗುರುಪರಂಪರೆ ಎಂದರೆ ಶಿಷ್ಯರನ್ನು ರೂಪಿಸುವುದು. ಪಂ.ರಾಜೀವ ತಾರಾನಾಥರ ಶಿಷ್ಯರಾಗಿ ಅರಣ್ಯಕುಮಾರ್, ಪುಣೆಯ ಅನುಪಮ್ ಜೋಶಿ, ಸಚಿನ್ ಹಂಪೆ ಸರೋದ್ ಕಲಿತರು. ಇವರ ಬಳಿ ತಂತಿವಾದ್ಯದಲ್ಲಿ ಆಸಕ್ತಿ ಇದ್ದವರು ಸರೋದ್ ಕಲಿಯಬಹುದು ಎಂದರು.

ಗದಗ ಪುಣ್ಯಾಶ್ರಮದ ಆನಂದ್ ಪಾಟೀಲ, ತಬಲಾ ಕಲಾವಿದರಾದ ತುಕಾರಾಮ್ ರಂಗಧೋಳ್ ಹಾಗೂ ಸಚಿನ್ ಹಂಪೆ ವೇದಿಕೆ ಮೇಲಿದ್ದರು.

ಟ್ರಸ್ಟ್ ಕಾರ್ಯದರ್ಶಿ ಲಕ್ಷ್ಮಿ ವಲ್ಲಭ ಕೆ.ಪಿ., ಟ್ರಸ್ಟಿಗಳಾದ ಶೇಷಾಚಲ, ವಿನಯ್ ರಂಗಧೋಳ್, ಆತ್ಮಾರಾಮ್, ಸುಜಯೇಂದ್ರ, ಸುರೇಶ್, ಪುನೀತ್, ಹರೀಶ್ ಪಾಂಡವ ಹಾಗೂ ನರಹರಿ ಭಟ್ ಹಾಜರಿದ್ದರು.

### ನೇಮಕ



ಮೈಸೂರು, ಜು.28 –ಸಮರ್ಪಣೆ ಸೇವಾ ಟ್ರಸ್ಟ್ (ನೊಂದ ಜೀವಿಗಳಿಗೆ ಆಶಾಕಿರಣ) ವೃದ್ಧಾಶ್ರಮದ ಅಧ್ಯಕ್ಷರಾಗಿ ಅಭಿಯಂತರ ಡಾ.ಟಿ. ತ್ಯಾಗರಾಜು ಅವರನ್ನು ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಕುಮಾರ್ ನೇಮಕ ಮಾಡಿದ್ದಾರೆ.

### ಫಲಿತಾಂಶ ಪ್ರಕಟ

ಮೈಸೂರು,ಜು.28– ಮೇ/ ಜೂನ್–2025 ರಲ್ಲಿ ಜರುಗಿದ 2, 4 ಮತ್ತು 6ನೇ ಸೆಮಿಸ್ಟರ್‌ನ NEP ಪದ್ಧತಿಯ ಸ್ನಾತಕ ಪದವಿ (UG) ಪರೀಕ್ಷೆಗಳಾದ ಬಿ.ಎ, ಬಿ.ಎಸ್ಸಿ, ಬಿ.ಕಾಂ, ಬಿ.ಬಿ.ಎ, ಮತ್ತು ಬಿ.ಬಿ.ಎ ಮುಂತಾದ ಕೋರ್ಸ್‌ಗಳ ಪರೀಕ್ಷಾ ಫಲಿತಾಂಶವನ್ನು UUCMS Student Poertel ನಲ್ಲಿ ಪ್ರಕಟಿಸಲಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಉಪ ಕುಲಸಚಿವ (ಪರೀಕ್ಷಾಂಗ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಎಂಟು ವರ್ಷದ ಬಾಲಕನ ವಿದ್ವತ್



ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದಲ್ಲಿ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರ ಚಾತುರ್ಮಾಸ್ಯದಲ್ಲಿ ಡಾ.ಪೃಥು ಪಿ.ಅದ್ವೈತ್ ಸ್ತೋತ್ರ ಪಠಿಸಿ ಗುರುಗಳ ಪ್ರಶಂಸೆಗೆ ಪಾತ್ರನಾಗಿದ್ದಾನೆ. ಶ್ರೀಗಳು ಪೃಥುವಿಗೆ ಗೌರವ ಪ್ರಶಸ್ತಿ ಹಾಗೂ ಸ್ಮರಣಿಕೆ ನೀಡಿ, ಸನ್ಮಾನಿಸಿದರು. ಈಗಾಗಲೇ ಸ್ತೋತ್ರ ಪಠಣದಲ್ಲಿ ವಿಶ್ವದಾಖಲೆ ನಿರ್ಮಿಸಿರುವ ಎಂಟು ವರ್ಷದ ಬಾಲಕ ಪೃಥು ಪಿ.ಅದ್ವೈತ್‌ನನ್ನು ಶ್ರೀಗಳು ಆಶೀರ್ವದಿಸಿದರು.


## ಆ.1ರಿಂದ ರಾಜ್ಯ ಬ್ರಿಜ್ ಚಾಂಪಿಯನ್‌ಶಿಪ್

ಮೈಸೂರು,ಜು.28(ಎಂಟಿವೈ)– ಮೈಸೂರಿನ ರೇಸ್ ಕ್ಲಬ್‌ನಲ್ಲಿ ಆ.1ರಿಂದ 5ರವರೆಗೆ ಅಂತರರಾಜ್ಯ ಬ್ರಿಜ್ ಚಾಂಪಿಯನ್‌ಶಿಪ್ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ಬ್ರಿಜ್ ಅಸೋಸಿಯೇಷನ್ ಅಧ್ಯಕ್ಷ ಹೆಚ್.ಎನ್. ಜಯಪಾಲ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಬ್ರಿಜ್ ಚಾಂಪಿಯನ್‌ಶಿಪ್ ಸ್ಪರ್ಧೆಗೆ ಆ.1ರಂದು ಮಧ್ಯಾಹ್ನ 1ಕ್ಕೆ ರಾಜವಂಶಸ್ಥರಾದ ಡಾ.ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಲಿದ್ದಾರೆ. ಬಳಿಕ ಆ.5ರವರೆಗೆ ಪ್ರತಿದಿನ ಬೆಳಗ್ಗೆ 7.30ರಿಂದ ರಾತ್ರಿ 7.30ರವರೆಗೆ ಬ್ರಿಜ್ ಸ್ಪರ್ಧೆ ನಡೆಯಲಿದೆ. ವಿವಿಧ ರಾಜ್ಯಗಳಿಂದ ಸ್ಪರ್ಧಿಗಳು ಆಗಮಿಸುತ್ತಿದ್ದು, ಇಲ್ಲಿ ಆಯ್ಕೆಯಾದವರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ ಎಂದರು.

ಈ ಆಟ ಇಸ್ಪೀಟ್ ಎಲೆಗಳನ್ನು ಬಳಸಿ ಆಡುವ ಆಟವಾಗಿದ್ದು, ಮಾನಸಿಕ ಸಾಮರ್ಥ್ಯ ವೃದ್ಧಿಸುತ್ತದೆ. ಗಣಿತದಲ್ಲಿ ಚಾಕಚಕ್ಯತೆ ದೊರೆಯುತ್ತದೆ. ಇದನ್ನು ಕಲಿತ ಮಕ್ಕಳು ಗಣಿತದಲ್ಲಿ ಮೊದಲು ಶೇ.30 ಅಂಕ ಪಡೆಯುತ್ತಿದ್ದವರು ಶೇ.70 ಅಂಕ ಪಡೆಯುವವರೆಗೂ ಸಾಧನೆ ಮಾಡುವುದು ಸಾಧ್ಯವಾಗಿದೆ. ಕೆಲವೊಂದು ಶಾಲೆಗಳಲ್ಲಿಯೂ ಇದನ್ನು ಕಲಿಸಲಾಗುತ್ತಿದೆ. ಬ್ರಿಜ್ ಬೆಟ್ಟಿಂಗ್ ಇಲ್ಲದ ಆಟವಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಬ್ರಿಜ್ ಅಸೋಸಿಯೇಷನ್ ಪದಾಧಿಕಾರಿಗಳಾದ ಉಮಾಪತಿ, ಡಾ.ಪುಟ್ಟಬಸಪ್ಪ ಇದ್ದರು.

## ಸಂತ ಅನ್ನಮ್ಮನವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಗಾಯನ ಬಲಿಪೂಜೆ



ಮೈಸೂರಿನ ಗಾಂಧಿನಗರದಲ್ಲಿರುವ ಸಂತ ಅನ್ನಮ್ಮ ದೇವಾಲಯದಲ್ಲಿ ಸಂತ ಅನ್ನಮ್ಮನವರ ಹುಟ್ಟುಹಬ್ಬವನ್ನು ಗಾಯನ ಬಲಿಪೂಜೆ ಮೂಲಕ ಆಚರಿಸಲಾಯಿತು. ಈ ವೇಳೆ ಸಂತ ಜೋಸೆಫರ ಧರ್ಮ ಕೇಂದ್ರದ ಪ್ರಧಾನ ಗುರುಗಳಾದ ಅಲೆಕ್ಸ್ ಪ್ರಶಾಂತ್ ಸಿಕ್ವೇರ, ಸಹಾಯಕ ಗುರುಗಳಾದ ಫಾ. ಜೀವನ್ ಪ್ರೀತ್, ಫಾ.ಆಲ್ಬರ್ಟ್ ಭಾಸ್ಕರ್, ಹಿರಿಯ ಮುಖಂಡರಾದ ರೀಟಮ್ಮ, ಆರೋಗ್ಯದಾಸ್, ವಿಲ್ಫ್ರೆಡ್, ಸಂತ ಅನ್ನಮ್ಮ ದೇವಾಲಯದ ಯುವಕರ ಸಂಘದ ಸದಸ್ಯರಾದ ಸಂದೀಪ್, ಸಂದೇಶ್, ಸ್ಟೀವನ್, ನವೀನ್, ಅಂಬ್ರೋಸ್, ಪ್ರವೀಣ್,ದಾಸ್, ವಿಮಲ್, ದೇವರಾಜ್, ಜೆರಾಲ್ಡ್, ಶಾನ್, ಶೀತಲ್, ಟೀನಾ, ಸಾರಾ, ಎಲ್ವಿನ್ ಸಂದೇಶ್, ಜೇಮ್ಸ್, ಕ್ಲಿಂಟನ್ ಅವಿನಾಶ್, ಮರಿಯಾ ಪವನ್, ಫ್ರಾನ್ಸಿಸ್ ಇದ್ದರು.

## ಕಾರ್ಮಿಕ ಭವನ ಕೆಎನ್‌ಎಸ್ ಲೇಔಟ್‌ಗೆ ಸ್ಥಳಾಂತರ

ಮೈಸೂರು,ಜು.28–ಕಾರ್ಮಿಕ ಇಲಾಖೆಯ ವತಿಯಿಂದ ಸ್ವಂತವಾಗಿ ಕಾರ್ಮಿಕ ಭವನವನ್ನು ಕೆಎನ್‌ಎಸ್ ಲೇಔಟ್, ಹರಿಶ್ಚಂದ್ರ ಘಾಟ್ ಎದುರು, ಚಾಮುಂಡಿಬೆಟ್ಟದ ಪಾದ, ಮೈಸೂರು ಇಲ್ಲಿ ನಿರ್ಮಾಣ ಮಾಡಲಾಗಿದ್ದು, ಪ್ರಸ್ತುತ ನಂ.35 ಜೆ.ಜಿ ಕಾಂಪ್ಲೆಕ್ಸ್, ನ್ಯೂ ಕಾಂತರಾಜು ಅರಸ್ ರಸ್ತೆ, ಅಕ್ಷಯ ಭಂಡಾರ್, ಕುವೆಂಪುನಗರ ಇಲ್ಲಿಯ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿ, ಮೈಸೂರು ವಿಭಾಗ, ಮೈಸೂರು, ಕಾರ್ಮಿಕ ಅಧಿಕಾರಿಗಳ ಕಚೇರಿ, ಮೈಸೂರು ಉಪವಿಭಾಗ, ಮೈಸೂರು ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರ ಕಚೇರಿ 1. 2, 3, 4ನೇ ವೃತ್ತ ಹಾಗೂ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಮತ್ತು ಕರ್ನಾಟಕ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ಸೇರಿದ ಶಾಖಾ ಕಚೇರಿಗಳು ಸಹ ನೂತನವಾಗಿ ನಿರ್ಮಾಣ ಮಾಡಲಾಗಿರುವ ಕಾರ್ಮಿಕ ಭವನಕ್ಕೆ ಸ್ಥಳಾಂತರಗೊಂಡಿದೆ. ಆದ್ದರಿಂದ ಸಾರ್ವಜನಿಕರು, ಕಾರ್ಮಿಕ ವರ್ಗದವರು, ಕಾರ್ಮಿಕ ಸಂಘದ ಪ್ರತಿನಿಧಿಗಳು ಇನ್ನು ಮುಂದೆ ಈ ಮೇಲಿನ ವಿಳಾಸಕ್ಕೆ ಸಂಪರ್ಕಿಸಿ ವಿವಿಧ ಕಾರ್ಮಿಕ ಕಾಯ್ದೆಗೆ ಸಂಬಂಧಿಸಿದ ಕೆಲಸ ಕಾರ್ಯಗಳ ಸೇವೆಗಳನ್ನು ಪಡೆಯಬಹುದೆಂದು ಸಾರ್ವಜನಿಕರಿಗೆ ತಿಳಿಸಲಾಗಿದೆ.

### ಚೊಚ್ಚಲ ಮಹಾರಾಣಿ ಟ್ರೋಫಿ–2025

# ಮೈಸೂರು ವಾರಿಯರ್ಸ್‌ನಿಂದ ಮಹಿಳಾ ಕ್ರೀಡಾಪಟುಗಳ ಪ್ರತಿಭಾನ್ವೇಷಣೆ



ಮೈಸೂರು ವಾರಿಯರ್ಸ್ ಕ್ರಿಕೆಟ್ ತಂಡವು ಚೊಚ್ಚಲ ಮಹಾರಾಣಿ ಟ್ರೋಫಿ–2025 ಕೆಎಸ್‌ಸಿಎ ಟಿ20 ಪಂದ್ಯಾವಳಿಯಲ್ಲಿ ತನ್ನ ತಂಡವನ್ನು ಪ್ರತಿನಿಧಿಸಬಲ್ಲ ಮಹಿಳಾ ಕ್ರೀಡಾಪಟುಗಳಿಗಾಗಿ ಬೆಂಗಳೂರಿನ ಜಸ್ಟ್ ಕ್ರಿಕೆಟ್ ಅಕಾಡೆಮಿಯಲ್ಲಿ ಪ್ರತಿಭಾನ್ವೇಷಣಾ ಕಾರ್ಯಕ್ರಮ ನಡೆಸಿತು.

ಮೈಸೂರು,ಜು.28–ಭಾರತದ ಪ್ರಮುಖ ಅಗರಬತ್ತಿ ತಯಾರಕರಾದ ಎನ್‌ಆರ್ ಗ್ರೂಪ್ ಅಧೀನದ ಮೈಸೂರು ವಾರಿಯರ್ಸ್ ಕ್ರಿಕೆಟ್ ತಂಡವು ಚೊಚ್ಚಲ ಮಹಾರಾಣಿ ಟ್ರೋಫಿ–2025 ಕೆಎಸ್‌ಸಿಎ ಟಿ20 ಪಂದ್ಯಾವಳಿಯಲ್ಲಿ ತನ್ನ ತಂಡವನ್ನು ಪ್ರತಿನಿಧಿಸಬಲ್ಲ ಮಹಿಳಾ ಕ್ರೀಡಾಪಟುಗಳಿಗಾಗಿ ಬೆಂಗಳೂರಿನ ಜಸ್ಟ್ ಕ್ರಿಕೆಟ್ ಅಕಾಡೆಮಿಯಲ್ಲಿ ಪ್ರತಿಭಾನ್ವೇಷಣಾ ಕಾರ್ಯಕ್ರಮ ನಡೆಸಿತು. ವಿಶೇಷವೆಂದರೆ ಈ ಕಾರ್ಯಕ್ರಮದಲ್ಲಿ ಭಾರತ ಟೆಸ್ಟ್ ತಂಡದ ಕ್ರಿಕೆಟ್ ಆಟಗಾರ್ತಿ ಶುಭಾ ಸತೀಶ್ ಮತ್ತು ಹಲವಾರು ರಾಜ್ಯ ಮಟ್ಟದ ಕ್ರಿಕೆಟ್ ಆಟಗಾರ್ತಿಯರು ಪಾಲ್ಗೊಂಡಿದ್ದರು.

ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಪಂದ್ಯಾವಳಿಯ ಯಶಸ್ಸಿನ ಆಧಾರದಲ್ಲಿ ಈ ವರ್ಷ ಇದೇ ಮೊದಲ ಬಾರಿಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ)ಯು ಮಹಿಳಾ ಕ್ರಿಕೆಟಿಗರಿಗಾಗಿ ಮಹಾರಾಣಿ ಟ್ರೋಫಿ ಟಿ20 ಪಂದ್ಯಾವಳಿ ಆಯೋಜಿಸಲಾಗಿದ್ದು, ಈ ನಿಟ್ಟಿನಲ್ಲಿ ಮೈಸೂರು ವಾರಿಯರ್ಸ್ ತಂಡವು ಪ್ರತಿಭಾನ್ವೇಷಣಾ ಕಾರ್ಯಕ್ರಮ ನಡೆಸಿದೆ. ಜುಲೈ 29ರಂದು ಕೆಎಸ್‌ಸಿಎನಲ್ಲಿ ಕ್ರೀಡಾಪಟುಗಳ ಹರಾಜು ಕಾರ್ಯಕ್ರಮ ನಡೆಯಲಿದೆ.

ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್, ಮೈಸೂರು ವಾರಿಯರ್ಸ್, ಮಂಗಳೂರು ಡ್ರಾಗನ್ಸ್, ಹುಬ್ಬಳ್ಳಿ ಟೈಗರ್ಸ್ ಮತ್ತು ಶಿವಮೊಗ್ಗ ಲಯನ್ಸ್ ಸೇರಿದಂತೆ ಒಟ್ಟು ಐದು ಮಹಿಳಾ ತಂಡಗಳು ಈ ಪಂದ್ಯಾವಳಿಯಲ್ಲಿ ಭಾಗವಹಿಸಲಿವೆ. ಸೈಕಲ್ ಪ್ಯೂರ್ ಅಗರಬತ್ತಿ ಮಹಾರಾಣಿ ಟ್ರೋಫಿ ಪಂದ್ಯಾವಳಿಗೆ ಬೆಂಬಲವಾಗಿ ನಿಂತಿದ್ದು, ಈ ವರ್ಷದ ಅತ್ಯುತ್ತಮ ಕ್ರೀಡಾಪಟುವಿಗೆ ಟ್ರಸ್ಟೆಡ್ ಪ್ಲೇಯರ್ ಪ್ರಶಸ್ತಿಯನ್ನು ನೀಡಲಿದೆ.

ಮಹಾರಾಜ ಟ್ರೋಫಿಯಲ್ಲಿ ಮಹತ್ವದ ಸಾಧನೆ ಮಾಡಿರುವ ಮೈಸೂರು ವಾರಿಯರ್ಸ್ ತಂಡವು ಯುವ ಕ್ರಿಕೆಟಿಗರನ್ನು ಬೆಳೆಸುವ ಪರಂಪರೆಯನ್ನು ಹೊಂದಿದೆ. ಅದಕ್ಕೆ ಪೂರಕವಾಗಿಯೇ ಯುವ ಮಹಿಳಾ ಕ್ರಿಕೆಟಿಗರಿಗೆ ಅವಕಾಶ ನೀಡುವ ಸಲುವಾಗಿ ಪ್ರತಿಭಾನ್ವೇಷಣೆ ನಡೆಸಿದ್ದು, ಆಯ್ಕೆಯಾದ ಆಟಗಾರರು ಈ ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದಾರೆ.

ಕರ್ನಾಟಕದಾದ್ಯಂತ ಇರುವ ಯುವ ಪ್ರತಿಭಾವಂತ ಕ್ರಿಕೆಟ್ ಆಟಗಾರರನ್ನು ಗುರುತಿಸಲು ಮೈಸೂರು ವಾರಿಯರ್ಸ್‌ನ ಪ್ರತಿಭಾನ್ವೇಷಣಾ ಕಾರ್ಯಕ್ರಮವನ್ನು ರೂಪಿಸಲಾಗಿದ್ದು, ಇಲ್ಲಿ ಗುರುತಿಸಲಾಗುವ ಸುಮಾರು 60ರಿಂದ 70 ಅತ್ಯುತ್ತಮ ಕ್ರೀಡಾ ಪ್ರತಿಭೆಗಳನ್ನು ಮೈಸೂರು ವಾರಿಯರ್ಸ್ ತಂಡವು ಮುಂಬರುವ ಹರಾಜಿಗೆ ಶಿಫಾರಸು ಮಾಡಲಿದೆ. ಮೈಸೂರು ವಾರಿಯರ್ಸ್ ಟ್ರಯಲ್ಸ್‌ನಲ್ಲಿ 250ಕ್ಕೂ ಹೆಚ್ಚು ಮಹತ್ವಾಕಾಂಕ್ಷಿ ಪ್ರತಿಭೆಗಳು ತಮ್ಮ ಕೌಶಲವನ್ನು ಪ್ರದರ್ಶಿಸಿದರು.

ಈ ಸಂದರ್ಭದಲ್ಲಿ ಮಹಾರಾಣಿ ಟ್ರೋಫಿ ಕುರಿತು ಮಾತನಾಡಿದ ಮೈಸೂರು ವಾರಿಯರ್ಸ್‌ನ ಮಾಲೀಕರು ಮತ್ತು ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗಾ, ಈ ವರ್ಷ ಮಹಾರಾಣಿ ಟ್ರೋಫಿ ಪಂದ್ಯಾವಳಿ ಆರಂಭವಾಗುತ್ತಿದ್ದು, ಈ ಮೂಲಕ ಮೈಸೂರು ವಾರಿಯರ್ಸ್ ತಂಡವು ಮಹಿಳಾ ಕ್ರಿಕೆಟ್‌ನ ಅಭಿವೃದ್ಧಿಗೆ ಕೊಡುಗೆ ನೀಡಲು ಸಂತೋಷಪಡುತ್ತದೆ. ಯುವ ಪ್ರತಿಭೆಗಳಿಗೆ ಕೌಶಲ ಪ್ರದರ್ಶಿಸಲು ಅವಕಾಶ ಕೊಡಬೇಕು ಎಂಬ ವಿಶ್ವಾಸ ಹೊಂದಿದ್ದೇವೆ.

ಅದಕ್ಕಾಗಿಯೇ ಪ್ರತಿಭಾನ್ವೇಷಣಾ ಕಾರ್ಯಕ್ರಮ ನಡೆಸುತ್ತೇವೆ. ಆಸಕ್ತರು ಅವಕಾಶ ಬಳಸಿಕೊಂಡು ನಮ್ಮ ಮೈಸೂರು ವಾರಿಯರ್ಸ್ ತಂಡವನ್ನು ಪ್ರತಿನಿಧಿಸಬಹುದಾಗಿದೆ ಎಂದು ಹೇಳಿದ್ದಾರೆ.

ಮೈಸೂರು ವಾರಿಯರ್ಸ್ ತಂಡದ ವ್ಯವಸ್ಥಾಪಕ ಎಂ.ಆರ್.ಸುರೇಶ್, ಮುಖ್ಯ ಕೋಚ್ ಕರುಣಾ ಜೈನ್, ಸಹಾಯಕ ಕೋಚ್ ರಜತ್ ಎಸ್, ತಂಡದ ಫಿಸಿಯೋ ಮೃದು ಗೌತಮ್, ಸ್ಟ್ರೆಂಥ್ ಆಂಡ್ ಕಂಡಿಷನಿಂಗ್ ಕೋಚ್ ಹರ್ಷಿತಾ ಕೃಷ್ಣಸ್ವಾಮಿ ಮತ್ತು ಥ್ರೋ ಡೌನ್ ಸ್ಪೆಷಲಿಸ್ಟ್ ಗುರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಮಂಗಳವಾರ 29 ಜುಲೈ 2025

# ಮಂಡ್ಯ ಅಭಿವೃದ್ಧಿಗೆ ಬದ್ಧ; ಇಲ್ಲಿನ ಜನ ಒಳ್ಳೆಯವರು...

**● ರಾಜ್ಯಕ್ಕೆ ಕೇಂದ್ರ ನಿಗದಿಯಂತೆ ರಸಗೊಬ್ಬರ ಪೂರೈಸುತ್ತಿಲ್ಲ ● ಬಿಜೆಪಿ ಸಂಸದರು ಕೇಂದ್ರದಿಂದ ಗೊಬ್ಬರ ಕೊಡಿಸಲಿ: ಸಿಎಂ ಸಿದ್ದರಾಮಯ್ಯ**



ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಸಚಿವರು, ಶಾಸಕರು ಇನ್ನಿತರರಿದ್ದರು.

ಮದ್ದೂರು, ಜು.28– ರಾಜ್ಯದಲ್ಲಿ ರಸಗೊಬ್ಬರದ ಅಭಾವವಿಲ್ಲ, ಆದರೆ ನಿಗದಿ ಮಾಡಿದಂತೆ ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡಬೇಕಾಗಿದ್ದ ರಸಗೊಬ್ಬರ ನೀಡದೇ ಬಿಜೆಪಿ ಸರ್ಕಾರ ರಾಜ್ಯದ ರೈತರ ವಿರೋಧಿ ಧೋರಣೆ ಅನುಸರಿಸುತ್ತಿದ್ದು, ನಮ್ಮ ಸರ್ಕಾರ ಕೇಂದ್ರಕ್ಕೆ ಪತ್ರ ಬರೆದು ಅಗತ್ಯ ಗೊಬ್ಬರ ಸರಬರಾಜು ಮಾಡುವಂತೆ ಒತ್ತಾಯಿಸಿ ಒಂದು ವಾರ ಕಳೆದರೂ ಇದುವರೆಗೂ ಕೊಟ್ಟಿಲ್ಲ. ಬಿಜೆಪಿ ಸಂಸದರು ಮತ್ತು ರಾಜ್ಯ ಪ್ರತಿನಿಧಿಸುವ ಕೇಂದ್ರ ಸಚಿವರು ಕೇಂದ್ರದ ಜೊತೆ ಮಾತನಾಡಿ ಗೊಬ್ಬರ ಕೊಡಿಸಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದರು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಮಂಡ್ಯ ಇವರ ಸಂಯುಕ್ತಾಶ್ರಯದಲ್ಲಿ ಸೋಮವಾರ ತಾಲೂಕಿನ ಸೋಮನಹಳ್ಳಿ ಬಳಿ ಆಯೋಜಿಸಿದ್ದ ಮದ್ದೂರು ತಾಲೂಕಿನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರಾಜ್ಯಕ್ಕೆ 6.80 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರ ಬೇಕು ಆದರೆ ಕೇಂದ್ರ ಕೇವಲ 5.27 ಲಕ್ಷ ಟನ್ ರಸಗೊಬ್ಬರ ಮಾತ್ರ ನೀಡಿದೆ, ರೈತರು ಮುಂಗಾರು ಜೋರಾದ ಹಿನ್ನೆಲೆಯಲ್ಲಿ ಹೆಚ್ಚುವರಿಯಾಗಿ ಬೆಳೆಗಳನ್ನು ಬೆಳೆದಿದ್ದಾರೆ. ಗೊಬ್ಬರ ಸರಬರಾಜು ಮಾಡುವಂತೆ ಪತ್ರವನ್ನು ಬರೆದಿದ್ದೇವೆ ಎಂದು ಹೇಳಿದರು.

ರಸಗೊಬ್ಬರ ಸರಬರಾಜು ವಿಚಾರವನ್ನು ರಾಜಕೀಯವಾಗಿ ಬಳಸಿಕೊಂಡ ವಿಜಯೇಂದ್ರರಿಂದ ಪಾಠ ಕಲಿಯಬೇಕೆ? ಅವರ ತಂದೆ ಯಡಿಯೂರಪ್ಪ ಸಿಎಂ ಆಗಿದ್ದಾಗ ಹಾವೇರಿಯಲ್ಲಿ ಗೊಬ್ಬರಕ್ಕಾಗಿ ಹೋರಾಟ ಮಾಡಿದ ರೈತರ ಮೇಲೆ ಗೋಲಿಬಾರ್ ಮಾಡಿ ರೈತರನ್ನು ಸಾಯಿಸಿದವರು ನನಗೆ ಪಾಠ ಹೇಳುತ್ತಾರೆ. ಹರ್ಯಾಣ, ಮಧ್ಯಪ್ರದೇಶದಲ್ಲಿ ಇವರದ್ದೇ ಸರ್ಕಾರವಿದೆ. ಗೊಬ್ಬರ, ಯೂರಿಯಾ ಇಲ್ಲ ಎಂದ ಅವರು ಬಿಜೆಪಿ ಸರ್ಕಾರಕ್ಕೆ ನಾಚಿಕೆಯಾಗಬೇಕು ಎಂದು ಕಿಡಿಕಾರಿದರು.

ರಾಜ್ಯ ಸರ್ಕಾರ ಗೊಬ್ಬರವನ್ನು ತಯಾರು ಮಾಡಲ್ಲ, ಕೇಂದ್ರ ಸರ್ಕಾರ ಕೊಟ್ಟರೆ ನಾವು ಕೊಡುತ್ತೇವೆ. ಸರಬರಾಜು ಮಾಡುವುದು ಅಷ್ಟೇ ನಮ್ಮ ಕೆಲಸ, ಗೊಬ್ಬರ ಕೊಡಬೇಕಾಗಿದ್ದು, ತಯಾರು ಮಾಡುವುದು ಕೇಂದ್ರ ಸರ್ಕಾರ. ರಾಜ್ಯದಲ್ಲಿ ಪ್ರತಿಭಟನೆ ಮಾಡುವುದನ್ನು ಬಿಟ್ಟು ವಿಜಯೇಂದ್ರ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ, ನಡ್ಡಾ ಬಳಿ ಕುಳಿತು ಗೊಬ್ಬರ ಕೊಡಿಸುವ ಕೆಲಸ ಮಾಡಲಿ. ಹೆಚ್.ಡಿ.ಕುಮಾರಸ್ವಾಮಿ ಕೇಂದ್ರದಲ್ಲಿ ಪ್ರಭಾವಿ ಮಂತ್ರಿಯಾಗಿದ್ದಾರೆ. ಅವರು ಹೇಳಿ ಗೊಬ್ಬರವನ್ನು ಕೊಡಿಸಲಿ. ಅದು ಬಿಟ್ಟು ಚಳುವಳಿಯ ನಾಟಕ ನಡೆಯಲ್ಲ ಎಂದರು.

ಇಂದು ಮದ್ದೂರಿನಲ್ಲಿ ಒಂದೇ ದಿನ 1146.74 ಕೋಟಿ ಮೊತ್ತದ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿದ್ದೇವೆ. ಬಿಜೆಪಿಯವರು ಕಾಂಗ್ರೆಸ್ ಸರ್ಕಾರದಲ್ಲಿ ಹಣ ಇಲ್ಲ ಅಂತ ಸುಳ್ಳು ಆಪಾದನೆ ಮಾಡುತ್ತಾರೆ. ಆದರೆ ಅವರದ್ದು ರಾಜಕೀಯ ಆರೋಪವೇ ಹೊರತು ಸತ್ಯವನ್ನು ಹೇಳುತ್ತಿಲ್ಲ. ದುಡ್ಡಿಲ್ಲ ಎಂದರೆ ಸಾವಿರಾರು ಕೋಟಿ ಅಭಿವೃದ್ಧಿ ಕೆಲಸ ಮಾಡಲು ಸಾಧ್ಯವೇ?. ಸತ್ಯವನ್ನು ಮರೆಮಾಚಿ ಸುಳ್ಳು ಹೇಳಲು ಎಷ್ಟೇ ಪ್ರಯತ್ನ ಮಾಡಿದರೆ ಪ್ರಯೋಜವಿಲ್ಲ, ಜೊತೆಗೆ ಸತ್ಯವನ್ನು ಬದಿಗೊತ್ತಲು ಸಾಧ್ಯವಿಲ್ಲ ಎಂದು ತಿಳಿಸಿದರು.

2013–2018 ಹಾಗೂ 2023ರಿಂದ ನಾನು ರಾಜ್ಯ ಮುಖ್ಯಮಂತ್ರಿಯಾಗಿ ಎರಡು ಅವಧಿಯಲ್ಲಿ ಬಡವರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು, ಕಾರ್ಮಿಕರ ಪರ ಹಲವು ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ. ನಮ್ಮ ಉದ್ದೇಶ ಸಮಾಜದಲ್ಲಿರುವ ಅಸಮಾನತೆ ತೊಡೆದು ಹಾಕಬೇಕು. ಜಾತಿ, ವರ್ಗ ವ್ಯವಸ್ಥೆ ಹೋಗಿ, ಸಮಾಜದಲ್ಲಿ ಸಮಾನ ವ್ಯವಸ್ಥೆ ನಿರ್ಮಾಣವಾಗಬೇಕೆಂಬುದು ನಮ್ಮ ಉದ್ದೇಶ. ಅಂಬೇಡ್ಕರ್ ಅವರ ಸಂವಿಧಾನವು ಸಹ ಇದ್ದನ್ನೇ ಹೇಳುತ್ತದೆ. ಆದ್ದರಿಂದ ಈ ಉದ್ದೇಶ ಈಡೇರಿಸಲು ಅನೇಕ ಪ್ರಯತ್ನ ಮಾಡಿದ್ದೇವೆ ಎಂದು ಹೇಳಿದರು.


ನಾವು ಜಾರಿ ಮಾಡಿದ ಐದು ಗ್ಯಾರಂಟಿಗಳಿಂದಾಗಿ ರಾಜ್ಯದ ಜನರ ಕೊಳ್ಳುವ ಶಕ್ತಿ ಹೆಚ್ಚಾಗಿ, ರಾಜ್ಯದ ಆರ್ಥಿಕತೆಗೆ ಶಕ್ತಿ ಬಂದಿದೆ. ಪರಿಣಾಮ ಇಡೀ ದೇಶದಲ್ಲಿ ರಾಜ್ಯದ ತಲಾ ಆದಾಯ ನಂಬರ್ ಒನ್ ಆಗಿದೆ. ಶಕ್ತಿ ಯೋಜನೆಯಿಂದ ಉದ್ಯೋಗದ ದರ ಹೆಚ್ಚಾಗಿದ್ದು, ಬೆಂಗಳೂರಿನಲ್ಲಿ 23%, ಹುಬ್ಬಳ್ಳಿ ಧಾರವಾಡ 21% ಹೆಚ್ಚಾಗಿದೆ. ಇದರಿಂದ ಸಮಾಜದಲ್ಲಿ ನಿರುದ್ಯೋಗದ ಸಮಸ್ಯೆ ನಿವಾರಣೆಯಾಗಿ, ಮಹಿಳೆಯರಲ್ಲಿ ಸ್ವಾವಲಂಬನೆ ಹೆಚ್ಚಾಗುತ್ತದೆ ಎಂದರು.

ಮಂಡ್ಯ ಜಿಲ್ಲೆ ಮೈಸೂರಿನಿಂದ ಬೇರ್ಪಟ್ಟು 1939ರಲ್ಲಿ ಹೊಸ ಜಿಲ್ಲೆಯಾಗಿ ಉದಯವಾಯಿತು. ಅಲ್ಲಿಂದೀಚೆಗೆ ಮಂಡ್ಯ ತನ್ನದೇ ಆದ ರೀತಿಯಲ್ಲಿ ಬೆಳವಣಿಗೆ ಕಂಡಿದೆ. ಈ ಜಿಲ್ಲೆಯು ಶಿಕ್ಷಣ, ರಾಜಕೀಯ, ಸಾಹಿತ್ಯ, ಕಲೆ, ಕ್ರೀಡೆ, ಚಲನಚಿತ್ರ, ವಾಣಿಜ್ಯ, ವ್ಯವಸಾಯ ಕ್ಷೇತ್ರಗಳನ್ನೊಳಗೊಂಡಂತೆ ಅಪರೂಪದ ವಿಶಿಷ್ಟವಾದ ಜಿಲ್ಲೆಯಾಗಿದೆ. ಮಂಡ್ಯ ಜನರು ಸ್ವಲ್ಪ ಒರಟು ಸ್ವಭಾವದವರು. ಒಳ್ಳೆಯ ಮನಸ್ಸಿರುವವರು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಉಪಕಾರ ಮಾಡಿದರೆ ಉಪಕಾರ ಸ್ಮರಣೆ ಮಾಡುವ ಜನ ಇಲ್ಲಿದ್ದಾರೆ. ನಾನು ಮಂಡ್ಯ ಅಭಿವೃದ್ಧಿಗೆ ಬದ್ಧನಾಗಿದ್ದೇನೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸುಮಾರು 16 ಇಲಾಖೆಗಳ 87 ಕಾಮಗಾರಿಗಳನ್ನು 1146 ಕೋಟಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

ವೇದಿಕೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಸಚಿವರಾದ ದಿನೇಶ್ ಗುಂಡೂರಾವ್, ಕೃಷ್ಣಬೈರೇಗೌಡ, ಎಚ್.ಸಿ.ಮಹದೇವಪ್ಪ, ರಹೀಮ್ ಖಾನ್, ಕೆ.ವೆಂಕಟೇಶ್, ಶಾಸಕರಾದ ಎ.ಬಿ.ರಮೇಶ್‌ಬಂಡಿಸಿದ್ದೇಗೌಡ, ದಿನೇಶ್ ಗೂಳಿಗೌಡ, ರವಿಕುಮಾರ್ ಗಣಿಗ, ಕೆ.ಎಂ. ಉದಯ್, ದಕ್ಷಿಣ ವಲಯ ಐಜಿಪಿ ಬೋರಲಿಂಗಯ್ಯ, ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧುಕೋಕಿಲಾ, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಕೆಆರ್.ನಂದಿನಿ, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಸಿಎಂ ಮಾಧ್ಯಮ ಕಾರ್ಯದರ್ಶಿ ಕೆ.ವಿ.ಪ್ರಭಾಕರ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಪುರಸಭಾಧ್ಯಕ್ಷೆ ಕೋಕಿಲಾ, ಸೋಮನಹಳ್ಳಿ ಗ್ರಾಪಂ. ಅಧ್ಯಕ್ಷೆ ಗಾಯತ್ರಿ, ಮುಡಾ ಅಧ್ಯಕ್ಷ ನಯೀಮ್, ಕಾಂಗ್ರೆಸ್ ಮುಖಂಡ ಮಳವಳ್ಳಿ ಶಿವಣ್ಣ ಸೇರಿದಂತೆ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.

## ಈಗ ಕಾಂಗ್ರೆಸ್ ಕಾಲ, ಜೆಡಿಎಸ್ ಕಾರ್ಯಕರ್ತರು ಸಮಯ ವ್ಯರ್ಥ ಮಾಡಬೇಡಿ



ಮದ್ದೂರು, ಜು.28– ಜೆಡಿಎಸ್ ಕಾರ್ಯಕರ್ತರು ಸಮಯ ವ್ಯರ್ಥ ಮಾಡಬೇಡಿ, ಕಾಲ ಬಂದಿತ್ತು ಈಗ ಕಾಲ ಮುಗಿದಿದೆ. ಇದೀಗ ಕಾಂಗ್ರೆಸ್ ಕಾಲ. ರಾಜ್ಯದಲ್ಲಿ ಶಾಶ್ವತವಾಗಿ ಕಾಂಗ್ರೆಸ್ ಧ್ವಜ ಹಾರುತ್ತದೆ. ಸ್ವಾಭಿಮಾನದ ಬದುಕು, ಬದಿಗಿಟ್ಟು ವೈಯಕ್ತಿಕ ಬದುಕಿನ ಬಗ್ಗೆ ಯೋಚಿಸಿ ಎನ್ನುವ ಮೂಲಕ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪರೋಕ್ಷವಾಗಿ ಜಿಲ್ಲೆಯ ಜೆಡಿಎಸ್ ಕಾರ್ಯಕರ್ತರನ್ನು ಕಾಂಗ್ರೆಸ್ ಪಕ್ಷಕ್ಕೆ ಆಹ್ವಾನಿಸಿದರು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಮಂಡ್ಯ ಇವರ ಸಂಯುಕ್ತಾಶ್ರಯದಲ್ಲಿ ಸೋಮವಾರ ತಾಲೂಕಿನ ಸೋಮನಹಳ್ಳಿ ಬಳಿ ಆಯೋಜಿಸಿದ್ದ ಮದ್ದೂರು ತಾಲೂಕಿನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆಯಲ್ಲಿ ಯಾವಾಗ ಅತಿ ಹೆಚ್ಚು ಕಾಂಗ್ರೆಸ್ ಶಾಸಕರು ಗೆದ್ದಿದ್ದಾರೋ ಆಗ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿಯುತ್ತಾ ಬಂದಿದೆ. ಚುನಾವಣಾ ಸಮಯದಲ್ಲಿ ಐದು ಗ್ಯಾರಂಟಿಗಳನ್ನು ಕೊಡುವ ಭರವಸೆ ನೀಡಿದ್ದೆ. ಅದರಂತೆ ಗ್ಯಾರಂಟಿಗಳನ್ನು ಅನುಷ್ಠಾನ ಮಾಡಿದ್ದೇವೆ. ಉಚಿತ ಬಸ್ ವ್ಯವಸ್ಥೆಯನ್ನು ರಾಜ್ಯದ ಮಹಿಳೆಯರು ಸಮರ್ಪಕವಾಗಿ ಬಳಸಿಕೊಳ್ಳುತ್ತಿದ್ದಾರೆ. ಎರಡು ಸಾವಿರ ರೂ. ಹಣ ದೊರೆಯುತ್ತಿದೆ. 200 ಯೂನಿಟ್ ಉಚಿತ ವಿದ್ಯುಚ್ಛಕ್ತಿ ಕೊಡುತ್ತಿದ್ದು, ಯುವಕರಿಗೆ ಯುವನಿಧಿ ಹೆಸರಿನಲ್ಲಿ ಹಣ, ಉಚಿತ ಅಕ್ಕಿ ಕೊಡುತ್ತಾ ಬರುತ್ತಿದ್ದೇವೆ. ಇಡೀ ದೇಶದಲ್ಲಿ ಇಂತಹ ಕಾರ್ಯಕ್ರಮಗಳನ್ನು ಈವರೆಗೆ ಮಾಡಿಲ್ಲ ಎಂದರು.

ನೀವು ಕೊಟ್ಟ ಮತಕ್ಕೆ ತಕ್ಕಂತೆ ನಿಮ್ಮ ಋಣ ತೀರಿಸಲು ನಾವು ಈ ಕ್ಷೇತ್ರಕ್ಕೆ 1 ಸಾವಿರ ಕೋಟಿಗೂ ಅಧಿಕ ಅನುದಾನ ನೀಡಿದ್ದೇವೆ. ನೀರಾವರಿ ಇಲಾಖೆಯ ಹೊಸ ಕಚೇರಿಯನ್ನು ಇಲ್ಲಿ ಆರಂಭಿಸುತ್ತಿದ್ದು, ಮಳವಳ್ಳಿ, ಮದ್ದೂರು ಕೆರೆಗಳಿಗೆ ಸಮರ್ಪಕ ನೀರು ತಲುಪಿಸಲು 500 ಕೋಟಿ ವ್ಯಯ ಮಾಡಿದ್ದೇವೆ. ಚಲುವರಾಯಸ್ವಾಮಿ ಕೃಷಿ ವಿವಿಯನ್ನು ತಂದಿದ್ದು, ಸದ್ಯದಲ್ಲೇ ಚಾಲನೆ ದೊರೆಯಲಿದೆ ಎಂದು ತಿಳಿಸಿದರು.

ಎಸ್.ಎಂ.ಕೃಷ್ಣ ಅವರನ್ನು ನಾನು ನೆನೆಸಿಕೊಂಡಿಲ್ಲ ಎಂದರೆ ನನ್ನ ಕರ್ತವ್ಯಕ್ಕೆ ಲೋಪವಾಗುತ್ತದೆ. ಕೃಷ್ಣ ಅವರು ಹಲವು ಹುದ್ದೆಗಳನ್ನು ಅನುಭವಿಸಿ, ರಾಜ್ಯಕ್ಕೆ, ಜಿಲ್ಲೆಗೆ, ಈ ತಾಲ್ಲೂಕಿಗೆ ಮೆರುಗು ನೀಡಿದ್ದಾರೆ. ಈ ಜಿಲ್ಲೆಗೆ ನಾಲ್ವಡಿ, ಸರ್‌ಎಂವಿ, ಸಾಹುಕಾರ್ ಚನ್ನಯ್ಯ, ಮಲ್ಲಯ್ಯ ಅನೇಕರು ತನ್ನದೇ ಆದ ಕೊಡುಗೆ ನೀಡಿದ್ದಾರೆ. ಟಿಪ್ಪು ಸುಲ್ತಾನ್ ಕಾಲದಲ್ಲಿ ಇಲ್ಲಿ ಮದ್ದು ತಯಾರು ಮಾಡುತ್ತಿದ್ದರು. ಆ ಕಾರಣಕ್ಕೆ ಈ ಪ್ರದೇಶಕ್ಕೆ ಮದ್ದೂರು ಎಂಬ ಹೆಸರು ಬಂತು. ಶಿಂಷಾ ನದಿಯ ಪಕ್ಕದಲ್ಲಿರುವ ಮದ್ದೂರು ತನ್ನದೇ ಆದ ಇತಿಹಾಸ ಹೊಂದಿದೆ. ಮದ್ದೂರು ಹೊಸ ಶತಮಾನದಲ್ಲಿ ಯಾವ ರೀತಿ ಅಭಿವೃದ್ಧಿ ಮಾಡಬೇಕೆಂದು ಚಿಂತನೆ ಮಾಡಿ, ಕೃಷ್ಣ ಅವರು ಕೈಗಾರಿಕಾ ಸಚಿವರಾಗಿದ್ದಾಗ ಹಲವು ಕೈಗಾರಿಕೆ ಸ್ಥಾಪಿಸಿ, ಸ್ಥಳೀಯರಿಗೆ ಉದ್ಯೋಗ ಸಿಕ್ಕುವಂತಾಯಿತು ಎಂದು ತಿಳಿಸಿದರು.

## ನ.13ರಿಂದ ಕೃಷಿಮೇಳ

ಮಂಡ್ಯ, ಜು.28– ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ವತಿಯಿಂದ ನ.13ರಿಂದ 16ರವರೆಗೆ ನಡೆಯಲಿರುವ ಕೃಷಿಮೇಳ–2025ರ ಸಮಾರಂಭವನ್ನು ಸಮೃದ್ಧ ಕೃಷಿ–ವಿಕಸಿತ ಭಾರತ: ನೆಲ, ಜಲ, ಬೆಳೆ ಎಂಬ ಘೋಷವಾಕ್ಯದೊಂದಿಗೆ ಬೆಂಗಳೂರಿನ ಜಿಕೆವಿಕೆಯಲ್ಲಿ ಆಯೋಜಿಸಲಾಗುತ್ತಿದೆ ಎಂದು ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಿಕ್ಕೇರಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ

ಕೆ.ಆರ್.ಪೇಟೆ, ಜು.28– ರಸ್ತೆ ಅಭಿವೃದ್ಧಿ ಕಾಮಗಾರಿಯಲ್ಲಿ ಗುತ್ತಿಗೆದಾರರು ಗುಣಮಟ್ಟ ಕಾಯ್ದುಕೊಳ್ಳಬೇಕು ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ತಾಲೂಕಿನ ಕಿಕ್ಕೇರಿ ಗ್ರಾಮದ ಚನ್ನನಕೊಪ್ಪಲು ರಸ್ತೆ ಬಡಾವಣೆಯಲ್ಲಿ ಶಾಸಕರ ವಿಶೇಷ ಪ್ರದೇಶಾಭಿವೃದ್ಧಿ ಅನುದಾನ 25 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಭಾರೀ ಮಳೆಗೆ ರಸ್ತೆಗಳು, ಸೇತುವೆಗಳು, ಕೆರೆಗಳು ಒಡೆದಿದ್ದು ಸೂಕ್ತ ಅನುದಾನ ನೀಡುವಂತೆ ಕಳೆದ 2 ವರ್ಷಗಳ ಹಿಂದೆಯೇ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೆ. ಆದರೆ ಇಲ್ಲಿವರೆಗೂ ಅನುದಾನ ಬಿಡುಗಡೆಯಾಗಿಲ್ಲ. ಸರ್ಕಾರ ಶಾಸಕರಿಗೆ ನೀಡಬೇಕಾದ ಕ್ಷೇತ್ರಾಭಿವೃದ್ಧಿ ಅನುದಾನ ನೀಡುತ್ತಿಲ್ಲ. ಇದೀಗ ಆಡಳಿತ, ವಿಪಕ್ಷ ಶಾಸಕರ ಅಸಮಾಧಾನ ಹಿನ್ನಲೆಯಲ್ಲಿ ತಲಾ 10 ಕೋಟಿ ವಿಶೇಷ ಅನುದಾನವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ. ಈ ಅನುದಾನ ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತಾಗಿದೆ. ಆದರೂ ಬಂದಿರುವ ಅನುದಾನವನ್ನು ವಿವಿಧ ಗ್ರಾಮಗಳ ರಸ್ತೆಗಳ ಅಭಿವೃದ್ಧಿಗೆ ಹಂಚಿಕೆ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ಬರುವ ನಿರೀಕ್ಷೆ ಇದೆ. ಒಂದು ವೇಳೆ ಸೂಕ್ತ ಅನುದಾನ ನೀಡದಿದ್ದರೇ ತಾಲೂಕಿನ ಸಾವಿರಾರು ಜನರೊಂದಿಗೆ ಬೆಂಗಳೂರಿಗೆ ಪಾದಯಾತ್ರೆ ಮಾಡುತ್ತೇನೆ ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಭಾರತಿ, ವಿಎಸ್‌ಎಸ್‌ಎನ್ ಬ್ಯಾಂಕ್ ನಿರ್ದೇಶಕ ಶೇಖರ್, ಕಿಕ್ಕೇರಿ ಹೋಬಳಿ ಜೆಡಿಎಸ್ ಅಧ್ಯಕ್ಷ ಕಾಯಿ ಮಂಜೇಗೌಡ, ಗ್ರಾಪಂ ಮಾಜಿ ಅಧ್ಯಕ್ಷರಾದ ಕೆ.ಜಿ.ಪುಟ್ಟರಾಜು, ರಾಜೇಶ್, ಉಪಾಧ್ಯಕ್ಷೆ ಸರಸ್ವತಿ, ತಾಯಮ್ಮ, ಪಿಡಿಓ ಚೆಲುವರಾಜು, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಮಧು, ಮುರಳಿ, ಲತಾ ಸೇರಿದಂತೆ ಮತ್ತಿತರರಿದ್ದರು.


ರಸ್ತೆ ಅಭಿವೃದ್ಧಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ ನೆರವೇರಿಸಿದರು.

ಒಂದನೇ ಪುಟದಿಂದ

## ರಾಜ್ಯದಲ್ಲಿ ಗೃಹ ಇಲಾಖೆ ಇಲ್ಲವೇ ಇಲ್ಲ!

ವಿಚಾರದಲ್ಲಿ ಮೈ ಮರೆತಿದೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಮೈಸೂರಿನಲ್ಲಿ ಇಂತಹ ಘಟನೆ ಆಗಿರುವುದು ಅತ್ಯಂತ ನೋವಿನ ಸಂಗತಿ ಎಂದು ವಿಷಾದ ವ್ಯಕ್ತಪಡಿಸಿದರು.

**ಅತೀ ಹೆಚ್ಚು ರೈತರ ಆತ್ಮಹತ್ಯೆ:** ರಾಜ್ಯದಲ್ಲಿ ರಸ ಗೊಬ್ಬರದ ಕೊರತೆ ಉಂಟಾಗಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸ್ವರ್ಗವನ್ನೇ ಧರೆಗಿಳಿಸುತ್ತೇವೆ, ನಾವು ರೈತಪರ ಎಂದು ಬೊಗಳೆ ಬಿಟ್ಟ ಸಿಎಂ, ಕೃಷಿ ಸಚಿವರು ಈಗ ಯೂರಿಯಾ ಸ್ಟಾಕ್ ಇಲ್ಲ ಎಂದು ಬೇಜವಾಬ್ದಾರಿ ಹೇಳಿಕೆ ಕೊಡುತ್ತಿದ್ದಾರೆ. ರೈತರು ಯೂರಿಯಾಗಾಗಿ ಹಗಲಿರುಳೂ ಕ್ಯೂ ನಿಲ್ಲುತ್ತಿದ್ದಾರೆ. ಈ ಸರ್ಕಾರದ ಅವಧಿಯಲ್ಲೇ ಅತೀ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಆಕ್ರೋಶ ಹೊರ ಹಾಕಿದರು. ರಾಜ್ಯ ಸರ್ಕಾರ ಕೇಳಿದಷ್ಟು ಯೂರಿಯಾ ರಸಗೊಬ್ಬರವನ್ನು ಕೇಂದ್ರ ಸರಕಾರ ನೀಡಿದೆ. ರಾಜ್ಯ ಸರ್ಕಾರಕ್ಕೆ ಹವಾಮಾನದ ಕುರಿತು ಪರಿಜ್ಞಾನ ಇರಬೇಕಿತ್ತು. ಕೇಂದ್ರ ಸರ್ಕಾರದಿಂದ 7 ಲಕ್ಷ ಟನ್ ಗೊಬ್ಬರ ಬಂದಿದ್ದು, ನೀವು ವಿತರಣೆ ಮಾಡಿರುವುದು ಎಷ್ಟು, ಉಳಿದ ರಸಗೊಬ್ಬರ ಎಲ್ಲಿ ಹೋಯ್ತು ಎಂದು ಪ್ರಶ್ನಿಸಿದ ಅವರು, ಈ ಸರ್ಕಾರ ಅಕ್ರಮ ಮಾಡಿದೆ ಎಂದು ಹೇಳಲ್ಲ, ಬದಲಿಗೆ ಲೂಟಿ ಮಾಡುತ್ತಿದೆ ಎಂದು ಆರೋಪಿಸಿದರು.

**ಖುರ್ಚಿ ಎಳೆದಾಟ:** ಇವರಿಗೆ ಕೇವಲ ಖುರ್ಚಿ ಉಳಿಸಿಕೊಳ್ಳುವುದಷ್ಟೇ ಯೋಚನೆ. ಒಂದೆಡೆ ಸಿದ್ದರಾಮಯ್ಯ–ಡಿಕೆಶಿ ಸಿಎಂ ಕುರ್ಚಿ ಎಳೆದರೆ, ಮತ್ತೊಂದು ಕಡೆ ಮಲ್ಲಿಕಾರ್ಜುನ ಖರ್ಗೆ ಸಿಎಂ ಕುರ್ಚಿ ಬಗ್ಗೆ ಮಾತನಾಡುತಿದ್ದಾರೆ. ಖರ್ಗೆಯವರು ಈಗಲಾದರೂ ಆ ಚೇರ್ ಮೇಲೆ ನನ್ನ ಕೂರಿಸಿ ಅಂತ ಹೇಳಿರುವುದು. ಸಿದ್ದರಾಮಯ್ಯನವರ ಮೇಲಿನ ಕೋಪಕ್ಕೆ. ಖರ್ಗೆಯವರು ಸರಿಯಾದ ಸಮಯಕ್ಕೆ ಕಲ್ಲು ಹೊಡೆದಿದ್ದಾರೆ. ಈಗ ಇಬ್ಬರ ಜಗಳದಲ್ಲಿ 3ನೇಯವನಿಗೆ ಲಾಭ ಆಗಬಹುದು ಎಂದು ಲೇವಡಿ ಮಾಡಿದರು.

**ಅಕ್ಟೋಬರ್‌ನಲ್ಲಿ ಕ್ರಾಂತಿ:** ಸಿದ್ದರಾಮಯ್ಯ–ಡಿಕೆಶಿ ನಡುವೆ ಒಪ್ಪಂದ ಆಗಿರುವುದು ನೂರಕ್ಕೆ ನೂರು ಸತ್ಯ. ಅಕ್ಟೋಬರ್‌ನಲ್ಲಿ ಕ್ರಾಂತಿ ಆಗೇ ಆಗುತ್ತದೆ. ಡಿಕೆಶಿಗೆ ದೇವರೇ ಗತಿ. ಅವರು ವರ ಕೊಡೊ ದೇವರನ್ನು ಹುಡುಕಿಕೊಂಡು ಹೋಗುತ್ತಿದ್ದಾರೆ. ಡಿಕೆಶಿಗೆ ಶಾಸಕರ ಬೆಂಬಲ ಇಲ್ಲ ಎಂದು ಸಿಎಂ ಅವರೇ ಹೇಳಿದ್ದರು. ಡಿ.ಕೆ.ಶಿವಕುಮಾರ್‌ಗೆ ಕಂಟಕ ಇರುವುದೇ ಜೆಡಿಎಸ್‌ನಿಂದ ಬಂದವರಿಂದ. ಸಿದ್ದರಾಮಯ್ಯರನ್ನು ಕರೆದುಕೊಂಡು ಬಂದವರು ಇದೇ ಡಿ.ಕೆ.ಶಿವಕುಮಾರ್ ಎಂದು ಕುಟುಕಿದರು.

**ಬಹಿರಂಗ ಚರ್ಚೆಗೆ ಆಹ್ವಾನ:** ಅಭಿವೃದ್ಧಿ ಕುರಿತು ಬಹಿರಂಗ ಚರ್ಚೆಗೆ ಸಿಎಂ ಆಹ್ವಾನ ವಿಚಾರ ಕುರಿತು ಪ್ರತಿಕ್ರಿಯಿಸಿ, ಅಸೆಂಬ್ಲಿಯಲ್ಲಿ ಒಂದು ದಿನಾನೂ ಅಭಿವೃದ್ಧಿ ಬಗ್ಗೆ ಸಿದ್ದರಾಮಯ್ಯ ಮಾತನಾಡಿಲ್ಲ. ಅನೇಕ ಶಾಸಕರು ಅಭಿವೃದ್ಧಿ ಆಗಿಲ್ಲ ಎಂದು ಹೇಳುತ್ತಿದ್ದಾರೆ. ನಿಮ್ಮ ಸಾಧನೆ ಏನಾದರೂ ಇದ್ದರೆ ವಿಧಾನಸೌಧದಲ್ಲಿ ಏನು ಕಡಿದು ಕಟ್ಟಿ ಹಾಕಿದ್ದೀರಾ ಹೇಳಿ. ಸಿದ್ದರಾಮಯ್ಯ ಕಟ್ಟಿರುವ ಒಂದೇ ಒಂದು ಕೆರೆ ತೋರಿಸಲಿ. ಕೆರೆ ಕಟ್ಟುವ ಯೋಗ್ಯತೆ ಸಿದ್ದರಾಮಯ್ಯಗೆ ಇಲ್ಲ. ಇಂತಹವರು ನಾಲ್ವಡಿ ಅವರ ಬಗ್ಗೆ ಮಾತನಾಡುತ್ತಾರೆ. ಹೋಲಿಕೆ ಮಾಡಿಕೊಳ್ಳೋದಾದರೆ ನೆಹರು, ಗಾಂಧೀಜಿಗೆ ಹೋಲಿಕೆ ಮಾಡಿಕೊಳ್ಳಿ ಎಂದು ವಾಗ್ದಾಳಿ ನಡೆಸಿದರು.

**ತನಿಖೆಯಾಗಲಿ...!**

**ಧರ್ಮಸ್ಥಳ ಪ್ರಕರಣ ಕುರಿತು ಪ್ರತಿಕ್ರಿಯಿಸಿ, ಆರೋಪ ಮಾಡುತ್ತಿರುವುದು ಮುಸ್ಲಿಂ. ಇದಕ್ಕೆ ಸಪೋರ್ಟ್ ಮಾಡುತ್ತಿರುವುದು ಕೇರಳ ಸರ್ಕಾರ. ಎಸ್‌ಐಟಿ ರಚನೆಯನ್ನು ಧರ್ಮಸ್ಥಳ ಸ್ವಾಗತ ಮಾಡಿದೆ. ನಾನೂ ಸ್ವಾಗತ ಮಾಡುತ್ತೇನೆ. ತನಿಖೆ ಮಾಡಿ ತಪ್ಪಿತಸ್ಥರು ಯಾರು ಎಂಬುದು ಗೊತ್ತಾಗಲಿ. ಸತ್ಯಾಂಶ ಹೊರ ಬರಲಿ. ಧರ್ಮಸ್ಥಳ ಮಂಜುನಾಥನಿಗೂ ಇದಕ್ಕೂ ಸಂಬಂಧ ಇಲ್ಲ. ಇದರ ಹಿಂದೆ ಯಾರೇ ಇದ್ದರೂ ಅವರಿಗೆ ಶಿಕ್ಷೆ ಆಗಲಿ. ಇದು ಪಿತೂರಿಯ ಒಂದು ಭಾಗ. ಎಷ್ಟು ಬುರುಡೆಗಳು ಹೊರ ಬರ್ತವೆ ಅನ್ನೋದು ಗೊತ್ತಾಗಲಿ.** -ಆರ್.ಅಶೋಕ್, ವಿಧಾನಸಭೆ ವಿಪಕ್ಷ ನಾಯಕ

## ಮೊದಲ ಬಾರಿಗೆ ನಿವೇಶನ ಹರಾಜು

ನೀಡಿದ ಎಂಡಿಎ ಆಯುಕ್ತರಾದ ರಕ್ಷಿತ್ ಅವರು, ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಸುಮಾರು 7 ಸಾವಿರಕ್ಕೂ ಹೆಚ್ಚು ಮೂಲೆ ಹಾಗೂ ಮಧ್ಯಂತರ ನಿವೇಶನಗಳಿವೆ. ಈಗ 200 ನಿವೇಶನಗಳ ಹರಾಜಿಗೆ ಪ್ರಕಟಣೆ ಹೊರಡಿಸಿದ್ದೇವೆ. ಇದರ ಮೌಲ್ಯ ಸುಮಾರು 250 ಕೋಟಿ ರೂಪಾಯಿಗಳಾಗಲಿದೆ. ಉಳಿದ ನಿವೇಶನಗಳನ್ನು ಹಂತ ಹಂತವಾಗಿ ಹರಾಜು ಹಾಕಲಾಗುವುದು ಎಂದು ಮಾಹಿತಿ ನೀಡಿದರು. ಈಗ ವಿವಾದಕ್ಕೆಡೆಯಾಗಿರುವ ಶೇಕಡ 50:50 ಅನುಪಾತದ ನಿವೇಶನ ಹಾಗೂ ಪ್ರೋತ್ಸಾಹದಾಯಕವಾಗಿ ನೀಡಿರುವ ನಿವೇಶಗಳ ಕುರಿತಂತೆ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ. ಈ ನಿವೇಶನದ ಬಗ್ಗೆ ತನಿಖಾ ಆಯೋಗದಲ್ಲಿ ವಿಚಾರಣೆ ನಡೆಯುತ್ತಿರುವ ಕಾರಣ ಯಥಾಸ್ಥಿತಿ ಮುಂದುವರೆಯಲಿದೆ. ತನಿಖಾ ಆಯೋಗದ ವರದಿ ಬಂದ ನಂತರ ಸರ್ಕಾರ ಏನು ತೀರ್ಮಾನ ಮಾಡುತ್ತದೆಯೊ ನೋಡಬೇಕು ಎಂದು ತಿಳಿಸಿದರು. ಆದರೆ ಇ ಹರಾಜು ಮೂಲಕ ನೀಡುವ ನಿವೇಶನಗಳ ಬಗ್ಗೆ ಯಾವುದೇ ತಕರಾರು ಹಾಗೂ ವಿವಾದವಿಲ್ಲ. ಈ ನಿವೇಶನಗಳ ಹರಾಜು ಹಾಗೂ ವಿತರಣೆ ಪ್ರಕ್ರಿಯೆ ಪಾರದರ್ಶಕವಾಗಿದ್ದು, ಖರೀದಿಗೆ ಜನರು ಭಯಪಡುವ ಅಗತ್ಯವಿಲ್ಲ ಎಂದು ರಕ್ಷಿತ್ ಭರವಸೆ ನೀಡಿದರು.

## ಇಂದು ಹುಲಿ ದಿನ

ಹುಲಿ ಸಂರಕ್ಷಿತ ಪ್ರದೇಶದಲ್ಲಿ 150, ಮೈಸೂರು, ಕೊಡಗು ಜಿಲ್ಲಾ ವ್ಯಾಪ್ತಿಯ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ 140, ಚಾಮರಾಜನಗರದ ಬಿಳಿಗಿರಿ ರಂಗನಾಥ ಹುಲಿ ಸಂರಕ್ಷಿತ ಪ್ರದೇಶದಲ್ಲಿ 37 ಹುಲಿಗಳಿವೆ. ಅಲ್ಲದೆ ಭದ್ರಾದಲ್ಲಿ 28, ಕಾಳಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ 17 ಹುಲಿ ಸೇರಿವೆ. ಮಲೆ ಮಹದೇಶ್ವರ ವನ್ಯಧಾಮ, ಕಾವೇರಿ ವನ್ಯಧಾಮದಲ್ಲೂ ಹುಲಿಗಳು ನೆಲೆಸಿವೆ ಹಾಗಾಗಿ ಹಳೆ ಮೈಸೂರು ಪ್ರಾಂತ್ಯ ಹುಲಿ ಆವಾಸ ಸ್ಥಾನವಾಗಿದೆ.

**ಮೈಸೂರು ಸುತ್ತಮುತ್ತ :** ಮೈಸೂರು ಸುತ್ತಮುತ್ತ ಇರುವ ಸಾಮಾಜಿಕ ಅರಣ್ಯ ಪ್ರದೇಶಗಳಲ್ಲೂ ಹುಲಿಗಳು ಸಂಚರಿಸುತ್ತಿವೆ. ಎರಡು ವರ್ಷದ ಹಿಂದೆ ಚಿಕ್ಕಕಾನ್ಯ, ದೊಡ್ಡಕಾನ್ಯ, ಬ್ಯಾತಹಳ್ಳಿ, ವರಕೋಡು ಅರಣ್ಯ, ಮಹದೇವಪುರ, ಶ್ರೀರಂಗಪಟ್ಟಣದ ಮಾದಾಪುರ, ಬನ್ನೂರು ಸಮೀಪವೂ ಹುಲಿ ಸಂಚಾರವಿತ್ತು. ಮೂಲಗಳ ಪ್ರಕಾರ ಮೈಸೂರು ಸುತ್ತಮುತ್ತ 5ರಿಂದ 6 ಹುಲಿಗಳು ಸಾಮಾಜಿಕ ಅರಣ್ಯದಲ್ಲಿ ಬೀಡುಬಿಟ್ಟಿರುವ ಮಾಹಿತಿ ಇದೆ.

**ಮಳೆ ಬರಲು ಹುಲಿಯೇ ಬೇಕು:** ಅರಣ್ಯದಲ್ಲಿ ಹುಲಿ ಸಂಚಾರವಿದ್ದರೆ ಮರಗಳ ಹನನಕ್ಕೆ ಬ್ರೇಕ್ ಬೀಳಲಿದೆ. ಮರಗಳ ಸಂಖ್ಯೆ ಹೆಚ್ಚಾದರೆ ಮಳೆಗೆ ಪೂರಕ ಪರಿಸ್ಥಿತಿ ನೆಲೆಗೊಳ್ಳುತ್ತದೆ. ಇದರಿಂದ ಕಾಡೊಳಗೆ ಇರುವ ಸಣ್ಣ ತೊರೆ, ಜರಿಗಳು ಮರುಜೀವ ಪಡೆದುಕೊಳ್ಳುತ್ತವೆ. ಅದರಿಂದ ನದಿಗಳಲ್ಲಿ ಜೀವಕಳೆ ಕಟ್ಟಿಕೊಳ್ಳುತ್ತವೆ. ಅರಣ್ಯ ಇಲಾಖೆ ನಡೆಸಿದ ಸಂಶೋಧನೆಯಲ್ಲಿ ಸಾಬೀತಾಗಿದೆ.

# ಅಂತೂ ಫೀಲ್ಡ್‌ಗಿಳಿದ ಪೊಲೀಸರು!


ಮೈಸೂರಿನಲ್ಲಿ ಡ್ರಗ್ಸ್ ಮಾಫಿಯಾ ಕಾರ್ಯಾಚರಣೆ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಪೊಲೀಸರು ಡ್ರಗ್ಸ್ ಮಾರಾಟದ ಹಳೆ ಆರೋಪಿಗಳ ಮನೆ, ಪಿಜಿ ಹಾಸ್ಟೆಲ್, ಗೋಡೌನ್‌ಗಳಲ್ಲಿ ಭಾನುವಾರ ಸರಿರಾತ್ರಿವರೆಗೂ ಪರಿಶೀಲನೆ ನಡೆಸಿದರು.

ಮಾರಾಟ ಹಾಗೂ ಸೇವನೆ ಮಾಡುವವರ ಬಗ್ಗೆ ಸಾರ್ವಜನಿಕರನ್ನು ವಿಚಾರಿಸಲಾಗಿದೆ. ಸಾರ್ವಜನಿಕರು ನೀಡಿದ ಮಾಹಿತಿ ಮೇರೆಗೆ ಪುಂಡರು ಸೇರುವ ಸ್ಥಳಗಳಲ್ಲಿ ಗಸ್ತು ಮಾಡಲಾಗಿದೆ. ಟೀ ಅಂಗಡಿಗಳು, ಪಾರ್ಕ್‌ಗಳು, ಗಲ್ಲಿಗಳು ಸೇರಿದಂತೆ ಜನಸಂಚಾರ ಕಡಿಮೆ ಇರುವ ಪ್ರದೇಶಗಳ ಮೇಲೆ ವಿಶೇಷ ಗಮನಹರಿಸಲಾಗಿದೆ. ಮಾದಕ ವಸ್ತು ಮಾರಾಟ ಹಾಗೂ ಸೇವನೆಯಿಂದ ಸಾಮಾಜಿಕ ಸ್ವಾಸ್ಥ್ಯ ಹಾಳಾಗುತ್ತದೆ. ಈ ಬಗ್ಗೆ ತಿಳಿದವರು ಪೊಲೀಸರಿಗೆ ಮಾಹಿತಿ ನೀಡುವ ಮೂಲಕ ಸಹಕರಿಸುವಂತೆ ಮನವಿ ಮಾಡಲಾಗುತ್ತಿದೆ.


ಕಾರ್ಯಾಚರಣೆ ಬಗ್ಗೆ ರಾತ್ರಿ 10 ಗಂಟೆ ಸುಮಾರಿಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಈವರೆಗೆ ಗಾಂಜಾ ಸೇವನೆ ಮಾಡಿದ್ದ 10ಕ್ಕೂ ಹೆಚ್ಚು ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಕಾರ್ಯಾಚರಣೆಯನ್ನು ಮುಂದುವರೆಸಲಾಗುವುದು ಎಂದು ತಿಳಿಸಿದ್ದಾರೆ.

**ಸಮರ ಸಾರಬೇಕು:** ನಗರ ಪೊಲೀಸರು ಆರಂಭಿಸಿರುವ ಪರಿಣಾಮಕಾರಿ ಕಾರ್ಯಾಚರಣೆ ಕೆಲ ದಿನಗಳಿಗಷ್ಟೇ ಸೀಮಿತವಾಗದೆ, ಮೈಸೂರಲ್ಲಿ ಮಾದಕ ವಸ್ತು ಮಾರಾಟ ಹಾಗೂ ಸೇವನೆಗೆ ಇತಿಶ್ರೀ ಹಾಡುವವರೆಗೂ ಮುಂದುವರೆಸಬೇಕು. ಮೈಸೂರನ್ನು ಮಾದಕ ವಸ್ತು ಮುಕ್ತ ನಗರವನ್ನಾಗಿ ಸುಧಾರಿಸುವ ನಿಟ್ಟಿನಲ್ಲಿ ಪೊಲೀಸ್ ಆಯುಕ್ತರು ಪಣ ತೊಡಬೇಕು ಎಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

ಮೈಸೂರಿನ ಬೆಲವತ್ತ ಬಳಿ, ರಿಂಗ್ ರಸ್ತೆಯ ಸರ್ವೀಸ್ ರೋಡ್‌ನ ಶೆಡ್‌ನಲ್ಲಿ ಡ್ರಗ್ಸ್ ತಯಾರು ಹಾಗೂ ಸರಬರಾಜು ಪ್ರಕರಣ ಶನಿವಾರ ರಾತ್ರಿ ಬೆಳಕಿಗೆ ಬಂದಿದ್ದು, ಇಡೀ ರಾಜ್ಯದಲ್ಲಿ ಬಾರೀ ಸದ್ದು ಮಾಡಿದೆ. ಶಾಂತಿ ಹಾಗೂ ಸುರಕ್ಷಿತ ನಗರಿಯಲ್ಲೇ ಡ್ರಗ್ಸ್ ಮಾಫಿಯಾ ಬಯಲಾಗಿರುವುದು ರಾಜಕೀಯ ಮೇಲಾಟಕ್ಕೂ ಅಸ್ತ್ರವಾಗಿದೆ ವಿವಿಧೆಡೆ ಗಾಂಜಾ ಹಾಗೂ ಅಲ್ಪ ಪ್ರಮಾಣದ ಎಂಡಿಎಂಎ ಡ್ರಗ್ಸ್ ಮಾರಾಟವನ್ನು ಭೇದಿಸಿ, ಆರೋಪಿಗಳನ್ನು ಬಂಧಿಸುತ್ತಿದ್ದ ಪೊಲೀಸರು ಇದೀಗ ಸಮರೋಪಾದಿಯಲ್ಲಿ ಕಾರ್ಯಾಚರಣೆ ಆರಂಭಿಸಿದ್ದಾರೆ.

## ಇನ್ಸ್‌ಪೆಕ್ಟರ್ ತಳವಾರ್ ಅಮಾನತು ಆದೇಶ ರದ್ದು!

ಡ್ರಗ್ಸ್ ಮಾಫಿಯಾ ಪತ್ತೆ ಹಿನ್ನೆಲೆಯಲ್ಲಿ ಅಮಾನತಾಗಿದ್ದ ಮೈಸೂರಿನ ನರಸಿಂಹರಾಜ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ ಕೆ.ತಳವಾರ್ ಅವರ ಅಮಾನತು ಆದೇಶವನ್ನು ಒಂದೇ ದಿನದಲ್ಲಿ ರದ್ದುಪಡಿಸಲಾಗಿದೆ. ಮೈಸೂರಿನ ಡ್ರಗ್ಸ್ ತಯಾರಿಕೆ ಪತ್ತೆ ಪ್ರಕರಣದಲ್ಲಿ ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಲಕ್ಷ್ಮಿಕಾಂತ ತಳವಾರ್ ಅವರನ್ನು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಭಾನುವಾರ ಅಮಾನತು ಮಾಡಿದ್ದರು. ಸಿಸಿಬಿ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ಅವರನ್ನು ನರಸಿಂಹರಾಜ ಪೊಲೀಸ್ ಠಾಣೆ ಪ್ರಭಾರ ಇನ್ಸ್‌ಪೆಕ್ಟರ್ ಆಗಿ ನಿಯೋಜನೆ ಮಾಡಲಾಗಿತ್ತು ಆದರೆ ಕೇವಲ 24 ಗಂಟೆಯೊಳಗೆ ಲಕ್ಷ್ಮಿಕಾಂತ ತಳವಾರ್ ಅವರ ಅಮಾನತು ಆದೇಶ ರದ್ದಾಗಿದ್ದು, ಬಾರೀ ಆಶ್ಚರ್ಯ ಮೂಡಿಸಿದೆ.


ಲಕ್ಷ್ಮಿಕಾಂತ ಕೆ.ತಳವಾರ್

## ಕರಾವಳಿ ಭಾಗದಲ್ಲಿ ಭಾರಿ ಮಳೆ

## ಭಾರಿ ಭೂಕುಸಿತ; ಮಂಗಳೂರು–ಬೆಂಗಳೂರು ಹೆದ್ದಾರಿ ಸಂಚಾರ ಅಸ್ತವ್ಯಸ್ತ

ಮಂಗಳೂರು, ಜು.28– ಕಡಬ ತಾಲೂಕಿನ ಕೌಕ್ರಾಡಿ ಗ್ರಾಮದ ಮಣ್ಣಗುಂಡಿಯಲ್ಲಿ ಭಾನುವಾರ ತಡರಾತ್ರಿ ಭಾರಿ ಭೂಕುಸಿತದಿಂದಾಗಿ ರಾಷ್ಟ್ರೀಯ ಹೆದ್ದಾರಿ 75 ರಲ್ಲಿ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆ ನಂತರ ಪೊಲೀಸರು ಹೆದ್ದಾರಿಗೆ ಸಂಪರ್ಕ ಕಲ್ಪಿಸುವ ಹಲವಾರು ರಸ್ತೆಗಳ ಮೂಲಕ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಮಣ್ಣು ಕುಸಿತಗೊಂಡಿದ್ದ ರಸ್ತೆಯನ್ನು ಮುಚ್ಚಲಾಗಿದೆ. ಹೆದ್ದಾರಿಯಲ್ಲಿನ ಮಣ್ಣನ್ನು ತೆರವುಗೊಳಿಸುವ ಕೆಲಸ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

ಪೊಲೀಸರ ಪ್ರಕಾರ ಭಾರಿ ವಾಹನಗಳನ್ನು ಲಭ್ಯವಿರುವ ರಾಜ್ಯ ಹೆದ್ದಾರಿಗಳ ಮೂಲಕ ಮತ್ತು ಸಣ್ಣ ವಾಹನಗಳನ್ನು ಪ್ರಮುಖ ಜಿಲ್ಲಾ ರಸ್ತೆಗಳ ಮೂಲಕ ಸಂಚರಿಸಲು ಅವಕಾಶ ಮಾಡಿಕೊಡಲಾಗಿದೆ. ಇದೀಗ ಬೆಂಗಳೂರು ಮತ್ತು ಮಂಗಳೂರು ನಡುವಿನ ಪ್ರಯಾಣಿಕರು ಒಳ ರಸ್ತೆಗಳಲ್ಲಿ ಪ್ರಯಾಣಿಸಬೇಕಿದೆ.

ಮಣ್ಣು ಕುಸಿತಗೊಂಡಿರುವ ಪ್ರದೇಶದಲ್ಲಿ ಭಾರಿ ವಾಹನಗಳನ್ನು ತಡೆಹಿಡಿಯಲಾಗಿದ್ದು, ರಾಷ್ಟ್ರೀಯ ಹೆದ್ದಾರಿಯಲ್ಲಿನ ಮಣ್ಣು ತೆರವುಗೊಂಡ ನಂತರವೇ ಅವುಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

## ಸೆನ್ ಎಸ್‌ಐ ಸೇರಿ ನಾಲ್ವರು ಅಮಾನತು

ಲಕ್ಷ ರೂ.ಗಳನ್ನು ಕಿತ್ತುಕೊಂಡಿದ್ದಾರೆ. ಈ ಮೂರು ಲಕ್ಷವನ್ನು ಸೀಜ್ ಮಾಡಿರುವುದಾಗಿ ಸಮವಸ್ತ್ರ ಧರಿಸಿದ್ದ ವ್ಯಕ್ತಿ ಹೇಳಿದ್ದಲ್ಲದೇ, ಕೇಸ್ ಹಾಕಬಾರದೆಂದರೆ ಇನ್ನೂ ಒಂದು ಲಕ್ಷ ರೂ. ನೀಡಬೇಕು ಎಂದು ಡಿಮ್ಯಾಂಡ್ ಮಾಡಿದ್ದಾನೆ ಈ ಸಂದರ್ಭದಲ್ಲಿ ಸಚ್ಚಿದಾನಂದ ಅವರು ತಮ್ಮ ಬಳಿ ಬೇರೆ ಹಣ ಇಲ್ಲ, ಬ್ಯಾಂಕ್ ಖಾತೆಯಲ್ಲಿ 70 ಸಾವಿರ ರೂ. ಮಾತ್ರ ಇದೆ ಎಂದು ತಿಳಿಸಿದಾಗ, ಆ ಹಣವನ್ನು ಆನ್‌ಲೈನ್ ಮೂಲಕ ಸಯ್ಯದ್ ಇಮ್ರಾನ್ ಎಂಬುವನಿಗೆ ವರ್ಗಾವಣೆ ಮಾಡಿಸಿಕೊಂಡಿದ್ದಾರೆ.

ಕೆಲ ದಿನಗಳ ನಂತರ ತಾವು ವಂಚನೆಗೊಳಗಾಗಿರುವುದನ್ನು ಮನವರಿಕೆಮಾಡಿಕೊಂಡ ಸಚ್ಚಿದಾನಂದ ಅವರು ಚಾಮರಾಜನಗರ ಪಟ್ಟಣ ಠಾಣೆಗೆ ದೂರು ಸಲ್ಲಿಸಿದ್ದಾರೆ. ಪೊಲೀಸರು, ಅನ್ಸಾರಿ ಹಾಗೂ ಸಯ್ಯದ್ ಇಮ್ರಾನ್ ಎಂಬುವರನ್ನು ಬಂಧಿಸಿದ್ದು, ಸಚ್ಚಿದಾನಂದ ಅವರನ್ನು ಬೆದರಿಸಿ, ಹಣ ಸುಲಿಗೆ ಮಾಡಿದ ನಕಲಿ ಪೊಲೀಸರು ಯಾರು ಎಂಬುದನ್ನು ಪತ್ತೆ ಹಚ್ಚಲು ಹೋಟೆಲ್‌ನ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಚಾಮರಾಜನಗರ ಪಟ್ಟಣ ಠಾಣೆಯ ಇನ್‌ಸ್ಪೆಕ್ಟರ್ ಬಸವರಾಜು ಬೆಚ್ಚಿಬೀಳುವಂತಹ ದೃಶ್ಯ ಕಂಡುಬಂದಿದೆ. ಸಚ್ಚಿದಾನಂದ ಅವರನ್ನು ಬೆದರಿಸಿ ಸುಲಿಗೆ ಮಾಡಲು ಪೊಲೀಸ್ ಸಮವಸ್ತ್ರದಲ್ಲಿ ಬಂದದ್ದು ನಕಲಿ ಪೊಲೀಸರಲ್ಲ, ಬದಲಾಗಿ ಸೆನ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಅಯ್ಯನಗೌಡ ಹಾಗೂ ತಮ್ಮದೇ ಠಾಣೆಯ (ಪಟ್ಟಣ ಠಾಣೆ) ಕಾನ್‌ಸ್ಟೇಬಲ್‌ಗಳಾದ ಮೋಹನ್, ಬಸವಣ್ಣ ಮತ್ತು ಮಹೇಶ್ ಎಂಬುದು ಗೊತ್ತಾಗಿದೆ.

ತಕ್ಷಣವೇ ಈ ವಿಷಯವನ್ನು ಬಸವರಾಜು ಅವರು ಜಿಲ್ಲಾ ಎಸ್ಪಿ ಡಾ. ಟಿ.ಬಿ. ಕವಿತಾ ಅವರಿಗೆ ತಿಳಿಸಿ, ಅವರ ನಿರ್ದೇಶನದಂತೆ ಈ ನಾಲ್ವರನ್ನೂ ಬಂಧಿಸಲು ಮುಂದಾಗುವಷ್ಟರಲ್ಲಿ ವಿಷಯ ತಿಳಿದು ಅವರೆಲ್ಲರೂ ಠಾಣೆಗಳಿಂದ ಪರಾರಿ ಆಗಿದ್ದಾರೆ. ಇದೀಗ ಜಿಲ್ಲಾ ಎಸ್ಪಿ ಕವಿತಾ ಅವರು ಸಬ್‌ಇನ್‌ಸ್ಪೆಕ್ಟರ್ ಸೇರಿದಂತೆ ನಾಲ್ವರು ಪೊಲೀಸರನ್ನು ಅಮಾನತು ಪಡಿಸಿದ್ದು, ತಲೆಮರೆಸಿಕೊಂಡಿರುವ ಅವರಿಗಾಗಿ ಹುಡುಕಾಟ ನಡೆದಿದೆ.

## ಜನತೆಯಲ್ಲಿ ಆತಂಕದ ನುಡಿ 'ಅಯ್ಯೋ ಏನು ಕಾದಿದೆಯೋ!'

ಮುಚ್ಚಿಕೊಂಡಿದ್ದರಿಂದ ಅಲ್ಲಿದ್ದ ಭಕ್ತರು ಏನು ಕೇಡುಗಾಲ ಕಾದಿದೆಯೋ ಎಂದು ಚಿಂತೀಡಾಗಿದ್ದರು. ಸರಿ, ಬಾಗಿಲು ತೆರೆಯೋಣವೆಂದು, ಮುಂದೆ ಹೋಗಿ ಎಷ್ಟೆ ಪ್ರಯತ್ನಿಸಿದರೂ ಸುಮಾರು 50 ಅಡಿ ಎತ್ತರದ ಬೃಹತ್ ಬಾಗಿಲುಗಳನ್ನು ಅಲುಗಾಡಿಸಲು ಕೂಡಾ ಸಾಧ್ಯವಾಗಿಲ್ಲ. ಕೊನೆಗೆ ನಗರಸಭೆ ಸಿಬ್ಬಂದಿ ಜೆಸಿಬಿ ತಂದು ನಾಜೂಕಾಗಿ ಈ ಬಾಗಿಲುಗಳನ್ನು ತೆರೆಯುವಲ್ಲಿ ಯಶಸ್ವಿಯಾದರು. ಶತಮಾನಗಳಿಂದ ಇರುವ ಕೋಟೆ ಬಾಗಿಲುಗಳು ಸ್ವಲ್ಪ ಮಟ್ಟಿಗೆ ಶಿಥಿಲಗೊಂಡಿವೆ. ಆದರೂ ಗಟ್ಟಿಮುಟ್ಟಾಗಿದ್ದು, ಅದನ್ನು ಅಲುಗಾಡಿಸಲು ಸಾಧ್ಯವಾಗುವುದಿಲ್ಲ. ಇಂತಹ ಬಾಗಿಲುಗಳು ಭಾನುವಾರ ಬೀಸಿದ ಬಾರೀ ಬಿರುಗಾಳಿಗೆ ಮುಚ್ಚಿಕೊಂಡಿರಬಹುದು ಎಂದು ಕೆಲವರು ಹೇಳುತ್ತಿದ್ದಾರೆ. ಆದರೂ, ಮಡಿಕೇರಿ ಕೋಟೆ ಮತ್ತು ಅಲ್ಲಿನ ಗಣಪತಿ ದೇವಸ್ಥಾನದ ಮೇಲೆ ಭಕ್ತಿ, ನಂಬಿಕೆ ಹೊಂದಿರುವ ಭಕ್ತಾದಿಗಳು ಗಾಳಿಯಿಂದ ಕೋಟೆ ಬಾಗಿಲು ಮುಚ್ಚಿವೆ ಎಂಬುದನ್ನು ನಂಬಲು ಸಿದ್ಧರಿಲ್ಲ ಅವರವರಿಗೆ ತೋಚಿದ ಹಾಗೆ ವಿಶ್ಲೇಷಣೆ ಮಾಡಿಕೊಳ್ಳುತ್ತಾ ಏನೋ ಅಪಚಾರವಾಗಿದೆ ಎಂಬ ರೀತಿಯಲ್ಲಿ ಮಾತನಾಡಿಕೊಳ್ಳುತ್ತಿದ್ದಾರೆ.

ಮಡಿಕೇರಿ ಕೋಟೆಯೂ ಶಿಥಿಲಾವಸ್ಥೆ ತಲುಪಿದ್ದು, ವಕೀಲರೊಬ್ಬರ ಪ್ರಯತ್ನದಿಂದಾಗಿ ಹೈಕೋರ್ಟ್ ಆದೇಶದ ಮೇರೆಗೆ ಭಾರತೀಯ ಪುರಾತತ್ವ ಇಲಾಖೆಯು ಕೋಟೆಯ ದುರಸ್ಥಿ ಕಾರ್ಯ ಕೈಗೊಂಡಿದೆ. ಅಲ್ಲಿರುವ ವಸ್ತು ಸಂಗ್ರಹಾಲಯವನ್ನು ಈಗಾಗಲೇ ದುರಸ್ತಿಗೊಳಿಸಿದ್ದು, ಗತ ವೈಭವ ಮರುಕಳಿಸುವಂತೆ ಕಾಣುತ್ತಿದೆ. ಕೋಟೆಯ ದುರಸ್ತಿ ಕಾರ್ಯ ಸಮರ್ಪಕವಾಗಿ ಮುಗಿದ ಬಳಿಕ ಮಡಿಕೇರಿ ಕೋಟೆಯು ಒಂದು ಸ್ಮಾರಕವಾಗಿ ರೂಪುಗೊಂಡು ಆಕರ್ಷಣೆ ತಾಣವಾಗುವ ನಿರೀಕ್ಷೆ ಇಲ್ಲಿನ ಜನರದ್ದಾಗಿದೆ. ಈ ಮಧ್ಯೆ ಹಠಾತ್ತನೇ ಕೋಟೆ ಬಾಗಿಲುಗಳು ತಾನಾಗಿಯೇ ಮುಚ್ಚಿಕೊಂಡಿದ್ದು, ಪರಿಣಿತರು ಪರಿಶೀಲನೆ ನಡೆಸಿ, ಈ ಬಾಗಿಲುಗಳನ್ನು ಕೂಡಾ ದುರಸ್ತಿಪಡಿಸಬೇಕೆಂಬುದು ನಾಗರಿಕರ ಒತ್ತಾಯವಾಗಿದೆ.

## ಪೊಲೀಸ್ ಅಧಿಕಾರಿಗಳ ಅಮಾನತು ವಾಪಸ್


ವಿಕಾಸ್‌ಕುಮಾರ್ | ಶೇಖರ್ | ಬಾಲಕೃಷ್ಣ | ಗಿರೀಶ್

ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ನೇತೃತ್ವದ ಏಕಸದಸ್ಯ ಆಯೋಗ ಈಗಾಗಲೇ ವರದಿ ಸಲ್ಲಿಸಿದೆ. ಅಲ್ಲದೆ, ಈ ಅಧಿಕಾರಿಗಳು ತಮ್ಮ ಅಮಾನತು ವಾಪಸ್ ಪಡೆಯುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಈ ಕಾರಣಕ್ಕೆ ಅಮಾನತು ಆದೇಶವನ್ನು ಮರುಪರಿಶೀಲಿಸಿ, ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

# ಮೈಸೂರಲ್ಲಿ ಡ್ರಗ್ಸ್ ಮಾಫಿಯಾ; ಕೇಂದ್ರ ಗೃಹ ಇಲಾಖೆಗೆ ಮಾಹಿತಿ

**ಮೈಸೂರು-ಕೊಡಗು ಲೋಕಸಭಾ ಸದಸ್ಯ ಯದುವೀರ್ ಹೇಳಿಕೆ**

- ಮೈಸೂರಲ್ಲಿ ಡ್ರಗ್ಸ್ ತಯಾರಿಕೆ, ಶೇಖರಣೆ ಆಘಾತಕಾರಿ ವಿಚಾರ
- ಪೊಲೀಸರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು
- ಮೈಸೂರಿನ ಘನತೆಗೆ ಇದೊಂದು ಭಾರಿ ಧಕ್ಕೆ ತರುವಂತಹ ವಿಚಾರ
- ನರಸಿಂಹರಾಜ ಕ್ಷೇತ್ರದಲ್ಲಿ ಡ್ರಗ್ಸ್ ಹಾವಳಿ ವ್ಯಾಪಕ ಆತಂಕಕಾರಿ

ಮೈಸೂರು, ಜು.28(ಬಿಎಲ್‌ಯು)- ಮೈಸೂರಿನಲ್ಲಿ ಡ್ರಗ್ಸ್ ಮಾಫಿಯಾ ಕಾರ್ಯಾಚರಿಸುತ್ತಿರುವ ವಿಚಾರವನ್ನು ಕೇಂದ್ರ ಗೃಹ ಇಲಾಖೆ ಗಮನಕ್ಕೆ ತಂದು ಸೂಕ್ತ ಕ್ರಮಕ್ಕೆ ಆಗ್ರಹಿಸುತ್ತೇನೆ ಎಂದು ಮೈಸೂರು-ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ನಡೆಯುತ್ತಿರುವ ಯೂನಿಟಿ ಮಾಲ್ ಕಾಮಗಾರಿ ಪರಿಶೀಲನೆ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೈಸೂರಿನಂತಹ ಶಾಂತಿ ಮತ್ತು ಘನತೆಯುಳ್ಳ ನಗರದಲ್ಲಿ ಡ್ರಗ್ಸ್ ಹಾವಳಿ ವ್ಯಾಪಕವಾಗಿರುವುದು ಬಹಳ ಗಂಭೀರವಾದ ವಿಚಾರ. ಈ ಪ್ರಕರಣ ಆಶ್ಚರ್ಯ ಉಂಟುಮಾಡಿದೆ ಎಂದು ಅಭಿಪ್ರಾಯಪಟ್ಟರು.

ಡ್ರಗ್ಸ್ ತಯಾರಾಗುತ್ತಿದ್ದ ಪ್ರಕರಣವನ್ನು ಸ್ಥಳೀಯ ಪೊಲೀಸರು ಗಂಭೀರವಾಗಿ ಪರಿಗಣಿಸಬೇಕು. ಆದರೂ ಈ ವಿಚಾರದ ಬಗ್ಗೆ ಕೇಂದ್ರ ಗೃಹ ಇಲಾಖೆ ಗಮನಕ್ಕೆ ತಂದು, ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುತ್ತೇನೆ ಎಂದು ತಿಳಿಸಿದರು.

ಡ್ರಗ್ಸ್ ತಯಾರಿಕೆ ಹಾಗೂ ಮಾರಾಟ ಮಾಡುವುದು ಮೈಸೂರು ಮಾತ್ರವಲ್ಲದೆ ದೇಶದ ಎಲ್ಲಿಯೂ ನಡೆಯಬಾರದು. ಇಂತಹ ಪ್ರಕರಣಗಳನ್ನು ಭೇದಿಸುವುದರ ಜೊತೆಗೆ, ಪೊಲೀಸರಿಗೆ ಅವರದೇ ಆದ ಕೆಲಸದ ಒತ್ತಡವಿರುತ್ತದೆ. ಆದರೂ ಸಮಾಜದ ಸ್ವಾಸ್ಥ್ಯ ಕೆಡಿಸುವ ಹಾಗೂ ಯುವ ಸಮೂಹವನ್ನು ತಪ್ಪು ದಾರಿಗೆಳೆಯುವ ಇಂತಹ ಪ್ರಕರಣದ ಬಗ್ಗೆ ಸ್ಥಳೀಯ ಪೊಲೀಸರು ಇನ್ನು ಮುಂದಾದರೂ ಗಂಭೀರವಾಗಿ ಪರಿಗಣಿಸಿ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ನರಸಿಂಹರಾಜ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಲ್ಯೂಷನ್ ಹಾಗೂ ಡ್ರಗ್ಸ್ ಮಾರಾಟವಾಗುತ್ತಿದೆ. ಜೊತೆಗೆ ಹಲವು ಕಾಲೇಜುಗಳ ಬಳಿ ಕೂಡ ಮಾದಕ ವಸ್ತು ಮಾರಾಟ ಮಾಡುತ್ತಿರುವುದು ಆತಂಕಕಾರಿ ವಿಚಾರವಾಗಿದೆ. ಈ ಬಗ್ಗೆ ಸಾಕಷ್ಟು ದೂರುಗಳಿದ್ದು, ಇಂತಹ ಪ್ರಕರಣಗಳನ್ನು ಭೇದಿಸಲು ಪೊಲೀಸ್ ಇಲಾಖೆಗೆ ಶಕ್ತಿ ತುಂಬುವ ಕೆಲಸ ಮಾಡಬೇಕು ಎಂದು ಸಂಸದ ಯದುವೀರ್ ಅಭಿಪ್ರಾಯಪಟ್ಟರು.

ಡ್ರಗ್ಸ್ ಮಾರಾಟಕ್ಕೆ ಕಡಿವಾಣ ಹಾಕುವಂತೆ ನಾನು ಹಾಗೂ ಮಂಗಳೂರು ಸಂಸದ ಬ್ರಿಜೇಶ್ ಚೌಟಾ ಧ್ವನಿ ಎತ್ತಿದ್ದೇವೆ. ನಮ್ಮ ಆಗ್ರಹವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಮನವಿ ಮಾಡಿದರು.

ಚುನಾವಣೆ ಪೂರ್ವದಲ್ಲಿ ಮೈಸೂರನ್ನು ಮುಖ್ಯಮಂತ್ರಿಗಳ ಪ್ರತಿಷ್ಠೆ ಕ್ಷೇತ್ರ ಎಂದು ಹೇಳುತ್ತಾರೆ. ಚುನಾವಣೆ ನಂತರ ಇಂತಹ ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಿ, ಕಾನೂನು ಸುವ್ಯವಸ್ಥೆ ಸರಿಪಡಿಸಬೇಕು. ಈ ಮೂಲಕ ಮೈಸೂರಿನ ಪ್ರತಿಷ್ಠೆಯನ್ನು ಉಳಿಸಬೇಕು ಎಂದು ಯದುವೀರ್ ಆಗ್ರಹಿಸಿದರು.

**ವಿವೇಚನೆಗೆ ಬಿಟ್ಟ ವಿಚಾರ:** ಸಿದ್ದರಾಮಯ್ಯ ಅವರು ಮೈಸೂರು ಮಹಾರಾಜರಿಗಿಂತಲೂ ಹೆಚ್ಚಿನ ಅಭಿವೃದ್ಧಿ ಮಾಡಿದ್ದಾರೆಂಬ ಯತೀಂದ್ರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಯದುವೀರ್ ಅವರು, ಈ ಬಗ್ಗೆ ರಾಜಕೀಯ ಪಕ್ಷಗಳು ಮಾತ್ರವಲ್ಲದೆ ಸಾರ್ವಜನಿಕರು ಸಾಕಷ್ಟು ಪ್ರತಿಕ್ರಿಯೆ ನೀಡಿದ್ದಾರೆ. ಈ ವಿಚಾರವಾಗಿ ಕ್ಷಮೆ ಕೇಳುವುದು, ಬಿಡುವುದು ಅವರ ವಿವೇಚನೆಗೆ ಬಿಟ್ಟ ವಿಚಾರ ಎಂದು ಸ್ಪಷ್ಟಪಡಿಸಿದರು.

**ವಿಂಗಡಣೆ ಸರಿಯಲ್ಲ:** ನಾಯಕತ್ವ ಇರುವುದು ಕೆಲಸ ಮಾಡುವುದಕ್ಕೇ ಹೊರತು ಬೇರೆಯವರ ಕೆಲಸವನ್ನು ಹೋಲಿಕೆ ಮಾಡಲು ಅಲ್ಲ ಎಂದು ತಿರುಗೇಟು ನೀಡಿದ ಯದುವೀರ್, ಯಾರೇ ಅಧಿಕಾರಕ್ಕೆ ಬಂದರೂ ಅವರ ಕೆಲಸವನ್ನು ಅವರು ಮಾಡುತ್ತಾರೆ. ಅವರು ಹೆಚ್ಚು ಕೆಲಸ ಮಾಡಿದ್ದಾರೆ, ಇವರು ಕಡಿಮೆ ಕೆಲಸ ಮಾಡಿದ್ದಾರೆ ಎಂದು ವಿಂಗಡಣೆ ಮಾಡುವುದು ಸರಿಯಲ್ಲ. ಈ ವಿಚಾರವಾಗಿ ಯತೀಂದ್ರ ಅವರ ಮನಸ್ಸಿನಲ್ಲಿ ಯಾವ ಆಲೋಚನೆ ಇದೆ ಎಂಬುದನ್ನು ನಾನು ಹೇಳಲು ಸಾಧ್ಯವಿಲ್ಲ ಎಂದು ಯದುವೀರ್ ಸ್ಪಷ್ಟಪಡಿಸಿದರು.

## ರಮ್ಯಾ-ದರ್ಶನ್ ಫ್ಯಾನ್ಸ್ ವಾರ್‌ನಲ್ಲಿ ದ್ವೇಷದ ಕಾಮೆಂಟ್ ಹಾಕಬಾರದು

ನಟಿ ರಮ್ಯಾ ಹಾಗೂ ದರ್ಶನ್ ಫ್ಯಾನ್ಸ್ ವಾರ್ ಬಗ್ಗೆ ಪ್ರತಿಕ್ರಿಯೆ ನೀಡಿದ ಯದುವೀರ್, ಯಾವುದೇ ಅಭಿಪ್ರಾಯ ವ್ಯಕ್ತಪಡಿಸುವವರು ಸಭ್ಯತೆ ಎಲ್ಲೆ ಮೀರಬಾರದು. ದ್ವೇಷದ ಕಾಮೆಂಟ್‌ಗಳನ್ನು ಹಾಕುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು. ದರ್ಶನ್ ಪರ, ರಮ್ಯಾ ವಿರುದ್ಧ ಎಂಬ ಯಾವುದೇ ರೀತಿಯ ಪರಿವಿಂಗಡಣೆ ಮಾಡದ ಯದುವೀರ್ ಅವರು, ಸಮಾಜದ ಸ್ವಾಸ್ಥ್ಯ ಹದಗೆಡದಂತೆ ಪ್ರತಿಯೊಬ್ಬರೂ ತಮ್ಮ ನಡವಳಿಕೆ ನಿರ್ಧರಿಸಿಕೊಳ್ಳಬೇಕು ಎಂದು ಸೋಷಿಯಲ್ ಮೀಡಿಯಾದಲ್ಲಿ ಕಾಮೆಂಟ್ ಹಾಕುವವರಿಗೆ ಸಲಹೆ ನೀಡಿದರು.

ಪ್ರತಿಯೊಬ್ಬರಿಗೂ ವಾಕ್ ಸ್ವಾತಂತ್ರ್ಯವಿದೆ. ಹಾಗೆಂದ ಮಾತ್ರಕ್ಕೆ ಮನಸ್ಸಿಗೆ ಬಂದಂತೆ ಅಭಿಪ್ರಾಯ ವ್ಯಕ್ತಪಡಿಸಬಾರದು. ಸೋಷಿಯಲ್ ಮೀಡಿಯಾದ ಈ ಬೆಳವಣಿಗೆಯನ್ನು ಪ್ರತಿಯೊಬ್ಬರು ಎದುರಿಸಬೇಕಾಗಿದೆ ಎಂದು ಹೇಳಿದರು.

ಸೋಷಿಯಲ್ ಮೀಡಿಯಾದಲ್ಲಿ ಕಾಮೆಂಟ್ ಹಾಕುವ ಅವಕಾಶವನ್ನು ದುರ್ಬಳಕೆ ಮಾಡಿಕೊಳ್ಳಬಾರದು. ಇದನ್ನು ಸರಿಯಾದ ರೀತಿಯಲ್ಲಿ ಬಳಸಿದರೆ ಆರೋಗ್ಯಕರ ವಾತಾವರಣ ನಿರ್ಮಾಣವಾಗುತ್ತದೆ. ಈ ನಿಟ್ಟಿನಲ್ಲಿ ನಡವಳಿಕೆಯನ್ನು ಬದಲಾಯಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ದರ್ಶನ್ ಪ್ರಕರಣದಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ನ್ಯಾಯಾಲಯದಲ್ಲಿ ಕೂಡ ವಿಚಾರಣೆ ನಡೆಯುತ್ತಿದೆ. ಹೀಗಿರುವಾಗ ನಾವು ನಮ್ಮ ವೈಯಕ್ತಿಕ ಹೇಳಿಕೆ ನೀಡುವುದು ಸಮಂಜಸವಲ್ಲ ಎಂದು ಇದೇ ವೇಳೆ ಸ್ಪಷ್ಟಪಡಿಸಿದರು.

# ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಯೂನಿಟಿ ಮಾಲ್ ನಿರ್ಮಾಣ ಕಾರ್ಯ ಆರಂಭ

**ಮೈಸೂರು-ಕೊಡಗು ಸಂಸದ ಯದುವೀರ್ ಒಡೆಯರ್ ಪರಿಶೀಲನೆ**



ಮೈಸೂರಿನ ಎಂ.ಜಿ.ರಸ್ತೆ ಎದುರಿನ ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಯೂನಿಟಿ ಮಾಲ್ ಕಾಮಗಾರಿ ಪರಿಶೀಲಿಸಿದ ಸಂಸದ ಯದುವೀರ್ ಒಡೆಯರ್, ಅಧಿಕಾರಿಗಳಿಂದ ಮಾಹಿತಿ ಪಡೆದರು.

ಮೈಸೂರು, ಜು.28(ಬಿಎಲ್‌ಯು)- ಮೈಸೂರಿನ ಎಂ.ಜಿ.ರಸ್ತೆಯ ಎದುರಿನ ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿ 198 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿರುವ ಯೂನಿಟಿ ಮಾಲ್ ಅಥವಾ ಏಕತಾ ಮಾಲ್ ನಿರ್ಮಾಣ ಕಾಮಗಾರಿ ಆರಂಭವಾಗಿದ್ದು, ಇಂದು ಮೈಸೂರು-ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪರಿಶೀಲನೆ ನಡೆಸಿದರು.

ರಾಜ್ಯ ಹಾಗೂ ಜಿಲ್ಲೆಯ ಭೌಗೋಳಿಕ ಹಿನ್ನೆಲೆಯ ಪ್ರಮುಖ ಪದಾರ್ಥಗಳನ್ನು ಒಂದೇ ಸೂರಿನಡಿ ಮಾರಾಟ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರದ ಅನುದಾನದಡಿ ಯೂನಿಟಿ ಮಾಲ್ ನಿರ್ಮಾಣವಾಗುತ್ತಿದೆ. ಇದರಿಂದ ಸ್ಥಳೀಯರು ಮಾತ್ರವಲ್ಲದೆ ಪ್ರವಾಸಿಗರಿಗೂ ಅನುಕೂಲವಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಯೂನಿಟಿ ಮಾಲ್ ನಿರ್ಮಾಣದಿಂದ ಸಾವಿರಾರು ಜನರಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಉದ್ಯೋಗ ದೊರೆಯುತ್ತದೆ. ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಮಲ್ಲಿಗೆ, ಮೈಸೂರು ವಿಳ್ಳೆದೆಲೆ ಸೇರಿದಂತೆ ಮೈಸೂರಿನಲ್ಲಿ ಪ್ರಖ್ಯಾತಿ ಹೊಂದಿರುವ ವಸ್ತುಗಳನ್ನು ಒಂದೇ ಸೂರಿನಡಿ ಮಾರಾಟ ಮಾಡಲಾಗುತ್ತದೆ. ಅಲ್ಲದೆ ಕರ್ನಾಟಕದ ಎಲ್ಲಾ ಜಿಲ್ಲೆಗಳ ವಸ್ತುಗಳ ಮಾರಾಟಕ್ಕೂ ಇಲ್ಲಿ ಅವಕಾಶ ಕಲ್ಪಿಸಲಾಗುತ್ತದೆ ಎಂದರು.

ಸ್ಥಳೀಯ ವ್ಯಾಪಾರಿಗಳನ್ನು ಉತ್ತೇಜಿಸುವುದು, ರಾಷ್ಟ್ರೀಯತೆಯನ್ನು ಬೆಳೆಸುವ ದೃಷ್ಟಿಯಿಂದ ಕೇಂದ್ರ ಸರ್ಕಾರ ದೇಶದ ಎಲ್ಲಾ ರಾಜ್ಯಗಳಲ್ಲಿ ಯೂನಿಟಿಮಾಲ್ ನಿರ್ಮಿಸುತ್ತಿದೆ. ಅಂತರರಾಷ್ಟ್ರೀಯ ಮಾದರಿಯಲ್ಲಿ ಕಾಂಪ್ಲೆಕ್ಸ್ ನಿರ್ಮಾಣವಾಗಲಿದ್ದು, ಇದು ಪಾರಂಪರಿಕ ಶೈಲಿಯಲ್ಲಿ ಇರುತ್ತದೆ. ರಾಜ್ಯದ ಪ್ರತಿ ಜಿಲ್ಲೆ ಹಾಗೂ ಇತರೆ ರಾಜ್ಯದ ವಸ್ತುಗಳ ಮಾರಾಟಕ್ಕೆ 90 ಮಳಿಗೆಗಳನ್ನು ನಿರ್ಮಿಸಲಾಗುವುದು ಎಂದು ಹೇಳಿದರು.

ಪ್ರಮುಖವಾಗಿ ಮೈಸೂರು ಸೇರಿದಂತೆ ಇತರೆ ಜಿಲ್ಲೆ ಹಾಗೂ ರಾಜ್ಯಗಳ ಜಿಐ ಟ್ಯಾಗ್ ಹೊಂದಿರುವ ವಸ್ತುಗಳನ್ನು ಮಾರಾಟ ಮಾಡಲು ಆದ್ಯತೆ ನೀಡಲಾಗುವುದು ಎಂದು ಯದುವೀರ್ ತಿಳಿಸಿದರು.

## ಅವರು ಕರೆಯಲಿಲ್ಲ... ನಾನು ಹೋಗಲಿಲ್ಲ...

ಮೈಸೂರು ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಯೂನಿಟಿ ಮಾಲ್ ಕಾಮಗಾರಿ ಪರಿಶೀಲನೆ ವೇಳೆ ಕರ್ನಾಟಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಗೈರು ಹಾಜರಿದ್ದರು. ಈ ಬಗ್ಗೆ ಅಯೂಬ್ ಖಾನ್ ಅವರನ್ನು ಸಂಪರ್ಕಿಸಿದಾಗ, ಯದುವೀರ್ ಅವರು ಯೂನಿಟಿ ಮಾಲ್ ಕಾಮಗಾರಿ ಪರಿಶೀಲನೆಗೆ ಬಂದ ಸಂದರ್ಭದಲ್ಲಿ ನನ್ನನ್ನು ಆಹ್ವಾನಿಸಿರಲಿಲ್ಲ. ಆದ ಕಾರಣ ನಾನು ಅಲ್ಲಿಗೆ ಹೋಗಲಿಲ್ಲ ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಸರ್ಕಾರದ ಅನುದಾನದಲ್ಲಿ ಯೂನಿಟಿ ಮಾಲ್ ನಿರ್ಮಾಣವಾಗುತ್ತಿದೆ. ನಿರ್ಮಾಣ ಕಾರ್ಯ ಪೂರ್ಣಗೊಂಡ ನಂತರ ನಿರ್ವಹಣೆ ಕಾರ್ಯವನ್ನು ರಾಜ್ಯ ಸರ್ಕಾರಕ್ಕೆ ನೀಡಲಾಗುತ್ತದೆ. ತರುವಾಯ ಅದರಿಂದ ಬರುವ ಆದಾಯದಲ್ಲಿ ಕೇಂದ್ರ ಸರ್ಕಾರದ ಅನುದಾನವನ್ನು ಸಾಲ ಮರುಪಾವತಿ ರೂಪದಲ್ಲಿ ತೀರಿಸಲಾಗುವುದು ಎಂದು ಅಯೂಬ್‌ಖಾನ್ ತಿಳಿಸಿದರು.

## ಮಲ್ಲಿಕಾರ್ಜುನ ಖರ್ಗೆ ಪುತ್ರ ಮಿಲಿಂದ್ ಆರೋಗ್ಯ ಸ್ಥಿತಿ ಗಂಭೀರ

**ಬೆಂಗಳೂರು:** ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ ಮಿಲಿಂದ್ ಖರ್ಗೆ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆದಿದೆ.



ಕ್ಯಾನ್ಸರ್‌ನಿಂದ ಬಳಲುತ್ತಿರುವ ಮಿಲಿಂದ್ ಕಳೆದ ಕೆಲ ದಿನಗಳಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಭಾನುವಾರ (ಜು.27) ಸಂಜೆ ಬಳಿಕ ಆರೋಗ್ಯ ಸ್ಥಿತಿ ಮತ್ತಷ್ಟು ಗಂಭೀರವಾಗಿದೆ ಎಂದು ವೈದ್ಯಕೀಯ ಮೂಲಗಳು ತಿಳಿಸಿವೆ.

ಖರ್ಗೆ ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಮೂವರು ಗಂಡು ಮಕ್ಕಳಿದ್ದಾರೆ. ಮಿಲಿಂದ್ ಯುನಿವರ್ಸಿಟಿ ಆಫ್ ಪೆನ್ಸಿಲ್ವೇನಿಯಾದ ವಾರ್ಟನ್ ಸ್ಕೂಲ್‌ನಲ್ಲಿ ಎಂಬಿಎ ಪದವಿ ಪಡೆದು, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಮಿಲಿಂದ್ ಸಾರ್ವಜನಿಕವಾಗಿ ಹೆಚ್ಚಾಗಿ ಕಾಣಿಸಿಕೊಂಡಿಲ್ಲ. ಹಿರಿಯ ಸಹೋದರ ಪ್ರಿಯಾಂಕ್ ಖರ್ಗೆ ಹೊರತುಪಡಿಸಿದರೆ ಕಿರಿಯ ಸಹೋದರರು ರಾಜಕೀಯದಲ್ಲಾಗಲಿ, ಸಾರ್ವಜನಿಕವಾಗಿ ಎಲ್ಲೂ ಕಾಣಿಸಿಕೊಂಡವರಲ್ಲ.

# ನಜರ್‌ಬಾದ್‌ನ ವಿಭಜಿತ ಮಹಾರಾಜ ಪಿಯು ಕಾಲೇಜು ನೂತನ ಕೊಠಡಿಗಳ ಉದ್ಘಾಟನೆ



ವಿಭಜಿತ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶಾಸಕ ಕೆ.ಹರೀಶ್‌ಗೌಡ ಅವರನ್ನು ಅಭಿನಂದಿಸಲಾಯಿತು.

**ಮೈಸೂರು:** ನಗರದ ನಜರ್‌ಬಾದ್‌ನ ವಿಭಜಿತ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರೌಢಶಾಲಾ ಮತ್ತು ಕಾಲೇಜು ವಿಭಾಗದ ಹೊಸದಾಗಿ ನಿರ್ಮಿಸಲಾಗಿರುವ ಕೊಠಡಿಗಳು, ಪುನರ್‌ಜೀವನಗೊಂಡ ಬೋಧನಾ ಕೊಠಡಿ, ಶಾಲಾ ಮೈದಾನವನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಉದ್ಘಾಟಿಸಿದರು.

ಶಾಲೆಯ ಮೈದಾನದಲ್ಲಿ ಮೊದಲಿಗೆ ಸಸಿ ನೆಟ್ಟು, ನಂತರ ಕೊಠಡಿಗಳನ್ನು ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಕಾಲೇಜಿನ ಉತ್ತಮ ಶೈಕ್ಷಣಿಕ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಉಜ್ವಲ ರೀತಿ ರೂಪಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಇದೇ ಸಂದರ್ಭದಲ್ಲಿ ಶಾಸಕರ ಹುಟ್ಟು ಹಬ್ಬದ ಅಂಗವಾಗಿ ಕಾಲೇಜು ಅಭಿವೃದ್ಧಿ ಸಮಿತಿ ವತಿಯಿಂದ ಪೌರಕಾರ್ಮಿಕರಿಗೆ ಸಮವಸ್ತ್ರಗಳನ್ನು ವಿತರಿಸಲಾಯಿತು.

ಸಮಿತಿ ಉಪಾಧ್ಯಕ್ಷೆ ಯಶೋಧ ಶ್ರೀಧರ್, ನಗರಪಾಲಿಕೆ ಮಾಜಿ ಸದಸ್ಯ ಕುಶಾಲ್ ಕುಮಾರ್, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಎಸ್.ಆರ್.ರವಿಕುಮಾರ್, ವಕೀಲರಾದ ಆರ್.ರಾಮಕೃಷ್ಣ, ವರದ ರಾಜು, ಯುವ ಮುಖಂಡರಾದ ಸುಹಾಸ್ ಗೌಡ, ನಿರಂಜನ್, ವರಲಕ್ಷ್ಮೀ, ಕುಮುದ, ದೀಪಕ್, ರವಿ ನಾಯಕ್, ಭಾಗ್ಯಮ್ಮ, ಭರತ್, ಸತೀಶ್, ಜಾವಿದ್, ಆದಿಲ್, ಅರುಣ್, ಮನು, ಶ್ರೇಯಸ್, ಈರೇಗೌಡ, ಅರ್ಪಣಾ ಇತರರು ಉಪಸ್ಥಿತರಿದ್ದರು.

# ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಜಠರ ಕರುಳಿನ ಕ್ಯಾನ್ಸರ್ ಜಾಗೃತಿ ಸಭೆ



ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಜಠರ ಕರುಳಿನ ಕ್ಯಾನ್ಸರ್ ಕುರಿತು ವಿಶೇಷ ಜಾಗೃತಿ ಸಭೆ ಆಯೋಜಿಸಲಾಗಿತ್ತು.

ಮೈಸೂರು, ಜು.28-ಕರ್ನಾಟಕವೂ ಸೇರಿದಂತೆ ಭಾರತದಲ್ಲಿ ಜಠರ ಕರುಳಿನ ಕ್ಯಾನ್ಸರ್‌ಗಳು ತೀವ್ರವಾಗಿ ಹೆಚ್ಚುತ್ತಿವೆ ಹಾಗಾಗಿ ಜಠರ ಕರುಳಿನ ಕ್ಯಾನ್ಸರ್‌ಗಳ ಆರಂಭಿಕ ಲಕ್ಷಣಗಳನ್ನು ಗುರುತಿಸುವ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಹಾಗೂ ಆರಂಭದಲ್ಲೇ ಚಿಕಿತ್ಸೆ ಪಡೆಯಲು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಜಠರ ಕರುಳಿನ ಕ್ಯಾನ್ಸರ್ ಕುರಿತು ವಿಶೇಷ ಆರೋಗ್ಯ ಶೃಂಗಸಭೆಯನ್ನು ಆಯೋಜಿಸಲಾಗಿತ್ತು.

ಸಭೆಯಲ್ಲಿ 109ಕ್ಕೂ ಹೆಚ್ಚು ಹಿರಿಯ ನಾಗರಿಕರು ಭಾಗವಹಿಸಿದ್ದರು. ಜಠರ ಕರುಳು ಶಸ್ತ್ರಚಿಕಿತ್ಸಾ ವಿಜ್ಞಾನ, ವೈದ್ಯಕೀಯ ಆಂಕೋಲಾಜಿ ಕುರಿತು ಗಮನಾರ್ಹ ಹಾಗೂ ಉಪಯುಕ್ತ ಚರ್ಚೆಗಳು ನಡೆದವು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಆಸ್ಪತ್ರೆಯ ಕನ್ಸಲ್ಟೆಂಟ್-ಸರ್ಜಿಕಲ್ ಗ್ಯಾಸ್ಟ್ರೋ ಎಂಟರಾಲಜಿ ವಿಭಾಗದ ಡಾ.ಎಚ್.ವಾಸುದೇವ ಪೈ ಮಾತನಾಡಿ, ಜಠರ ಕರುಳಿನ ಕ್ಯಾನ್ಸರ್‌ಗಳ ಅಪಾಯಕಾರಿ ಅಂಶಗಳು, ಆರಂಭಿಕ ಲಕ್ಷಣಗಳನ್ನು ಗುರುತಿಸುವ ಬಗ್ಗೆ, ರೋಗ ಲಕ್ಷಣಗಳಿಗೆ ತಕ್ಷಣದ ವೈದ್ಯಕೀಯ ಸಲಹೆಯ ಮಹತ್ವವನ್ನು ತಿಳಿಸಿದರು.

'ಅಜ್ಞಾನ, ಸ್ವಯಂ-ರೋಗ ನಿರ್ಣಯ, ಓವರ್ ದಿ ಕೌಂಟರ್ ಪರಿಹಾರಗಳು ಮತ್ತು ಆರಂಭಿಕ ವೈದ್ಯಕೀಯ ಸಲಹೆ ಪಡೆಯುವಲ್ಲಿನ ಹಿಂಜರಿಕೆ ರೋಗಿಗಳಿಂದ ಚಿಕಿತ್ಸೆ ಸಮಯವನ್ನು ಕಸಿದುಕೊಳ್ಳುತ್ತಿವೆ ಎಂದರು.

ಅಸೋಸಿಯೇಟ್ ಕನ್ಸಲ್ಟೆಂಟ್-ಮೆಡಿಕಲ್ ಆಂಕೋಲಾಜಿ ವಿಭಾಗದ ಡಾ.ಎನ್.ಜೆ.ಹರ್ಷಿತಾ ಮಾತನಾಡಿ, ವೈದ್ಯಕೀಯ ತಂತ್ರಜ್ಞಾನದಲ್ಲಿನ ಪ್ರಗತಿಯಿಂದಾಗಿ ಇಮ್ಯುನೊ ಹಿಸ್ಟೋ ಕೆಮಿಸ್ಟ್ರಿಯಂತಹ ತಂತ್ರಗಳು ಕ್ಯಾನ್ಸರ್ ಉಪ ವಿಭಾಗಗಳನ್ನು ನಿಖರವಾಗಿ ಗುರುತಿಸಲು ಮತ್ತಷ್ಟು ಸಹಾಯ ಮಾಡುತ್ತವೆ ಎಂದರು.

ಯಾವುದೇ ಸಣ್ಣ ಲಕ್ಷಣಗಳನ್ನು ನಿರ್ಲಕ್ಷ್ಯ ವಹಿಸದೆ ಗಮನಿಸಿ. ರೋಗ ಲಕ್ಷಣಗಳು ಮುಂದುವರಿದರೆ ಆರೋಗ್ಯ ವೃತ್ತಿಪರರನ್ನು ಸಂಪರ್ಕಿಸಿ ಎಂದು ಮಣಿಪಾಲ್ ಆಸ್ಪತ್ರೆ ಸಾರ್ವಜನಿಕರಲ್ಲಿ ಮನವಿ ಮಾಡಿದೆ.

# ತುಂಗಭದ್ರಾ ಜಲಾಶಯದಿಂದ ಲಕ್ಷ ಕ್ಯೂಸೆಕ್ ನೀರು ಬಿಡುಗಡೆ: ಹಂಪಿ ಸ್ಮಾರಕಗಳು ಮುಳುಗಡೆ

ಹಂಪಿ,ಜು.28- ತುಂಗಭದ್ರಾ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿದ್ದು, ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ. ತುಂಗಭದ್ರಾ ಜಲಾಶಯದಿಂದ ನದಿಗೆ 1,00,000 ಕ್ಯೂಸೆಕ್ ನೀರು ಬಿಡುಗಡೆ ಮಾಡಲಾಗಿದೆ.

ಇದರಿಂದಾಗಿ ಹಂಪಿಯ ಪುರಂದರ ದಾಸ ಮಂಟಪ, ಚಕ್ರತೀರ್ಥ, ರಾಮ ಸೀತಾ ದೇವಸ್ಥಾನ ಸೇರಿದಂತೆ ಅನೇಕ ಹಂಪಿ ಸ್ಮಾರಕಗಳು ಮುಳುಗಡೆಯಾಗಿವೆ.



ಈ ಹಿನ್ನೆಲೆಯಲ್ಲಿ ಮುಂದಿನ ಆದೇಶದವರೆಗೆ ಪ್ರಸಿದ್ಧ ಹಂಪಿ ಸ್ಮಾರಕಗಳಾದ ಪುರಂದರದಾಸ ಮಂಟಪ, ಚಕ್ರತೀರ್ಥ ದೇವಸ್ಥಾನ ಮತ್ತು ಇತರ ಕೆಲವು ಸ್ಮಾರಕಗಳ ಪ್ರವೇಶಕ್ಕೆ ವಿಜಯನಗರ ಜಿಲ್ಲಾಧಿಕಾರಿ ನಿರ್ಬಂಧ ಹೇರಿದ್ದಾರೆ.

ನದಿಯಲ್ಲಿ ನೀರಿನ ಮಟ್ಟ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಜಲಾನಯನ ಪ್ರದೇಶಗಳಿಗೆ ಪ್ರವಾಹದ ಎಚ್ಚರಿಕೆ ನೀಡಲಾಗಿದೆ ಎಂದು ತುಂಗಭದ್ರಾ ಮಂಡಳಿ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಪ್ರದೇಶದಲ್ಲಿ ನೀರಿಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನು ನಿಲ್ಲಿಸುವಂತೆ ಮಂಡಳಿಯು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದೆ. ಸೂಚನೆಗಳ ಪ್ರಕಾರ ಜಲಾನಯನ ಪ್ರದೇಶದಲ್ಲಿನ ಹಂಪಿ ಸ್ಮಾರಕಗಳಿಗೆ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಮುಂದಿನ ಆದೇಶದವರೆಗೆ ಈಜು, ಮೀನುಗಾರಿಕೆ ಮತ್ತು ಇತರ ಚಟುವಟಿಕೆಗಳನ್ನು ಸಹ ನಿಷೇಧಿಸಲಾಗಿದೆ. ಪ್ರವಾಸಿಗರು ಮಾರ್ಗಸೂಚಿಗಳನ್ನು ಪಾಲಿಸುವಂತೆ ಅಧಿಕಾರಿಗಳು ವಿನಂತಿಸಿದ್ದಾರೆ.

# ದೇಶ - ವಿದೇಶ

## ಸೇನಾಧಿಕಾರಿ ಸೇರಿ 23 ಪಾಕ್ ಸೈನಿಕರನ್ನು ಹತ್ಯೆಗೈದ ಬಲೂಚಿಗರು

**ಬಲೂಚಿಸ್ತಾನ:** ಬಲೂಚಿಸ್ತಾನದ ವಿವಿಧ ಪ್ರದೇಶಗಳಲ್ಲಿ ಏಕಕಾಲದಲ್ಲಿ ಹಲವಾರು ಸಶಸ್ತ್ರ ಕಾರ್ಯಾಚರಣೆಗಳನ್ನು ನಡೆಸಿದ ಬಲೂಚಿಸ್ತಾನ ಲಿಬರೇಶನ್ ಆರ್ಮಿ ಪಾಕಿಸ್ತಾನ ಸೇನೆಯ ಕನಿಷ್ಠ 23 ಸೈನಿಕರನ್ನು ಹತ್ಯೆ ಮಾಡಿದೆ. ಅವರಲ್ಲಿ ಒಬ್ಬ ಉನ್ನತ ಅಧಿಕಾರಿಯೂ ಸೇರಿದ್ದು ಮಿಲಿಟರಿ ಸೌಲಭ್ಯಗಳು ಮತ್ತು ಗುಪ್ತಚರ ಆಸ್ತಿಗಳಿಗೆ ಹಾನಿಯನ್ನುಂಟು ಮಾಡಿದ್ದಾರೆ ಎಂದು ಬಲೂಚಿಸ್ತಾನ ಪೋಸ್ಟ್ ವರದಿ ಮಾಡಿದೆ. ಬಲೂಚಿಸ್ತಾನ ಪೋಸ್ಟ್ ಪ್ರಕಾರ ಬಿಎಲ್‌ಎ ವಕ್ತಾರ ಜಿಯಾಂಡ್ ಬಲೂಚ್ ಗುಂಪಿನ ಹೋರಾಟಗಾರರು ಮಸ್ತುಂಗ್, ಕಲಾತ್, ಜಮುರಾನ್, ಬುಲೆಡಾ ಮತ್ತು ಕ್ವೆಟ್ಟಾ ಮುಂತಾದ ಸ್ಥಳಗಳಲ್ಲಿ ಪಾಕಿಸ್ತಾನ ಸೇನೆಯನ್ನು ಗುರಿಯಾಗಿಸಿಕೊಂಡಿದ್ದಾರೆ. ನುಷ್ಕಿ, ದಲ್ಬಂದಿನ್, ಪಂಜ್‌ಗುರ್‌ಗಳಲ್ಲಿಯೂ ದಾಳಿ ನಡೆಸಿದ್ದಾರೆ. ಮಸ್ತುಂಗ್‌ನ ತಲ್ಬ್ ಖಾವಿ ಪ್ರದೇಶದಲ್ಲಿ ಬಿಎಲ್‌ಎ ಹೋರಾಟಗಾರರು ಮಿಲಿಟರಿ ಸಿಬ್ಬಂದಿಯನ್ನು ಗುರಿಯಾಗಿಸಲು ಸುಧಾರಿತ ಸ್ಫೋಟಕ ಸಾಧನ ಬಳಸಿದ್ದಾರೆ ಎಂದು ವರದಿಯಾಗಿದೆ.



## ಜಮ್ಮು-ಕಾಶ್ಮೀರದಲ್ಲಿ ಎನ್‌ಕೌಂಟರ್; ಮೂವರು ಉಗ್ರರ ಹತ್ಯೆ

**ಶ್ರೀನಗರ:** ಜಮ್ಮು-ಕಾಶ್ಮೀರದ ಡಚಿಗವ್ ಬಳಿಯ ಹರ್ವಾನ್ ಅರಣ್ಯದಲ್ಲಿ ಭದ್ರತಾ ಪಡೆಗಳೊಂದಿಗೆ ನಡೆದ ಭೀಕರ ಗುಂಡಿನ ಚಕಮಕಿಯಲ್ಲಿ ಮೂವರು ಭಯೋತ್ಪಾದಕರು ಮೃತಪಟ್ಟಿದ್ದಾರೆ. 26 ಜನರ ಸಾವಿಗೆ ಕಾರಣವಾದ ಪಹಲ್ಗಾಮ್ ದಾಳಿಯ ರೂವಾರಿಗಳನ್ನು ಪತ್ತೆ ಹಚ್ಚಲು ಭದ್ರತಾ ಪಡೆಗಳು ಬೃಹತ್ ಕಾರ್ಯಾಚರಣೆ ಪ್ರಾರಂಭಿಸಿದ್ದವು. ಕಳೆದ 1 ತಿಂಗಳಿಂದ ಗುಪ್ತಚರ ಮಾಹಿತಿಯು ಭಯೋತ್ಪಾದಕರು ಶ್ರೀನಗರ ನಗರ ಕೇಂದ್ರದಿಂದ ಸುಮಾರು 20 ಕಿ.ಮೀ ದೂರದಲ್ಲಿರುವ ಡಚಿಗಮ್ ಪ್ರದೇಶದ ಕಡೆಗೆ ಸಾಗಿರಬಹುದು ಎಂದು ಸೂಚಿಸಿತ್ತು. ಇಂದು ಹತ್ಯೆಗೀಡಾದ ಮೂವರು ಭಯೋತ್ಪಾದಕರು ಏ.22ರ ಪಹಲ್ಗಾಮ್ ದಾಳಿಯಲ್ಲಿ ಭಾಗಿಯಾಗಿದ್ದಾರೆಯೇ ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ. ಗುಪ್ತಚರ ಮಾಹಿತಿಯ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ ಭದ್ರತಾ ಪಡೆಗಳು ಇಂದು ಬೆಳಗ್ಗೆ ಹರ್ವಾನ್‌ನ ಮುಲ್ನಾರ್ ಪ್ರದೇಶದಲ್ಲಿ ಉಗ್ರ ವಿರೋಧಿ ಕಾರ್ಯಾಚರಣೆಯನ್ನು ಪ್ರಾರಂಭಿಸಿದವು. ಭದ್ರತಾ ಪಡೆಗಳು ಪ್ರದೇಶದಲ್ಲಿ ಶೋಧ ನಡೆಸುತ್ತಿರುವಾಗ ದೂರದಿಂದ ಎರಡು ಸುತ್ತಿನ ಗುಂಡು ಹಾರಾಟ ಕೇಳಿ ಬಂದಿತು. ಪ್ರದೇಶಕ್ಕೆ ಬಲವರ್ಧನೆಗಳನ್ನು ರವಾನಿಸಲಾಗಿದ್ದು, ಶೋಧ ಕಾರ್ಯಾಚರಣೆಗಳು ತೀವ್ರಗೊಂಡು ಮೂವರು ಭಯೋತ್ಪಾದಕರನ್ನು ಹತ್ಯೆ ಮಾಡಲಾಯಿತು.



## ಜರ್ಮನಿಯಲ್ಲಿ ಹಳಿ ತಪ್ಪಿದ ಹೈಸ್ಪೀಡ್ ರೈಲು; ಮೂವರ ಸಾವು

**ಬರ್ಲಿನ್:** ನೈಋತ್ಯ ಜರ್ಮನಿಯ ಅರಣ್ಯ ಪ್ರದೇಶದಲ್ಲಿ ಭಾನುವಾರ ಪ್ರಾದೇಶಿಕ ಪ್ರಯಾಣಿಕ ರೈಲೊಂದು ಹಳಿ ತಪ್ಪಿದ ಪರಿಣಾಮ, ಮೂವರು ಸಾವನ್ನಪ್ಪಿ ಹಲವರು ಗಂಭೀರವಾಗಿ ಗಾಯಗೊಂಡ ಘಟನೆ ನಡೆದಿದೆ. ಬಾಡೆನ್-ವುರ್ಟೆಂಬರ್ಗ್ ರಾಜ್ಯದ ರೀಡ್ಲಿಂಗೆನ್ ಪಟ್ಟಣದ ಬಳಿ ಸಂಜೆ 6.10ರ ಸುಮಾರಿಗೆ ಅಪಘಾತ ಸಂಭವಿಸಿದ್ದು, ಈ ರೈಲಿನಲ್ಲಿ ಸುಮಾರು 100 ಪ್ರಯಾಣಿಕರಿದ್ದರು ಎಂದು ಮೂಲಗಳು ಖಚಿತಪಡಿಸಿವೆ. ಕೂಡಲೇ ರಕ್ಷಣಾ ಕಾರ್ಯಾಚರಣೆ ಆರಂಭಿಸಿದ ಪೊಲೀಸರು ರೈಲಿನಲ್ಲಿ ಸಿಲುಕಿದ್ದ ಅನೇಕ ಪ್ರಯಾಣಿಕರನ್ನು ರಕ್ಷಿಸಿದ್ದಾರೆ. ಆದರೆ ಈ ದುರ್ಘಟನೆಯಲ್ಲಿ ಮೂವರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಗಾಯಗೊಂಡವರ ಸಂಖ್ಯೆ ಇನ್ನೂ ನಿಖರವಾಗಿ ತಿಳಿದು ಬಂದಿಲ್ಲವಾದರೂ, ಸುಮಾರು 50ಕ್ಕೂ ಹೆಚ್ಚು ಜನ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಜರ್ಮನ್ ರೈಲು ನಿರ್ವಾಹಕ ಡಾಯ್ಚ್‌ಬಾನ್ ಒಟ್ಟು ಮೂವರು ಪ್ರಯಾಣಿಕರ ಸಾವನ್ನು ದೃಢಪಡಿಸಿದ್ದಾರೆ. ಎರಡು ರೈಲು ಬೋಗಿಗಳು ಹಳಿ ತಪ್ಪಿದ ಕಾರಣಕ್ಕೆ ಅಪಘಾತ ಸಂಭವಿಸಿದೆ ಎಂದಿದ್ದಾರೆ.



## ತ್ಯಾಜ್ಯ ವಸ್ತುಗಳಿಂದ ವಿಮಾನ ತಯಾರಿಸಿ ಹಾರಾಟ ನಡೆಸಿದ ಬಾಲಕ!

**ಮುಜಾಫರ್‌ಪುರ:** ಪುಟ್ಟ ಬಾಲಕನೊಬ್ಬ ತ್ಯಾಜ್ಯ ವಸ್ತುಗಳಿಂದ ಕಡಿಮೆ ವೆಚ್ಚದಲ್ಲಿ ವಿಮಾನ ತಯಾರಿಸಿ ಅದನ್ನು ಯಶಸ್ವಿಯಾಗಿ ಹಾರಾಟ ಕೂಡ ನಡೆಸಿರುವ ವಿಡಿಯೋವೊಂದು ವ್ಯಾಪಕ ವೈರಲ್ ಆಗುತ್ತಿದೆ. ಕಸದಿಂದ ರಸ ಎಂಬ ಮಾತು ಬಿಹಾರದ ಈ ಪುಟ್ಟ ಬಾಲಕನಿಗೆ ಅಕ್ಷರಶಃ ಒಪ್ಪುತ್ತದೆ. ಬಿಹಾರದ ಮುಜಫರ್ ನಗರದ ನಿವಾಸಿ ಅವನೀಶ್ ಕುಮಾರ್ ಎಂಬ ಬಾಲಕ ತ್ಯಾಜ್ಯ ವಸ್ತುಗಳನ್ನು ಬಳಸಿ ವಿಮಾನ ತಯಾರಿಸಿದ್ದು ಮಾತ್ರವಲ್ಲದೇ ಅದನ್ನು ಯಶಸ್ವಿಯಾಗಿ ಹಾರಾಟ ಕೂಡ ನಡೆಸಿದ್ದಾನೆ.



ಅವನೀಶ್‌ಕುಮಾರ್ ಎಂಬ ಬಾಲಕ ತ್ಯಾಜ್ಯ ವಸ್ತುಗಳನ್ನು ಬಳಸಿ ಕೇವಲ 7,000 ರೂ. ವೆಚ್ಚದಲ್ಲಿ ವಾರದಲ್ಲಿ ಹಾರುವ ವಿಮಾನವನ್ನು ತಯಾರಿಸಿ ಯಶಸ್ವಿ ಹಾರಾಟ ಕೂಡ ನಡೆಸಿದ್ದಾನೆ. ಕೇವಲ ಸ್ಕ್ರ್ಯಾಪ್ ವಸ್ತುಗಳು, ಮೂಲ ಯಾಂತ್ರಿಕ ಜ್ಞಾನವನ್ನು ಬಳಸಿಕೊಂಡು ಹಾರುವ ವಿಮಾನ ಮಾದರಿಯನ್ನು ನಿರ್ಮಿಸುವ ಮೂಲಕ ಅವನೀಶ್‌ಕುಮಾರ್ ಜಗತ್ತಿನ ಗಮನ ಸೆಳೆದಿದ್ದಾರೆ. ಯಾವುದೇ ಔಪಚಾರಿಕ ತರಬೇತಿ ಅಥವಾ ಸುಧಾರಿತ ಸಂಪನ್ಮೂಲಗಳೂ ಇಲ್ಲದೇ 7 ದಿನಗಳಲ್ಲಿ ಈ ಗಮನಾರ್ಹ ವಿಮಾನ ನಿರ್ಮಾಣ ಯೋಜನೆಯನ್ನು ಪೂರ್ಣಗೊಳಿಸಿದ್ದಾನೆ ಎಂದು ಹೇಳಲಾಗಿದೆ.

## ಬ್ಯಾಂಕಾಕ್ ಮಾರ್ಕೆಟ್‌ನಲ್ಲಿ ಗುಂಡಿನ ದಾಳಿ; 6 ಸಾವು, ದಾಳಿಕೋರ ಆತ್ಮಹತ್ಯೆ

**ಬ್ಯಾಂಕಾಕ್:** ಬ್ಯಾಂಕಾಕ್‌ನ ಮಾರುಕಟ್ಟೆಯಲ್ಲಿ ದಾಳಿಕೋರನೊಬ್ಬ ಗುಂಡಿನ ದಾಳಿ ನಡೆಸಿದ್ದು, ಕನಿಷ್ಠ 6 ಮಂದಿ ಸಾವನ್ನಪ್ಪಿದ್ದಾರೆ. ಅಲ್ಲದೇ ಆತ ಕೂಡ ಆತ್ಮಹತ್ಯೆಗೆ ಶರಣಾಗಿದ್ದಾನೆ ಎಂದು ವರದಿಗಳು ಬಂದಿದೆ.



ಮಾರುಕಟ್ಟೆಯಲ್ಲಿ ತಮ್ಮ ಪಾಡಿಗೆ ತಾವು ಓಡಾಡುತ್ತಿದ್ದವರ ಮೇಲೆ ಗುಂಡಿನ ದಾಳಿ ನಡೆಸಲಾಗಿದೆ. ದುಷ್ಕರ್ಮಿಯೊಬ್ಬ ಹಲವಾರು ಮಂದಿ ಮೇಲೆ ಏಕಾಏಕಿ ಗುಂಡಿನ ದಾಳಿ ನಡೆಸಿದ್ದು, ಥೈಲ್ಯಾಂಡ್‌ನ ರಾಜಧಾನಿ ಬ್ಯಾಂಕಾಕ್‌ನ ಜನನಿಬಿಡ ಓರ್ ಟೋರ್ ಕೋರ್ ಮಾರುಕಟ್ಟೆಯಲ್ಲಿ ಈ ಘಟನೆ ಸಂಭವಿಸಿದೆ. ಸೋಮವಾರ ಗುಂಡಿನ ಈ ಘಟನೆ ನಡೆದಿದ್ದು, ಸತ್ತವರಲ್ಲಿ ನಾಲ್ಕು ಮಂದಿ ಮಾರುಕಟ್ಟೆಯ ಭದ್ರತಾ ಸಿಬ್ಬಂದಿ ಮತ್ತು ಒಬ್ಬ ಮಹಿಳೆ ಸೇರಿದ್ದಾರೆ. ಈ ಘಟನೆಯಿಂದ ಬ್ಯಾಂಕಾಕ್‌ನಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿದ್ದು, ಪೊಲೀಸರು ತನಿಖೆಯನ್ನು ತೀವ್ರಗೊಳಿಸಿದ್ದಾರೆ. ಅಲ್ಲದೇ ಆತ ಕೂಡ ದಾಳಿಯ ನಂತರ ಆತ್ಮಹತ್ಯೆ ಮಾಡಿಕೊಂಡಿದ್ದು, ಹಲವು ಅನುಮಾನಕ್ಕೆ ಕಾರಣವಾಗಿದೆ.

ಮೈಸೂರು ಮಿತ್ರ ಮಂಗಳವಾರ 29 ಜುಲೈ 2025

# ಅಹಿತಕರ ಘಟನೆಗಳು ನಡೆಯದಂತೆ ಎಚ್ಚರಿಕೆ ವಹಿಸಲು ಜಿಲ್ಲಾಧಿಕಾರಿ ಸೂಚನೆ



ಜಿಲ್ಲೆಯ ವಿವಿದೆಡೆಯಿಂದ ಸಭೆಗೆ ಬಂದಿದ್ದ ಗೌರಿ ಗಣೇಶ ಪ್ರತಿಷ್ಠಾಪನಾ ಸಮಿತಿ ಸದಸ್ಯರು

ವಿರಾಜಪೇಟೆ, ಜು.28–ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುವ ಸಮಿತಿಗಳು ಗಣೇಶನ ವಿಸರ್ಜನೆ ಮಾಡುವವರೆಗೂ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರಿಕೆ ವಹಿಸುವಂತೆ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್ ತಿಳಿಸಿದ್ದಾರೆ.

ವಿರಾಜಪೇಟೆ ಉಪವಿಭಾಗ ವ್ಯಾಪ್ತಿಯಲ್ಲಿ ಗೌರಿ ಗಣೇಶ ಪ್ರತಿಷ್ಠಾಪನಾ ಸಮಿತಿ ಸದಸ್ಯರಿಗೆ ಪಟ್ಟಣದ ಅಂಬೇಡ್ಕರ್ ಭವನದ ಸಭಾಂಗಣದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಗಣೇಶ ಪ್ರತಿಷ್ಠಾಪನೆ ಮಾಡುವ ಸಂದರ್ಭ ಜಾಗದ ಸಂಬಂಧಿಕರಿಂದ ಬೆಂಬಲಪಡೆದುಕೊಳ್ಳುವುದು, ಪೊಲೀಸ್ ಇಲಾಖೆಯಿಂದ ಅನುಮತಿ, ವಿದ್ಯುತ್ ಬಗ್ಗೆ ಸೆಸ್ಕಾಂ ಇಲಾಖೆ, ಸ್ಥಳೀಯ ಪಂಚಾಯಿತಿ ಮತ್ತು ತಹಶೀಲ್ದಾರ್‌ರಿಂದ ಅನುಮತಿ ಪಡೆದುಕೊಳ್ಳಬೇಕು. ಎಂದು ತಿಳಿಸಿದ ಪೊಲೀಸ್ ವರಿಷ್ಠಾಧಿಕಾರಿ ನಾವು ಎಲ್ಲಾ ಕಡೆಗಳಲ್ಲಿ ನೋಡಿಕೊಳ್ಳಲು ಪೊಲೀಸ್ ಅಧಿಕಾರಿಗಳು ಸಿಬ್ಬಂದಿ ಕೊರತೆ ಇರುವುದರಿಂದ ಕಷ್ಟವಾಗಲಿದೆ ಎಂದರು. ಮದ್ಯಪಾನ ಸೇವಿಸಿ ಗಲಾಟೆ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಲಾಗುವುದೆಂದು ರಾಮರಾಜನ್ ಹೇಳಿದರು.

ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ ಮಾತನಾಡಿ ಪಟ್ಟಣದ ಮುಖ್ಯ ರಸ್ತೆ ಅಭಿವೃದ್ಧಿಗಾಗಿ ಶಾಸಕರು ಅನುದಾನ ನೀಡಿದ್ದಾರೆ ಕಾಮಗಾರಿ ನಡೆಸಲು ಮಳೆ ಇರುವುದರಿಂದ ಸಾಧ್ಯವಾಗಲಿಲ್ಲ ಎಂದರಲ್ಲದೆ ಗಣೇಶನ ಮೂರ್ತಿಯನ್ನು ಗೌರಿಕೆರೆಯಲ್ಲಿ ವಿಸರ್ಜನೆಗೊಳಿಸಿ ರಸ್ತೆಯಲ್ಲಿಯೇ ಕಸ ಬಿಸಾಡಿ ಹೋಗುತ್ತಾರೆ ಅಂತವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಶ್ರೀ ಗಣಪತಿ ಪ್ರತಿಷ್ಠಾಪನಾ ಸಮಿತಿಗಳ ಒಕ್ಕೂಟದ ಗೌರವ ಅಧ್ಯಕ್ಷ ಶಭರಿಶ್ ಶೆಟ್ಟಿ ಮಾತನಾಡಿ ವಿರಾಜಪೇಟೆಯಲ್ಲಿ ಸುಮಾರು 200 ವರ್ಷಗಳಿಂದಲು ಗೌರಿ ಗಣೇಶ ಉತ್ಸವವನ್ನು ಆಚರಿಸಿಕೊಂಡು ಬರುತ್ತಿದ್ದು ಇದುವರೆಗೂ ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ ಭೇದ ಭಾವವಿಲ್ಲದೆ ಎಲ್ಲಾ ಜನಾಂಗದವರು ಸೇರಿ ಹಬ್ಬವನ್ನು ಆಚರಿಸಿಕೊಂಡು ಬರುತ್ತಿದ್ದೇವೆ ಎಂದರು. ಪುರಸಭಾ ಸದಸ್ಯರಾದ ರಜನಿಕಾಂತ್ ಮತ್ತು ಡಿ.ಪಿ.ರಾಜೇಶ್ ಹಾಗೂ ವಕೀಲ ಸೋಮ ಲೋಕನಾಥ್ ಸಭೆಯಲ್ಲಿ ಮಾತನಾಡಿದರು.

ಪೊಲೀಸ್ ವೃತ್ತನಿರೀಕ್ಷಕ ಅನೂಪ್ ಮಾದಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು, ವೇದಿಕೆಯಲ್ಲಿ ತಹಶೀಲ್ದಾರ್ ಅನಂತ ಶಂಕರ್, ಡಿ.ವೈ.ಎಸ್.ಪಿ ಮಹೇಶ್ ಕುಮಾರ್ ಮತ್ತು ಮೇದಪ್ಪ ಪುರಸಭೆ ಉಪಾಧ್ಯಕ್ಷೆ ಫಸಿಹ ತಬ್ಸಂ ಉಪಸ್ಥಿತರಿದ್ದರು, ವೃತ್ತ ನಿರೀಕ್ಷಕ ಶಿವರುದ್ರ ಅವರು ವಂದಿಸಿದರು. ಸಭೆಯಲ್ಲಿ ಗೋಣಿಕೊಪ್ಪ, ಪೊನ್ನಂಪೇಟೆ, ಕುಟ್ಟ, ವಿರಾಜಪೇಟೆ ಇತರೆಡೆಗಳ ಗಣೇಶೋತ್ಸವ ಸಮಿತಿಗಳ ಸದಸ್ಯರು, ಸೆಸ್ಕಾಂ ಅಭಿಯಂತರ, ಪುರಸಭೆ, ಅರಣ್ಯ ಇಲಾಖೆ, ಲೋಕೋಪಯೋಗಿ ಇಲಾಖೆ ಸೇರಿದಂತೆ ಎಲ್ಲಾ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

## ಸಿಹಿಗೆಣಸು ಹೊಲದಲ್ಲಿ ಹೆಬ್ಬಾವು ಪತ್ತೆ



ಮಡಿಕೇರಿ, ಜು.28– ಕೂಡಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೀಗೆಹೊಸೂರು ಗ್ರಾಮದ ಬಸವರಾಜ್ ಎಂಬುವರ ಜಮೀನಿನಲ್ಲಿ ಬೆಳೆಸಲಾಗಿರುವ ಸಿಹಿಗೆಣಸು ಹೊಲದಲ್ಲಿ ಬೃಹತ್ ಗಾತ್ರದ ಹೆಬ್ಬಾವು ಪತ್ತೆಯಾಗಿ ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದ ಘಟನೆ ನಡೆದಿದೆ. ಸೀಗೆ ಹೊಸೂರಿನ ರೈತ ಮಹಿಳೆ ತಾರಾ ಕುಮಾರಿ ಎಂಬವರು ಹೊಲದಲ್ಲಿ ಗೆಣಸು ಕೀಳುವ ಕೆಲಸದಲ್ಲಿ ನಿರತರಾಗಿದ್ದರು. ಈ ಸಂದರ್ಭ ಗೆಣಸು ಬಳ್ಳಿ ಎಂದು ಹಾವಿನ ಬಾಯಿ ಹಿಡಿದಿದ್ದಾರೆ.

ಲೋಳೆ ಮೈ ಹೊಂದಿ ಬಳ್ಳಿ ಆಕಾರದಲ್ಲಿ ಹೊಲದಲ್ಲಿದ್ದುದು ಹಾವು ಎಂದು ಅರಿವಾದ ತಕ್ಷಣವೇ ಹೌಹಾರಿದ ತಾರಾ ಕುಮಾರಿ ಸ್ಥಳದಿಂದ ಓಡಿದ್ದಾರೆ. ಬಳಿಕ ಅಲ್ಲೇ ಸನಿಹದಲ್ಲಿದ್ದ ಪತಿ ಬಸವರಾಜು ಸ್ಥಳಕ್ಕೆ ಬಂದು ನೋಡಿದಾಗ ಬೃಹತ್ ಗಾತ್ರದ ಹೆಬ್ಬಾವು ಗೋಚರಿಸಿದೆ. ಯಾವುದೋ ಪ್ರಾಣಿಯೊಂದನ್ನು ಭೇಟೆಯಾಡಿ ನುಂಗಿದ್ದರಿಂದ ಹೆಬ್ಬಾವು ಕದಲದೇ ಮಲಗಿದ್ದರಿಂದಾಗಿ ಮಹಿಳೆ ಬಚಾವಾಗಿದ್ದಾರೆ.

ಬಳಿಕ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಸ್ಥಳಕ್ಕಾಗಮಿಸಿದ ಹೆಬ್ಬಾಲೆ ಉಪ ವಲಯ ಅರಣ್ಯಾಧಿಕಾರಿ ಮತ್ತು ಸಿಬ್ಬಂದಿಗಳು ಗ್ರಾಮಸ್ಥರ ಸಹಕಾರದಿಂದ ಬೃಹತ್ ಗಾತ್ರದ ಹೆಬ್ಬಾವನ್ನು ಸೆರೆ ಹಿಡಿದು ಸುರಕ್ಷಿತವಾಗಿ ಚಿನ್ನೇನಹಳ್ಳಿ ಅರಣ್ಯ ಪ್ರದೇಶಕ್ಕೆ ಬಿಡಲಾಯಿತು. ಅರಣ್ಯಾಧಿಕಾರಿ ಗುರು ಪ್ರಸಾದ್, ಸಿಬ್ಬಂದಿಗಳಾದ ರಾಜಪ್ಪ, ವೇದ ಹಾಜರಿದ್ದರು.

## ಕಾಡಾನೆ ದಾಳಿಗೆ ಇಬ್ಬರು ಕಾರ್ಮಿಕರಿಗೆ ಗಾಯ




ಒಂಟಿ ಸಲಗದಿಂದ ತೋಟದ ಕೆಲಸಕ್ಕೆಂದು ಹೋಗುತ್ತಿದ್ದ ಪುರುಷರು ಮತ್ತು ಮಹಿಳಾ ಕಾರ್ಮಿಕರು ಓಡಿಹೋಗಿ ಪ್ರಾಣ ಉಳಿಸಿಕೊಂಡರು

ಮಡಿಕೇರಿ/ ಗೋಣಿಕೊಪ್ಪ, ಜು.28– ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದವರ ಮೇಲೆ ಕಾಡಾನೆ ದಾಳಿ ನಡೆಸಲುಯತ್ನಿಸಿ ಇಬ್ಬರು ಕಾರ್ಮಿಕರು ಗಾಯಗೊಂಡಿರುವ ಘಟನೆ ಸಿದ್ದಾಪುರ ಸಮೀಪದ ಕರಡಿಗೋಡು ಗ್ರಾಮದಲ್ಲಿ ನಡೆದಿದೆ. ಕರಡಿಗೋಡು ಕಾಫಿ ತೋಟದಲ್ಲಿ ಕೆಲಸ ನಿರ್ವಹಿಸುತ್ತಿದ್ದ ವೇಳೆ ಕಾಡಾನೆ ದಾಳಿ ಮಾಡಿದ್ದು ಓಡುವ ಸಂದರ್ಭ ಇಬ್ಬರು ಕಾರ್ಮಿಕರು ಗಾಯಗೊಂಡು ಸಿದ್ದಾಪುರ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕರಡಿಗೋಡು ಗ್ರಾಮ ವ್ಯಾಪ್ತಿಯ ಕಾಫಿ ತೋಟಗಳಲ್ಲಿ ಕಾಡಾನೆಗಳು ಬೀಡು ಬಿಟ್ಟಿದ್ದು, ಕಾಡಿಗಟ್ಟಲು ಕ್ರಮ ಕೈಗೊಳ್ಳಬೇಕು ಎಂದು ಕಾರ್ಮಿಕರು ಆಗ್ರಹಿಸಿದ್ದಾರೆ. ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿಗಳು ಭೇಟಿ ನೀಡಿದ ಸಂದರ್ಭ ಇಲಾಖೆ ವಿರುದ್ಧ ಕಾರ್ಮಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಕಾರ್ಮಿಕರನ್ನು ಅಟ್ಟಾಡಿಸಿದ ಕಾಡಾನೆ:** ಕಾಫಿ ತೋಟಕ್ಕೆ ಕೆಲಸಕ್ಕೆ ತೆರಳುತ್ತಿದ್ದ ಸಂದರ್ಭ ಒಂಟಿ ಸಲಗವೊಂದು ಕಾರ್ಮಿಕರನ್ನು ಅಟ್ಟಾಡಿಸಿದ ಘಟನೆ ಪಾಲಿಬೆಟ್ಟದಿಂದ ವರದಿಯಾಗಿದೆ. ಇಲ್ಲಿನ ವಡ್ಡರಹಳ್ಳಿ ಎಸ್ಟೇಟ್‌ಗೆ ತೋಟದ ಕೆಲಸಕ್ಕೆಂದು ಪುರುಷರು ಮತ್ತು ಮಹಿಳಾ ಕಾರ್ಮಿಕರು ಗುಂಪಿನಲ್ಲಿ ತೆರಳುತ್ತಿದ್ದರು. ಈ ವೇಳೆ ಏಕಾಏಕಿ ತೋಟದ ಒಳಗಿನಿಂದ ಪ್ರತ್ಯಕ್ಷವಾದ ಒಂಟಿ ಸಲಗ ಕಾರ್ಮಿಕ ರನ್ನು ಅಟ್ಟಿಸಿಕೊಂಡು ಬಂದಿದೆ. ಸ್ಥಳದಿಂದ ಓಡಿದ ಕಾರ್ಮಿಕರು ಎಸ್ಟೇಟ್ ಲೈನ್ ಮನೆ ಕಡೆ ಬಂದಿದ್ದಾರೆ. ಆ ಮೂಲಕ ಕಾಡಾನೆ ದಾಳಿಯಿಂದ ಕಾರ್ಮಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಎಸ್ಟೇಟ್ ಗೇಟ್‌ನ ಕಂಬಕ್ಕೆ ಗುದ್ದಿದ್ದ ಕಾಡಾನೆ ಬಳಿಕ ತೋಟದ ಒಳಗೆ ಮರೆಯಾಗಿದೆ ಕಾರ್ಮಿಕರು ಜೀವದ ಹಂಗು ತೊರೆದು ದಿನನಿತ್ಯ ಕೂಲಿ ಕೆಲಸ ಮಾಡು ತ್ತಿದ್ದು, ಕಾಡಾನೆಗಳನ್ನು ಕಾಡಿಗಟ್ಟುವ ಅರಣ್ಯ ಇಲಾಖೆ ಕಾರ್ಯಾಚರಣೆಗೆ ಫಲ ನೀಡುತ್ತಿಲ್ಲ ಎಂದು ಆರೋಪಿಸಿದ್ದಾರೆ.

## ಪ್ರವಾಸಿ ತಾಣಗಳ ಮಾಹಿತಿ ಫಲಕಗಳ ಅನಾವರಣ




ಮಡಿಕೇರಿ,ಜು.28–ಕೂರ್ಗ್ ಹೋಟೆಲ್ ರೆಸಾರ್ಟ್ ಅಸೋಸಿಯೇಷನ್ ವತಿಯಿಂದ ಜಿಲ್ಲೆಯ ಹಲವೆಡೆ ಪ್ರವಾಸಿ ತಾಣಗಳ ಮಾಹಿತಿ ಫಲಕಗಳನ್ನು ಅಳವಡಿಸುವ ಯೋಜನೆಗೆ ರಾಜಾಸೀಟ್ ಹೊರಬದಿಯಲ್ಲಿ ಫಲಕ ಅನಾವರಣಗೊಳಿಸುವ ಮೂಲಕ ಚಾಲನೆ ದೊರಕಿದೆ.

ನಗರದ ಹೆಸರಾಂತ ಪ್ರವಾಸಿ ತಾಣ ರಾಜಾಸೀಟ್‌ನಲ್ಲಿ ಕೂರ್ಗ್ ಹೋಟೇಲ್ ರೆಸಾರ್ಟ್ ಅಸೋಸಿಯೇಷನ್ ವತಿಯಿಂದ ಜಿಲ್ಲೆಯ ವಿವಿಧ ಪ್ರವಾಸಿ ತಾಣಗಳಿಗೆ ರಾಜಾಸೀಟ್‌ನಿಂದ ಇರುವ ದೂರದ ಮಾಹಿತಿಯುಳ್ಳ ಬೃಹತ್ ಹೋರ್ಡಿಂಗ್ ಅನ್ನು ಅನಾವರಣಗೊಳಿಸಲಾಯಿತು. ಕೂರ್ಗ್ ಹೋಟೇಲ್ ರೆಸಾರ್ಟ್ ಅಸೋಸಿಯೇಷನ್ ಅಧ್ಯಕ್ಷ ಕುಂಡ್ಯೋಳಂಡ ದಿನೇಶ್ ಕಾರ್ಯಪ್ಪ, ಪ್ರಧಾನ ಕಾರ್ಯದರ್ಶಿ ನಾಸೀರ್, ನಗರಸಭೆಯ ಪೌರಾಯುಕ್ತ ರಮೇಶ್ ಹಾಜರಿದ್ದರು. ಇಂತಹ ಮಾಹಿತಿ ಫಲಕಗಳನ್ನು ಪ್ರವಾಸಿಗರ ಅನುಕೂಲತೆಗಾಗಿ ಜಿಲ್ಲೆಯ 12 ಪ್ರಮುಖ ಪ್ರವಾಸಿ ತಾಣಗಳಲ್ಲಿ ಅಳವಡಿಸಲಾಗುತ್ತಿದ್ದು, ಆಯಾ ಪ್ರವಾಸಿ ತಾಣದಿಂದ ಬೇರೆ ಕಡೆಗಳಲ್ಲಿನ ಪ್ರವಾಸಿ ತಾಣಕ್ಕೆ ಎಷ್ಟು ದೂರವಾಗಲಿದೆ. ಆ ಪ್ರವಾಸಿ ತಾಣದ ವಿಶೇಷ ಏನೆಂಬ ಮಾಹಿತಿ ಈ ಹೋರ್ಡಿಂಗ್‌ನಲ್ಲಿರಲಿದೆ ಎಂದು ದಿನೇಶ್ ಕಾರ್ಯಪ್ಪ ಮಾಹಿತಿ ನೀಡಿದರು.

## ಮಳೆಯಿಂದಾಗಿ ಮುಖ್ಯರಸ್ತೆಗೆ ಹಾನಿ



**ಗೋಣಿಕೊಪ್ಪ:** ಪುಷ್ಯ ಮಳೆಯ ಆರ್ಭಟದಿಂದಾಗಿ ಪೊನ್ನಂಪೇಟೆ ತಾಲೂಕಿನ ಬಿರು ನಾಣಿ ಪರಕಟಕೇರಿ ಮುಖ್ಯರಸ್ತೆಗೆ ಹಾನಿಯಾಗಿದೆ. ಮುಖ್ಯ ರಸ್ತೆ ಮಳೆಯಿಂದ ಕುಸಿದು ಹಾನಿಯಾಗಿದ್ದು, ವಾಹನ ಸಂಚಾರಕ್ಕೆ ಅಪಾಯಕಾರಿಯಾಗಿದೆ, ಕೂಡಲೇ ಸರಿಪಡಿಸುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ

ಶನಿವಾರ ಸಂಜೆಯಿಂದ ಸುರಿದ ಮಳೆಗೆ ತೋಡುಗಳು ತುಂಬಿ ಹರಿಯುತ್ತಿದೆ, ಲಕ್ಷ್ಮಣತೀರ್ಥ ನದಿ ತುಂಬಿ ಬಲ್ಯಮುಂಡೂರು–ಹರಿಹರ ಸಂಪರ್ಕ ರಸ್ತೆ ಕಡಿತಗೊಂಡಿದೆ. ಗಾಳಿ ಮಳೆಗೆ ಅಮ್ಮತ್ತಿ, ಪಾಲಿಬೆಟ್ಟ, ಪೊನ್ನಂಪೇಟೆ, ಬಾಳಲೆ ವ್ಯಾಪ್ತಿಯಲ್ಲಿ ಮರ ಬಿದ್ದು ವಿದ್ಯುತ್ ಕಂಬಗಳಿಗೆ ಹಾನಿಯಾಗಿದೆ.

## ಬೃಹತ್ ಮರ ಬಿದ್ದು ಮನೆಗೆ ತೀವ್ರ ಹಾನಿ



ಕುಶಾಲನಗರ, ಜು.28–ಸಮೀಪದ ಕೂಡಿಗೆ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಬ್ಯಾಡಗೊಟ್ಟ ಗ್ರಾಮದ ನಿವಾಸಿ ಪಾಂಡುರಂಗ ಎಂಬವರ ಮನೆ ಮೇಲೆ ಬೃಹತ್ ಮರ ಬಿದ್ದು ಹಾನಿ ಉಂಟಾಗಿದೆ.

ಗಾಳಿಮಳೆಯಿಂದ ಮರ ಬಿದ್ದು ಮನೆಯ ಮೇಲ್ಛಾವಣಿ ಸಂಪೂರ್ಣ ಹಾನಿಯಾಗಿದೆ. ಮನೆಗೆ ಹೊಂದಿಕೊಂಡಂತಿರುವ ಕೊಟ್ಟಿಗೆಗೂ ಹಾನಿಯಾಗಿದೆ. ಸ್ಥಳಕ್ಕೆ ತಾಲೂಕು ತಹಶೀಲ್ದಾರ್ ಕಿರಣ್ ಗೌರಯ್ಯ, ಕಂದಾಯ ಪರಿವೀಕ್ಷಕ ಸಂತೋಷ, ಹಾಗೂ ಗ್ರಾಮ ಲೆಕ್ಕಿಗ ಗುರು ದರ್ಶನ್‌ರವರು ಸ್ಥಳ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ತುಸು ಶಾಂತವಾದ ಮಳೆ: ನಿಲ್ಲದ ಮನೆ ಹಾನಿ



**ಮಡಿಕೇರಿ:** ಜಿಲ್ಲೆಯಲ್ಲಿ 3 ದಿನಗಳಿಂದ ಆರ್ಭಟಿಸುತ್ತಿದ್ದ ಪುಷ್ಯ ಮಳೆ ತುಸು ಶಾಂತವಾದಂತೆ ಕಂಡು ಬರುತ್ತಿದೆ. ಹೀಗಿದ್ದರೂ ಮಳೆ ಗಾಳಿಯಿಂದ ಮನೆ ಹಾನಿಯಾಗಿರುವ ಪ್ರಕರಣಗಳು ವರದಿಯಾಗಿವೆ. ಕುಶಾಲನಗರ ಹೋಬಳಿ ಕೂಡುಮಂಗಳೂರು ಗ್ರಾಪಂ ಚಿಕ್ಕತ್ತೂರು ನಿವಾಸಿ ಮಹಾದೇವಿ ಅವರ ಮನೆ ಹಾನಿಯಾಗಿದ್ದು ತಹಶೀಲ್ದಾರ್ ಕಿರಣ್ ಗೌರಯ್ಯ ಮತ್ತು ಕಂದಾಯ ಇಲಾಖೆ ಸಿಬ್ಬಂದಿ ಪರಿಶೀಲನೆ ನಡೆಸಿದರು. ಮನೆಯ ಗೋಡೆ ಹಾಗೂ ಮೇಲ್ಛಾವಣಿಗೆ ಪೂರ್ಣ ಹಾನಿಯಾಗಿದ್ದು ಮನೆ ಮಂದಿ ಯನ್ನು ಅವರ ಸಂಬಂಧಿಕರ ಮನೆಗೆ ಸ್ಥಳಾಂತರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಂತ್ರಸ್ತ ಕುಟುಂಬಕ್ಕೆ ಪಡಿತರ ಕಿಟ್ ಅನ್ನು ತಹಶೀಲ್ದಾರ್ ಹಸ್ತಾಂತರಿಸಿದರು.

ಕುಶಾಲನಗರ ತಾಲೂಕು ನಂಜರಾಯಪಟ್ಟಣ ಗ್ರಾಮದ ನಿವಾಸಿ ತಮ್ಮಯ್ಯ ಎಂಬವರ ಮನೆಯ ಮೇಲೆ ಮರ ಬಿದ್ದು ಗೋಡೆ ಕುಸಿದು ಭಾಗಶಃ ಹಾನಿಯಾಗಿದೆ. ನಾಪೋಕ್ಲು ಕುಂಜಿಲ ಗ್ರಾಮದ ಉಮ್ಮರ್ ಅವರ ಮನೆಯ ಅಡುಗೆ ಮನೆಯ ಗೋಡೆ ಗಾಳಿ ಮಳೆಗೆ ಕುಸಿದು ಬಿದ್ದಿದೆ.

## ಅಂತಾರಾಷ್ಟ್ರಿಯ ಮಾಸ್ಟರ್ಸ್ ಟೂರ್ನಿಯಲ್ಲಿ ಚಿನ್ನದ ಪದಕ




**ಗೋಣಿಕೊಪ್ಪ ತಿರುನಂದಪುರಂ ಗ್ರೀನ್ ಫೀಲ್ಡ್ ಸ್ಟೇಡಿಯಂನಲ್ಲಿ ಆಯೋಜಿಸಿದ್ದ ಸ್ಟೆಫನ್ ಜೇಕಬ್ ಕೊಶಿ ಅಂತಾರಾಷ್ಟ್ರಿಯ ಮಾಸ್ಟರ್ಸ್ ಬಾಸ್ಕೆಟ್‌ಬಾಲ್ ಟೂರ್ನಿಯಲ್ಲಿ 55, 60 ಹಾಗೂ 65ರ ವಯೋಮಿತಿ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದೆ. ಡಾ. ಮಂಡೇಪಂಡ ಪುಷ್ಪ ಕುಟ್ಟಣ್ಣ, ಕಾಡ್ಯಮಡ ದೇಚಮ್ಮ ಪೂಣಚ್ಚ, ಪಳಂಜಂಡ ವಾಣಿ ಚೆಂಗಪ್ಪ ಇತರರಿದ್ದರು.**

# ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಗ್ಯಾರಂಟಿ ಯೋಜನೆ ವರದಾನ



ಚಂದಕವಾಡಿ ಹೋಬಳಿ ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಹಿಳಾ ಫಲಾನುಭವಿಯೊಬ್ಬರು ಅನಿಸಿಕೆ ವ್ಯಕ್ತಪಡಿಸಿದರು.

ಚಾಮರಾಜನಗರ, ಜು.28 – ಪಂಚ ಗ್ಯಾರಂಟಿ ಯೋಜನೆಗಳು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ವರದಾನವಾಗಿ ಪರಿಣಮಿಸಿವೆ ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ಅಭಿಪ್ರಾಯಿಸಿದ್ದಾರೆ

ತಾಲೂಕಿನ ಚಂದಕವಾಡಿಯ ಡಾ. ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿಂದು ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಹಾಗೂ ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಚಂದಕವಾಡಿ ಹೋಬಳಿಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಹಾಗೂ ಫಲಾನುಭವಿಗಳೊಂದಿಗೆ ಸಂವಾದದಲ್ಲಿ ಮಾತನಾಡಿ ಮಾಜಿ ಪ್ರಧಾನಿ ಇಂದಿರಾ ಗಾಂಧಿಯ 20 ಅಂಶಗಳ ಕಾರ್ಯಕ್ರಮವು ಪಂಚ ಗ್ಯಾರಂಟಿ ಯೋಜನೆಗಳ ಪರಿಕಲ್ಪನೆಗೆ ಪ್ರೇರಣೆಯಾಗಿದೆ ಎಂದರೆ ತಪ್ಪಾಗಲಾರದು ಎಂದರು.

ಪ್ರಸ್ತುತ ಸಿದ್ದರಾಮಯ್ಯ ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು, ನಮ್ಮ ಸರ್ಕಾರ ಬಡವರು, ರೈತರು, ಮಹಿಳೆಯರ ಪರವಾಗಿದೆ ಎಂಬುದನ್ನು ಸಾಬೀತುಪಡಿಸಿದೆ. ಗ್ಯಾರಂಟಿ ಯೋಜನೆಗಳಿಗಾಗಿ ಸರ್ಕಾರವು ಪ್ರತಿವರ್ಷ 55 ಸಾವಿರ ಕೋಟಿಗೂ ಹೆಚ್ಚು ಖರ್ಚು ಮಾಡುತ್ತಿದೆ ಎಂದು ಅವರು ಹೇಳಿದರು.

ಗ್ಯಾರಂಟಿ ಯೋಜನೆಗಳ ಅನು ಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ಸೋಮೇಶ್ವರ್ ಮಾತನಾಡಿದರು. ಪಂಚ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳು ಯೋಜನೆಗಳಿಂದ ತಮಗಾಗಿರುವ ಅನುಕೂಲಗಳ ಬಗ್ಗೆ ಅನಿಸಿಕೆಗಳನ್ನು ಹಂಚಿಕೊಂಡರು. ಇದೇ ವೇಳೆ ಗ್ಯಾರು ಯುವ ನಿಧಿ ಪೋಸ್ಟರ್ ಅನ್ನು ಬಿಡುಗಡೆಗೊಳಿಸಿದರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಕಂಠರಾಜೇ ಅರಸ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಸಮಿತಿ ಸದಸ್ಯರಾದ ಮರಿಯಾಲದ ಹುಂಡಿ ಕುಮಾರ್, ಮಾದಾಪುರ ಕುಮಾರಸ್ವಾಮಿ, ಚಿನ್ನಸ್ವಾಮಿ, ರಾಜೇಶ್, ರಮೇಶ್, ಮಂಜುಳ, ರಾಜು, ಮಲ್ಲಿಕಾರ್ಜುನ, ಸುಕುಮಾರ್, ಗಣೇಶ್‌ಕುಮಾರ್, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು

# ಕಾರಿನ ಗಾಜು ಒಡೆದು ಲ್ಯಾಪ್‌ಟಾಪ್, ನಗದು ಕಳವು



ಕೊಳ್ಳೇಗಾಲ, ಜು.28– ತಾಲೂಕಿನ ಗುಂಡಾಲ್ ಜಲಾಶಯ ವೀಕ್ಷಣೆಗೆ ಆಗಮಿಸಿದ್ದ ಪ್ರವಾಸಿಗರೊಬ್ಬರ ಕಾರಿನ ಗ್ಲಾಸ್ ಹೊಡೆದು ಒಳಗಡೆ ಇದ್ದ ಲ್ಯಾಪ್ ಟಾಪ್ ಹಾಗೂ ನಗದನ್ನು ಕಳ್ಳತನ ಮಾಡಿರುವ ಘಟನೆ ಭಾನುವಾರ ಸಂಜೆ ನಡೆದಿದೆ.

ಬೆಂಗಳೂರಿನ ಮಾರತಹಳ್ಳಿ ನಿವಾಸಿ ಫ್ಲಿಪ್‌ಕಾರ್ಟ್ ಸಂಸ್ಥೆಯಲ್ಲಿ ಉದ್ಯೋಗಿಯಾಗಿರುವ ರೋಹಿತ್ ಲೋಹಿಯಾ ಎಂಬುವರು ತಮ್ಮ ಪತ್ನಿಯೊಂದಿಗೆ ಪ್ರವಾಸಾರ್ಥ ಬೆಂಗಳೂರಿನಿಂದ ಬಂದು ಬಂಡೀಪುರ, ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಹೋಗಿ ಸಂಜೆ ಗುಂಡಾಲ್ ಜಲಾಶಯಕ್ಕೆ ಬಂದಿದ್ದರೆನ್ನಲಾಗಿದೆ.

ತಮ್ಮ ಸ್ಕೋಡಾ ಕಾರನ್ನು (ಕೆಎ03, ಎನ್ ಡಬ್ಲ್ಯೂ 5575) ನಿಗದಿತ ಸ್ಥಳದಲ್ಲೇ ನಿಲ್ಲಿಸಿ ಜಲಾಶಯ ವೀಕ್ಷಣೆಗೆ ತೆರಳಿದ್ದರೆನ್ನಲಾಗಿದೆ. ಇದೇ ಸಮಯಕ್ಕೆ ಹೊಂಚು ಹಾಕಿ ಕುಳಿತಿದ್ದ ಅಪರಿಚಿತ ದುಷ್ಕರ್ಮಿಗಳು ಕಾರಿನ ಗಾಜನ್ನು ಹೊಡೆದು ಒಳಗಿದ್ದ ಎರಡು ಲ್ಯಾಪ್‌ಟಾಪ್, ಹಾಗೂ 60 ಸಾವಿರ ರೂ. ನಗದನ್ನು ಕಳವು ಮಾಡಿದ್ದಾರೆ. ಕೆಲ ಕಾಲದ ನಂತರ ರೋಹಿತ್ ದಂಪತಿಗಳು ಕಾರಿನ ಬಳಿಗೆ ಬಂದಾಗ ಗಾಜಿಗೆ ಹಾನಿಯಾಗಿರುವುದನ್ನು ನೋಡಿ ಪರಿಶೀಲಿಸಿದಾಗ ಕಾರಿನಲ್ಲಿಟ್ಟಿದ್ದ ಲ್ಯಾಪ್ ಟಾಪ್ ಹಾಗೂ ನಗದು ಕಳ್ಳತನವಾಗಿರುವುದು ಗೋಚರವಾಗಿದೆ.

ರೋಹಿತ್ ನೀಡಿದ ದೂರಿನ ಮೇರೆಗೆ ಗ್ರಾಮಾಂತರ ಪೋಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ

# ಕನಿಷ್ಠ ಕೂಲಿ ಆದೇಶ ಜಾರಿಗೆ ಒತ್ತಾಯಿಸಿ ಸಿಐಟಿಯು ಪ್ರತಿಭಟನೆ



ವೈಜ್ಞಾನಿಕ ಕನಿಷ್ಠ ಕೂಲಿ ಆದೇಶವನ್ನು ವಿಳಂಬವಿಲ್ಲದೆ ತಕ್ಷಣ ಜಾರಿ ಮಾಡುವಂತೆ ಒತ್ತಾಯಿಸಿ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘ ಜಿಲ್ಲಾ ಸಮಿತಿ ಜಿಲ್ಲಾಡಳಿತ ಮುಂಭಾಗ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಜು.28– ವೈಜ್ಞಾನಿಕ ಕನಿಷ್ಠ ಕೂಲಿ ಆದೇಶವನ್ನು ವಿಳಂಬವಿಲ್ಲದೆ ತಕ್ಷಣ ಜಾರಿ ಮಾಡುವಂತೆ ಒತ್ತಾಯಿಸಿ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘ(ಸಿಐಟಿಯು ಸಂಯೋಜಿತ) ಜಿಲ್ಲಾ ಸಮಿತಿ ನಗರದ ಜಿಲ್ಲಾಡಳಿತ ಮುಂಭಾಗ ಪ್ರತಿಭಟನೆ ನಡೆಸಿತು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಸಂಘದ ಜಿಲ್ಲಾಧ್ಯಕ್ಷ ಬರಗಿ ಸಿದ್ದರಾಜು ಮಾತನಾಡಿ, ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಸುಪ್ರೀಂ ನ್ಯಾಯಾಲಯದ ಆದೇಶದಂತೆ ಬೆಲೆ ಏರಿಕೆ ಅನುಗುಣ ಕನಿಷ್ಠವೇತನ ಜಾರಿ ಮಾಡಬೇಕು. ಸೇವಾ ಹಿರಿತನ ಆಧಾರದಲ್ಲಿ ವೇತನ ನೀಡಬೇಕು. ನಿವೃತ್ತಿ ಹೊಂದಿದ್ದ ನೌಕರರಿಗೆ ತಿಂಗಳಿಗೆ 6 ಸಾವಿರ ಪಿಂಚಣಿ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಅಮ್ಮನಪುರ ಸುರೇಶ್, ಜಿಲ್ಲಾ ಉಪಾಧ್ಯಕ್ಷ ಆರ್ಮುಗಂ, ಖಜಾಂಚಿ ದೊರೆಸ್ವಾಮಿ, ತಾಲೂಕು ಅಧ್ಯಕ್ಷ ಕೃಷ್ಣ, ಯಳಂದೂರು ತಾಲೂಕು ಅಧ್ಯಕ್ಷ ಕೃಷ್ಣನಾಯಕ, ಕೊಳ್ಳೇಗಾಲ ತಾಲೂಕು ಅಧ್ಯಕ್ಷ ಆರ್.ಮಹಾದೇವಸ್ವಾಮಿ, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ತಾಲೂಕು ಅಧ್ಯಕ್ಷ ರಾಜಣ್ಣ ಇತರರು ಭಾಗವಹಿಸಿದ್ದರು.

## ಅಪಘಾತದ ಗಾಯಾಳು ಸಾವು



**ಚಾಮರಾಜನಗರ:** ನಗರದ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿ ಭಾನುವಾರ ಸಂಭವಿಸಿದ ಹಿಟ್ ಅಂಡ್ ರನ್ ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಯುವಕ ಚಿಕಿತ್ಸೆ ಫಲಿಸದೆ ಸಾವನ್ನಪ್ಪಿದ್ದಾನೆ.

ತಾಲೂಕಿನ ದಡದಹಳ್ಳಿ ಗ್ರಾಮದ ರಮೇಶ್(35) ಮೃತಪಟ್ಟ ಯುವಕ. ಈತ ದ್ವಿಚಕ್ರ ವಾಹನದಲ್ಲಿ ನಗರದಿಂದ ಬಿ.ರಾಚಯ್ಯ ಜೋಡಿ ರಸ್ತೆ ಮಾರ್ಗವಾಗಿ ಸ್ವಗ್ರಾಮದ ಕಡೆ ತೆರಳುತ್ತಿದ್ದ ವೇಳೆ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದುಕೊಂಡ ಪರಿಣಾಮ ಯುವಕ ಗಂಭೀರವಾಗಿ ಗಾಯಗೊಂಡಿದ್ದನು.

ಈತನನ್ನು ನಗರದ ಸಿಮ್ಸ್‌ನಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಯೊಂದಕ್ಕೆ ರವಾನಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ರಮೇಶ್ ಮೃತಪಟ್ಟಿದ್ದಾನೆ.

# ಸಮುದಾಯ ಭವನಗಳು ಚಟುವಟಿಕೆಯಿಂದ ಇರಲಿ

## ದೇವಾಂಗ ಸಮುದಾಯ ಭವನ ಉದ್ಘಾಟಿಸಿ ಶಾಸಕ ಸಿ.ಪುಟ್ಟರಂಗಶೆಟ್ಟಿ



ದೊಡ್ಡರಾಯ ಪೇಟೆ ಗ್ರಾಮದಲ್ಲಿ ಶ್ರೀನೇಕಾರ ದೇವಾಂಗ ಸಮುದಾಯ ಭವನವನ್ನು ಶಾಸಕ ಸಿ. ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಚಾಮರಾಜನಗರ, ಜು.28– ದೊಡ್ಡರಾಯ ಪೇಟೆ ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಶ್ರೀನೇಕಾರ ದೇವಾಂಗ ಸಮುದಾಯ ಭವನವನ್ನು, ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಸಮುದಾಯ ಭವನವನ್ನು ದೇವಾಲಯದಂತೆ ಶ್ರದ್ಧೆ, ಭಕ್ತಿಯಿಂದ ನಿರ್ವಹಣೆ ಮಾಡಿ ಸದಾ ಕ್ರಿಯಾಶೀಲವಾಗಿ ಭವನದಲ್ಲಿ ಚರ್ಚೆ, ಶೈಕ್ಷಣಿಕ ಸಭೆ–ಸಮಾರಂಭ ಸೇರಿದಂತೆ ಉತ್ತಮ ಚಟುವಟಿಕೆಗಳನ್ನು ರೂಪಿಸಬೇಕು ಎಂದರು.

ಗ್ರಾ.ಪಂ. ಉಪಾಧ್ಯಕ್ಷೆ ಜ್ಯೋತಿ, ಸದಸ್ಯರಾದ ಮಹೇಶ್ವರಿ, ನಾಗೇಂದ್ರ, ಸಿದ್ದರಾಜು, ವಿಜಯ್, ಮುಖಂಡರಾದ ಪಿ.ರಮಗಪ್ಪ, ಗೌಡಿಕೆ ಶಿವಸ್ವಾಪ್ಪ, ರವಿಗೌಡ, ವೆಂಕಟೇಶ್ ಆರ್ಚಕ ರಂಗಪ್ಪ, ಮಹದೇವ್, ಅಶೋಕ್, ಮಹದೇವಸ್ವಾಮಿ, ರಾಜು, ಸೇರಿದಂತೆ ಶೆಟ್ಟಿಗಾರರು, ಯಜ ಮಾನರು, ದೇವಾಂಗ ಕುಲಭಾಂದವರು, ಮುಖಂಡರು ಗ್ರಾಮಸ್ಥರು. ಉಪಸ್ಥಿತರಿದ್ದರು

## ವಾಹನ ಸಂಚಾರ ನಿಷೇಧ

**ಗುಂಡ್ಲುಪೇಟೆ :** ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಒಂದು ಕಡೆ ರಸ್ತೆ ಪಕ್ಕದ ಪ್ಯಾರಪಿಟ್ ವಾಲ್ ಕುಸಿದಿರುವ ಕಾರಣ ಜು. 29, 30ರಂದು ಬೆಟ್ಟದ ದೇವಾಲಯ ಮುಚ್ಚಲ್ಪಡುತ್ತದೆ. ಅಲ್ಲದೇ ಈ ಎರಡೂ ದಿನಗಳಂದು ಬೆಟ್ಟಕ್ಕೆ ತೆರಳುವ ರಸ್ತೆಯಲ್ಲಿ ವಾಹನ ಸಂಚಾರ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

# ಅಧಿಕಾರಿಗಳ ದಬ್ಬಾಳಿಕೆ ಖಂಡಿಸಿ ಜು.31 ಬೃಹತ್ ಪ್ರತಿಭಟನೆ

ಹನೂರು, ಜು.28–ಅರಣ್ಯದಂಚಿನಲ್ಲಿ ವಾಸಿಸುವ ಜನತೆಯ ಮೇಲೆ ಅಧಿಕಾರಿಗಳ ದಬ್ಬಾಳಿಕೆ ಖಂಡಿಸಿ ಜು.31 ರಂದು ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ರೈತ ಸಂಘದ ತಾಲೂಕು ಅಧ್ಯಕ್ಷ ಅಮ್ಜದ್ ಖಾನ್ ತಿಳಿಸಿದರು.

ಹನೂರು ಪಟ್ಟಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಬಡ ರೈತರ ಮೇಲೆ ಅರಣ್ಯ ಇಲಾಖೆಯ ಕೆಲ ಸಿಬ್ಬಂದಿ ಇನ್ನಿಲ್ಲದ ಕಿರುಕುಳ ನೀಡುತ್ತಿದ್ದಾರೆ. ಈಗಾಗಲೇ ಹಲವಾರು ಬಾರಿ ಅರಣ್ಯ ಇಲಾಖೆ ಸಿಬ್ಬಂದಿಗಳಿಗೆ ಎಚ್ಚರಿಕೆ ನೀಡಿದ್ದರೂ ರೈತರ ಮೇಲೆ ದಬ್ಬಾಳಿಕೆ ಇನ್ನು ನಿಂತಿಲ್ಲ ಇದನ್ನು ಖಂಡಿಸಿ ಜು.31ರ ಬೆಳಗ್ಗೆ 11 ಗಂಟೆಗೆ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಸ್ಥಳಕ್ಕೆ ಕಾವೇರಿ ಮತ್ತು ಮಲೆಮಹದೇಶ್ವರ ವನ್ಯಜೀವಿ ವಿಭಾಗದ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಬೇಕೆಂದು ಒತ್ತಾಯಿಸಿದರು.

ಕಾಡು ಪ್ರಾಣಿಗಳ ಹಾವಳಿಯಿಂದ ರೈತರು ಜಮೀನುಗಳಲ್ಲಿ ಬೆಳೆದಿರುವ ಬೆಳೆಗಳನ್ನು ಸಂರಕ್ಷಣೆ ಮಾಡಿಕೊಳ್ಳುವುದೇ ದೊಡ್ಡ ಜವಾಬ್ದಾರಿಯಾಗಿದೆ. ಇದಲ್ಲದೆ ಸಾಕು ಪ್ರಾಣಿಗಳನ್ನು ಕಾಡು ಪ್ರಾಣಿಗಳು ತಿಂದು ಹಾಕುತ್ತೇವೆ, ಇದುವರೆಗೂ ಪರಿಹಾರ ನೀಡದೆ ಅರಣ್ಯಾಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಮುಂದಾದರು ಪರಿಹಾರ ಕೊಡುವ ನಿಟ್ಟಿನಲ್ಲಿ ಮುಂದಾಗಬೇಕೆಂದರು

## ವಿ.ಚಿಕ್ಕರಂಗಶೆಟ್ಟಿ ನಿಧನ



**ಯಳಂದೂರು:** ತಾಲೂಕಿನ ವೈ.ಕೆ. ಮೋಳೆ ಗ್ರಾಮದ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಉಪಾಧ್ಯಕ್ಷ ಎಂ. ಶಿವಣ್ಣರವರ ಚಿಕ್ಕಪ್ಪನ ಮಗ ವಿ.ಚಿಕ್ಕರಂಗಶೆಟ್ಟಿ (40) ವರ್ಷ ಸೋಮವಾರ ಅನಾರೋಗ್ಯ ಹಿನ್ನೆಲೆಯಲ್ಲಿ ಮೃತಪಟ್ಟಿದ್ದಾರೆ. ಮೃತರಿಗೆ ತಾಯಿ ಮತ್ತು ಮಡದಿ ಮತ್ತು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಮಂಗಳವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಮಾನವ-ವನ್ಯಜೀವಿ ಸಂಘರ್ಷ

# ಜನರ ಜೀವ, ರೈತರ ಬೆಳೆ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಿ

● ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳಿಗೆ ಖಂಡ್ರೆ ಸೂಚನೆ ● ಮಳೆ ಬಿದ್ದು ಅರಣ್ಯ ಸಮೃದ್ಧವಾಗಿದ್ದರೂ ಆನೆಗಳು ಬಯಲಿಗೆ ಬರಲು ಕಾರಣ ತಿಳಿಯಿರಿ! ● ಕಾಡಾನೆಗಳ ಅರಣ್ಯಕ್ಕೆ ಅಟ್ಟಿ; ಪುಂಡಾನೆಗಳ ಸೆರೆ ಹಿಡಿಯಿರಿ



ಸಾಂದರ್ಭಿಕ ಚಿತ್ರ



ಬೆಂಗಳೂರು, ಜು.28(ಕೆಎಂಶಿ)- ಮಾನವ-ವನ್ಯಜೀವಿ ಸಂಘರ್ಷದ ಅರಣ್ಯ ಪ್ರದೇಶಗಳಲ್ಲಿ ಉನ್ನತಾಧಿಕಾರಿಗಳು ನಿಗಾ ವಹಿಸಿ ಜನರ ಜೀವ ಮತ್ತು ರೈತರ ಬೆಳೆ ರಕ್ಷಣೆಗೆ ಎಲ್ಲ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಸೂಚಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ಬಾಳೆಹೊನ್ನೂರು ಬಳಿ ಕಳೆದ 4 ದಿನಗಳಲ್ಲಿ ಇಬ್ಬರು ವನ್ಯಜೀವಿ ದಾಳಿಯಿಂದ ಮೃತಪಟ್ಟ ಘಟನೆಗೆ ಶೋಕ ವ್ಯಕ್ತಪಡಿಸಿದ ಅವರು, ಆನೆಗಳು ನಾಡಿನಲ್ಲಿ ಕಾಣಿಸಿಕೊಂಡ ಕೂಡಲೇ ಅರಣ್ಯಾಧಿಕಾರಿಗಳು ಕ್ರಮ ವಹಿಸಬೇಕು. ಸ್ಥಳೀಯರಿಗೆ ಮಾಹಿತಿ ನೀಡಬೇಕು, ಕಾಡಾನೆಗಳನ್ನು ಅರಣ್ಯಕ್ಕೆ ಹಿಮ್ಮೆಟ್ಟಿಸಲು ತುರ್ತು ಕ್ರಮ ಕೈಗೊಳ್ಳಬೇಕು ಎಂದರು.

ರಾಜ್ಯದೆಲ್ಲೆಡೆ ಮಳೆಯಾಗುತ್ತಿದೆ. ಕೆರೆ, ಕಟ್ಟೆಗಳು ತುಂಬಿವೆ, ಕಾಡಿನಲ್ಲಿ ಹುಲ್ಲು, ಸೊಪ್ಪು, ತೊಗಟೆ ಇತ್ಯಾದಿ ಆಹಾರ ಲಭ್ಯವಿದ್ದರೂ ಆನೆಗಳು ನಾಡಿಗೆ ಏಕೆ ಬರುತ್ತಿವೆ ಎಂಬ ಕುರಿತು ಅಧಿಕಾರಿಗಳು ಗಮನ ಹರಿಸಿ, ಮುಂದೆ ಇಂತಹ ಅನಾಹುತಗಳು ಸಂಭವಿಸದಂತೆ ಕ್ರಮ ವಹಿಸಬೇಕು.

ಆನೆ ಕಂದಕಗಳು ಮಳೆಯಿಂದ ಮುಚ್ಚಿಹೋಗಿವೆ, ಸೌರತಂತಿ ಬೇಲಿ, ಟೆಂಟಿಕಲ್ ಫೆನ್ಸಿಂಗ್ ಮರಬಿದ್ದು ಸಂಪರ್ಕ ಕಡಿದುಕೊಂಡ ದೂರುಗಳಿವೆ. ಕೂಡಲೇ ಇವುಗಳ ನಿರ್ವಹಣೆ ಮಾಡಬೇಕು, ಅರಣ್ಯ ಗಸ್ತು ಸಿಬ್ಬಂದಿ ಉನ್ನತಾಧಿಕಾರಿಗಳಿಗೆ ವರದಿ ನೀಡಿ ದುರಸ್ತಿ ಕೈಗೊಳ್ಳಬೇಕು.

ಆನೆಗಳಿಂದ ಹೆಚ್ಚಿನ ಸಾವು ಸಂಭವಿಸುತ್ತಿದೆ. ಹೆಚ್ಚುವರಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ. ಕೂಡಲೇ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿ, ಕಾಮಗಾರಿ ಆರಂಭಿಸಿ, ನಿಗದಿತ ಕಾಲಮಿತಿಯಲ್ಲಿ ಕೆಲಸ ಪೂರ್ಣಗೊಳಿಸುವ ಮೂಲಕ ಜನರ ಜೀವ ಮತ್ತು ರೈತರ ಬೆಳೆ ರಕ್ಷಣೆಗೆ ಮುಂದಾಗಬೇಕು ಎಂದರು.

ಆನೆ ಸಮಸ್ಯೆಯೇ ಇಲ್ಲದ ಪ್ರದೇಶಗಳಲ್ಲೂ ಆನೆ-ಮಾನವ ಸಂಘರ್ಷ ಹೆಚ್ಚಳವಾಗಿದ್ದು, ಕಾರಣ ಕಂಡುಕೊಳ್ಳಲು ಅಧ್ಯಯನ ನಡೆಸಿ ವರದಿ ಸಲ್ಲಿಸಿ. ಹೊಸ ಪ್ರದೇಶದಲ್ಲಿ ವನ್ಯಜೀವಿಗಳು ಕಾಣಿಸಿದಾಗ ನೆರೆ ಜಿಲ್ಲೆಯ ಆನೆ ಕ್ಷಿಪ್ರ ಕಾರ್ಯಪಡೆ ಸಿಬ್ಬಂದಿ ನೆರವು ಪಡೆದು ಕಾಡಾನೆಗಳನ್ನು ಅರಣ್ಯಕ್ಕೆ ಹಿಮ್ಮೆಟ್ಟಿಸಬೇಕು, ಪುಂಡಾನೆಗಳಿದ್ದರೆ ಸೆರೆ ಹಿಡಿಯಬೇಕು.

ಅತ್ಯಾಧುನಿಕ ತಂತ್ರಜ್ಞಾನ ಬಳಸಿ, ಕಾವಲು ಮತ್ತು ಕಾಡಿನಂಚಿನ ಜನರಿಗೆ ಎಚ್ಚರಿಕೆ ಸಂದೇಶ ರವಾನಿಸಲು ಏಕೀಕೃತ ಕಮಾಂಡ್ ಕೇಂದ್ರ ಸ್ಥಾಪನೆಗೆ ಸೂಚಿಸಿದ್ದು, ಕೂಡಲೇ ರೂಪುರೇಷೆ ಸಿದ್ಧಪಡಿಸಿ, ಡಿಪಿಆರ್ ಸಲ್ಲಿಸಬೇಕು.

ಮಾನವ-ವನ್ಯಜೀವಿ ಸಂಘರ್ಷದ ಪ್ರತಿ ವೃತ್ತ, ಸಂಬಂಧಿತ ವಲಯ ಅಧಿಕಾರಿಗಳೊಂದಿಗೆ ಮುಖ್ಯ ವನ್ಯಜೀವಿ ಪರಿಪಾಲಕರು ವಾರಕ್ಕೊಮ್ಮೆ ವಿಡಿಯೋ ಕಾನ್ಫರೆನ್ಸಿಂಗ್ ಸಭೆ ನಡೆಸಿ, ಸೂಚನೆ ನೀಡಬೇಕು, ಸಂಘರ್ಷ ನಿಯಂತ್ರಣಕ್ಕೆ ಕ್ರಮ ವಹಿಸಬೇಕು.

ಹೊರಗುತ್ತಿಗೆಯ ಮುಂಚೂಣಿ ಅರಣ್ಯ ಸಿಬ್ಬಂದಿಗೆ ಸಕಾಲದಲ್ಲಿ ವೇತನ, ಅಪಾಯ ಭತ್ಯೆ ಮತ್ತು ಆಹಾರ ಭತ್ಯೆ ಪಾವತಿ ಖಾತ್ರಿಪಡಿಸಿಕೊಳ್ಳಬೇಕು. ಇನ್ನು ಮುಂದೆ ಇಂತಹ ದೂರು ಬಂದರೆ ಸಂಬಂಧಿತ ವಲಯ ಅರಣ್ಯಾಧಿಕಾರಿ ಮತ್ತು ಉಪವಲಯ ಅರಣ್ಯ ಸಂರಕ್ಷಣಾಧಿಕಾರಿಗಳನ್ನೇ ಹೊಣೆ ಮಾಡಲಾಗುವುದು ಎಂದು ಎಚ್ಚರಿಸಿದರು.

# ಶಾಸಕರ ವಿಶ್ವಾಸ ಗಳಿಸಲು ಸಿಎಂ ಸಿದ್ದರಾಮಯ್ಯ ಸಮಾಲೋಚನೆ ಸಭೆ

● ಇಂದಿನಿಂದ ನಾಲ್ಕು ದಿನಗಳ ಕಾಲ ಜಿಲ್ಲಾವಾರು ಶಾಸಕರ ಸಭೆ
● ಅವರ ಸಮಸ್ಯೆ ಆಲಿಸಿ; ಖುದ್ದು ನಿವಾರಣೆ ಭರವಸೆ



ಬೆಂಗಳೂರು, ಜು.28(ಕೆಎಂಶಿ)- ಅಧಿಕಾರ ಹಂಚಿಕೆ ಸಮಯ ಹತ್ತಿರವಾಗುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಂಗ್ರೆಸ್ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ನಾಳೆಯಿಂದ ಜಿಲ್ಲಾವಾರು ಸಭೆಗೆ ಮುಂದಾಗಿದ್ದಾರೆ.

ತಮ್ಮ ತವರು ಮೈಸೂರು ಜಿಲ್ಲೆಯಿಂದ ಮೊದಲ್ಗೊಂಡು ನಾಲ್ಕು ದಿನಗಳ ಕಾಲ ರಾಜ್ಯದ ಎಲ್ಲಾ ಜಿಲ್ಲೆಗಳ ಶಾಸಕರ ಸಭೆ ಆಯೋಜಿಸಿದ್ದಾರೆ.

ವಿಧಾನಸೌಧದಲ್ಲಿ ನಾಳೆ ಸಂಜೆಯಿಂದ ಮೈಸೂರು, ಚಾಮರಾಜನಗರ, ಕೊಡಗು, ತುಮಕೂರು, ಹಾಸನ ಜಿಲ್ಲೆಯ ಪಕ್ಷದ ಶಾಸಕರೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ. ಸಭೆಯಲ್ಲಿ ಆಯಾ ಜಿಲ್ಲೆಯ ಉಸ್ತುವಾರಿ ಸಚಿವರು ಭಾಗವಹಿಸಲಿದ್ದಾರೆ.

ಮುಖ್ಯಮಂತ್ರಿ ಸಮ್ಮುಖದಲ್ಲೇ ಶಾಸಕರು ತಮ್ಮ ಕ್ಷೇತ್ರದಲ್ಲಿ ಆಗಬೇಕಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಅಲ್ಲದೆ, ಅಧಿಕಾರಿಗಳ ವರ್ಗಾವಣೆ, ಯಾವ ಇಲಾಖೆ ಸಚಿವರು ತಮ್ಮ ಅಹವಾಲಿಗೆ ಸ್ಪಂದಿಸುತ್ತಿಲ್ಲ ಎಂಬ ಬಗ್ಗೆ ಮುಕ್ತವಾಗಿ ವಿಚಾರ ವಿನಿಮಯ ಮಾಡಿಕೊಳ್ಳಲಿದ್ದಾರೆ.

ಕೆಲವು ಶಾಸಕರು ಜಿಲ್ಲಾ ಉಸ್ತುವಾರಿ ಸಚಿವರ ವಿರುದ್ಧವೇ ಆಗಿಂದಾಗ್ಗೆ ಅಪಸ್ವರ ಎತ್ತುತ್ತಿರುವ ಹಿನ್ನೆಲೆಯಲ್ಲಿ ಆ ಸಮಸ್ಯೆಗಳನ್ನೂ ಖುದ್ದಾಗಿ ಪರಿಹರಿಸುವ ಮೂಲಕ ನಾಯಕತ್ವ ಭದ್ರಪಡಿಸಿಕೊಳ್ಳಲು ಮುಖ್ಯಮಂತ್ರಿ ಮುಂದಾಗಿದ್ದಾರೆ.

ಸಚಿವರ ವಿರುದ್ಧ ಪಕ್ಷದ ಶಾಸಕರು ಬಹಿರಂಗವಾಗಿ ಅಪಸ್ವರ ಎತ್ತಿದ್ದಲ್ಲದೆ, ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಎಂದು ದೂರಿದ್ದರು.

ಈ ಹಿನ್ನೆಲೆಯಲ್ಲಿ ಪಕ್ಷದ ವರಿಷ್ಠರು ರಾಜ್ಯದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಕಳುಹಿಸಿ, ಸಚಿವರು ಮತ್ತು ಶಾಸಕರನ್ನು ಮುಖಾಮುಖಿ ಭೇಟಿ ಮಾಡಿ ಮಾಹಿತಿ ಸಂಗ್ರಹಿಸಿದ್ದರು.

ವರಿಷ್ಠರು ಮಧ್ಯಪ್ರವೇಶ ಮಾಡುತ್ತಿದ್ದಂತೆ ಮುಖ್ಯಮಂತ್ರಿ, ಆಡಳಿತ ಶಾಸಕರ ಕ್ಷೇತ್ರಗಳ ಅಭಿವೃದ್ಧಿಗೆ ತಲಾ 50 ಕೋಟಿ ರೂ. ಬಿಡುಗಡೆ ಮಾಡಿ, ಹಣವನ್ನು ಯಾವ ರೀತಿ ಬಳಕೆ ಮಾಡಿಕೊಳ್ಳಬೇಕೆಂಬ ಮಾರ್ಗಸೂಚಿಯನ್ನೂ ನೀಡಿದ್ದರು.

ಕಾಮಗಾರಿಗೂ ಮುನ್ನ ತಮ್ಮ ಸಚಿವಾಲಯದ ಅಧಿಕಾರಿಗಳನ್ನು ಭೇಟಿ ಮಾಡಿ ಕಾಮಗಾರಿ ವಿವರ ನೀಡಬೇಕು ಹಾಗೂ ತಮ್ಮನ್ನೂ ಭೇಟಿ ಮಾಡಬೇಕೆಂದು ಪಕ್ಷದ ಎಲ್ಲಾ ಶಾಸಕರಿಗೆ ಸುತ್ತೋಲೆ ಕಳುಹಿಸಿದ್ದರು.

ಈ ಮಧ್ಯೆ, ಸೆಪ್ಟೆಂಬರ್-ನವೆಂಬರ್ ವೇಳೆಗೆ ಅಧಿಕಾರ ಹಸ್ತಾಂತರ ಆಗಲಿದೆ ಎಂಬುದಾಗಿ ಆಡಳಿತಾರೂಢ ಕಾಂಗ್ರೆಸ್ ವಲಯದಲ್ಲಿ ದಟ್ಟ ವದಂತಿ ಹಬ್ಬಿದೆ.

ಇದರ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಭೇಟಿಗೆ ಮೂರು ಬಾರಿ ದೆಹಲಿಗೆ ತೆರಳಿದ್ದರು, ಆದರೂ ಭೇಟಿ ಸಾಧ್ಯವಾಗಿರಲಿಲ್ಲ.

ಪುನಃ ಆಗಸ್ಟ್ 1ರಂದು ರಾಹುಲ್ ಭೇಟಿಗೆ ಮುಖ್ಯಮಂತ್ರಿ ದೆಹಲಿ ಪ್ರವಾಸ ಕೈಗೊಳ್ಳುತ್ತಿದ್ದು, ಇದಕ್ಕೂ ಮುನ್ನ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಮತ್ತು ಅವರ ಸಮಸ್ಯೆಗಳಿಗೆ ಸ್ಪಂದಿಸಲು ಸಭೆಗಳನ್ನು ನಡೆಸುತ್ತಿದ್ದಾರೆ.

# ತಪ್ಪುಗಳು ಯಶಸ್ಸಿನ ಮೆಟ್ಟಿಲುಗಳು: ಭಾಸ್ಕರ್ ಕಳಲೆ

ದಕ್ಷ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಾರ್ಗದರ್ಶನ ಕಾರ್ಯಕ್ರಮ



ಮೈಸೂರು, ಜು. 28-ಮೈಸೂರಿನ ಹೂಟಗಳ್ಳಿಯಲ್ಲಿರುವ ದಕ್ಷ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೋಮವಾರ ಪ್ರಥಮ ವರ್ಷದ ಬಿಕಾಂ, ಬಿಬಿಎ ಮತ್ತು ಬಿಸಿಎ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಈಕ್ವಲೈಸ್ ಆರ್.ಸಿ.ಎಂ. ಸರ್ವಿಸಸ್ ಮತ್ತು ಟಿ.ಐ.ಇ. ಮೈಸೂರು ಚಾಪ್ಟರ್‌ಗಳ ಅಧ್ಯಕ್ಷರಾದ ಭಾಸ್ಕರ್ ಕಳಲೆ ಮಾತನಾಡಿ, ತಪ್ಪುಗಳು ಕಲಿಕಾ ಪ್ರಕ್ರಿಯೆಯ ಅವಿಭಾಜ್ಯ ಅಂಗಗಳು. ವೈಫಲ್ಯಗಳಿಂದ ಹೆಚ್ಚಿನದನ್ನು ಕಲಿಯಲು, ಅವುಗಳನ್ನು ಯಶಸ್ಸಿನ ಮೆಟ್ಟಿಲುಗಳಾಗಿ ಪರಿಗಣಿಸಲು ಸಾಧ್ಯ ಎಂದು ಹೇಳಿದರು.

ನೆಟ್ವರ್ಕಿಂಗ್, ಭಾವನಾತ್ಮಕ ಬುದ್ಧಿವಂತಿಕೆ ಮತ್ತು ಸಂವಹನ ಕೌಶಲಗಳ ಕುರಿತು ಅಮೂಲ್ಯವಾದ ಒಳನೋಟಗಳನ್ನು ವಿವರಿಸಿದ ಅವರು, ವಿದ್ಯಾರ್ಥಿಗಳಿಗೆ ಸ್ಪಷ್ಟ ಗುರಿಗಳನ್ನು ಹೊಂದಿಸಲು ಮತ್ತು ನೈತಿಕತೆಯಲ್ಲಿ ರಾಜಿ ಮಾಡಿಕೊಳ್ಳದೆ ಅವುಗಳನ್ನು ಸಾಧಿಸಲು ಶ್ರಮಿಸುವಂತೆ ಸಲಹೆ ನೀಡಿದರು.

ಇದಕ್ಕೂ ಮೊದಲು ಕಾರ್ಯಕ್ರಮವನ್ನು ಉದ್ಘಾಟಿಸಿದ ದಕ್ಷ ಕಾಲೇಜಿನ ಆಡಳಿತ ಮಂಡಳಿ ನಿರ್ದೇಶಕರೂ ಆದ ಆಲ್ಟೋಸ್ ಕಂಪ್ಯೂಟಿಂಗ್ ಇಂಡಿಯಾ ಲಿ. ಕಂಪನಿಯ ಜನರಲ್ ಮ್ಯಾನೇಜರ್ ಅಂಡ್ ಕಂಟ್ರಿ ಹೆಡ್ ಡಾ. ಸಂಜಯ್ ವರ್ನಾವೆ ಮಾತನಾಡಿ, ಕಲಿಕೆ ಎಂಬುದು ಒಂದು ದಿನಕ್ಕೆ ಸೀಮಿತವಾದದ್ದಲ್ಲ ಅದು ಸ್ವಿಚ್ ಹಾಕಿದಾಗ ಹೊತ್ತಿಕೊಳ್ಳುವ ಲೈಟ್‌ನಂತಲ್ಲ. ಅದೊಂದು ನಿರಂತರವಾದ ಪ್ರಕ್ರಿಯೆ. ಆ ಮೂಲಕ ಜ್ಞಾನದ ಒಂದೊಂದೇ ಮೆಟ್ಟಿಲನ್ನು ಏರುತ್ತಾ ಸಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗ್ಲೋಬಲ್ ಎಜುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಪಿ.ಜಯಚಂದ್ರ ರಾಜು ಅವರು ಮೊದಲ ವರ್ಷದ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಗ್ಲೋಬಲ್ ಎಜುಕೇಶನ್ ಟ್ರಸ್ಟ್‌ನ ನಿರ್ದೇಶಕರಾದ ಗೌತಮ್ ರಾಜು, ದಕ್ಷ ಉನ್ನತ ಶಿಕ್ಷಣ ವಿಭಾಗದ ನಿರ್ದೇಶಕರಾದ ಪಿ.ಹರೀಶ್, ದಕ್ಷ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಮಹೇಶ್ ಎಂ.ಬಿ. ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

### ಧರ್ಮಸ್ಥಳ ಸಂಶಯಾಸ್ಪದ ಅಂತ್ಯಕ್ರಿಯೆ ಪ್ರಕರಣ

# ಮೃತದೇಹಗಳನ್ನು ಹೂತಿದ್ದ ಸ್ಥಳ ಪರಿಶೀಲನೆ ಆರಂಭಿಸಿದ ಎಸ್‌ಐಟಿ



ಮಂಗಳೂರು, ಜು.28- ಧರ್ಮಸ್ಥಳ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಹಿಂದೆ ನಡೆದಿದೆ ಎನ್ನಲಾದ ಸಂಶಯಾಸ್ಪದ ಅಂತ್ಯಕ್ರಿಯೆ ಪ್ರಕರಣದ ತನಿಖೆ ನಿರ್ಣಾಯಕ ಹಂತಕ್ಕೆ ತಲುಪಿದ್ದು, ವಿಶೇಷ ತನಿಖಾ ತಂಡ (ಎಸ್‌ಐಟಿ) ಧರ್ಮಸ್ಥಳ ಗ್ರಾಮದಲ್ಲಿ ಸೋಮವಾರ ಭಾರಿ ಭದ್ರತೆಯ ನಡುವೆ ಸಾಕ್ಷಿ-ದೂರುದಾರರ ಸಮ್ಮುಖದಲ್ಲಿ ಮೃತದೇಹಗಳನ್ನು ಹೂತಿದ್ದ ಸ್ಥಳವನ್ನು ಪರಿಶೀಲನೆ ನಡೆಸಿತು.

ಪ್ರಕರಣದ ಸಾಕ್ಷಿ ಮತ್ತು ದೂರುದಾರರೂ ಆಗಿರುವ ವ್ಯಕ್ತಿಯು ಮುಖಕ್ಕೆ ಮುಸುಕು ಹಾಕಿಕೊಂಡು ತಮ್ಮ ಕಾನೂನು ಸಲಹೆಗಾರರೊಂದಿಗೆ ಬೆಳ್ತಂಗಡಿಯಲ್ಲಿರುವ ಎಸ್‌ಐಟಿ ಕಚೇರಿಗೆ ಬೆಳಿಗ್ಗೆ 11.30ರ ಸುಮಾರಿಗೆ ಆಗಮಿಸಿದರು. ತನಿಖಾಧಿಕಾರಿ ಜಿತೇಂದ್ರ ಕುಮಾರ್ ಅವರು ಒಂದು ಗಂಟೆ ವಿಚಾರಣೆ ನಡೆಸಿದ ನಂತರ, ಅವರನ್ನು ನೇತ್ರಾವತಿ ಸ್ನಾನಗೃಹದ ಬಳಿ ಕರೆದೊಯ್ಯಲಾಯಿತು. ಅಲ್ಲಿ ಅವರು ಎಫ್‌ಎಸ್‌ಎಲ್ ತಂಡ, ಕಂದಾಯ ಮತ್ತು ಅರಣ್ಯ ಇಲಾಖೆಗಳ ಅಧಿಕಾರಿಗಳು ಮತ್ತು ಭೂ ದಾಖಲೆ ವಿಭಾಗದ ಅಧಿಕಾರಿಗಳ ಸಮ್ಮುಖದಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ಕೆಲವು ಸ್ಥಳಗಳನ್ನು ಪರಿಶೀಲನೆಗಾಗಿ ತೋರಿಸಿದರು.

ಮೂಲಗಳ ಪ್ರಕಾರ ದೂರುದಾರರು ತೋರಿಸಿರುವ ಸಮಾಧಿ ಸ್ಥಳಗಳನ್ನು ಗುರುತಿಸಲಾಗುತ್ತದೆ ಮತ್ತು ಸುರಕ್ಷಿತಗೊಳಿಸಲಾಗುತ್ತದೆ. ಅಸ್ಥಿಪಂಜರದ ಅವಶೇಷಗಳನ್ನು ಹೊರತೆಗೆಯುವ ಮೊದಲು ಸಾಕ್ಷ್ಯಗಳನ್ನು ಹಾಳು ಮಾಡುವುದನ್ನು ತಪ್ಪಿಸಲು ಅಲ್ಲಿಗೆ ಪ್ರವೇಶವನ್ನು ನಿಷೇಧಿಸಲಾಗುತ್ತದೆ.

ಎಸ್‌ಐಟಿ ತಂಡದ ಅಧಿಕಾರಿಗಳಾದ ಡಿಐಜಿ ಎಂ.ಎನ್.ಅನುಚೇತ್ ಮತ್ತು ತನಿಖಾಧಿಕಾರಿ ಜಿತೇಂದ್ರ ಕುಮಾರ್ ಅವರ ಮುಂದೆ ದೂರುದಾರರು ಶನಿವಾರ ಮತ್ತು ಭಾನುವಾರ ತಮ್ಮ ಹೇಳಿಕೆಗಳನ್ನು ದಾಖಲಿಸಿದ್ದಾರೆ. ಎಸ್‌ಐಟಿ ಮುಖ್ಯಸ್ಥ ಪ್ರಣಬ್ ಮೊಹಾಂತಿ ಕೂಡ ಭಾನುವಾರ ವಿಚಾರಣೆಯಲ್ಲಿ ಭಾಗವಹಿಸಿದ್ದರು.

ಧರ್ಮಸ್ಥಳ ಗ್ರಾಮ ವ್ಯಾಪ್ತಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅತ್ಯಾಚಾರ ಮತ್ತು ಕೊಲೆಯಾದ ವ್ಯಕ್ತಿಗಳ ಶವಗಳನ್ನು ಹೂಳಲು ಒತ್ತಾಯಿಸಿ ಬೆದರಿಕೆ ಹಾಕಲಾಗಿದೆ ಎಂದು ಆರೋಪಿಸಿ ಮಾಜಿ ಪೌರಕಾರ್ಮಿಕ ಎಂದು ಹೇಳಲಾದ ದೂರುದಾರರು ದಕ್ಷಿಣ ಕನ್ನಡ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಧರ್ಮಸ್ಥಳ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಅವರ ದೂರಿನ ಮೇರೆಗೆ ಜುಲೈ 4 ರಂದು ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ದೂರುದಾರರು ಅದಾದ ಒಂದು ವಾರದ ನಂತರ ಬೆಳ್ತಂಗಡಿ ನ್ಯಾಯಾಲಯಕ್ಕೆ ಹಾಜರಾಗಿ ಹೇಳಿಕೆ ದಾಖಲಿಸಿದ್ದಾರೆ. ತಾವೇ ಹೊರತೆಗೆದಿದ್ದು ಎಂದು ಹೇಳಿಕೊಂಡ ಅಸ್ಥಿಪಂಜರದ ಅವಶೇಷಗಳನ್ನು ಹಾಜರುಪಡಿಸಿದ್ದಾರೆ. ವಕೀಲರು ಮತ್ತು ಪಂಚಸಾಕ್ಷಿಗಳ ಮುಂದೆ ಪೊಲೀಸರು ಅವುಗಳನ್ನು ವಶಪಡಿಸಿಕೊಂಡರು. ಜುಲೈ 19 ರಂದು ಎಸ್‌ಐಟಿ ರಚನೆಯಾಯಿತು ಮತ್ತು ಜುಲೈ 25 ರಂದು ಸ್ಥಳೀಯ ಪೊಲೀಸರಿಂದ ಪ್ರಕರಣದ ದಾಖಲೆಗಳನ್ನು ಅಧಿಕೃತವಾಗಿ ಪಡೆಯಿತು.

# ಫಿಡೆ ಮಹಿಳಾ ಚೆಸ್ ವಿಶ್ವಕಪ್: ಭಾರತದ ದಿವ್ಯಾ ದೇಶಮುಖ್ ಚಾಂಪಿಯನ್



ಬಟುಮಿ(ಜಾರ್ಜಿಯಾ), ಜು.28- ಫಿಡೆ ಮಹಿಳಾ ವಿಶ್ವಕಪ್ ಚೆಸ್‌ನ ಫೈನಲ್ ಪಂದ್ಯದಲ್ಲಿ ಭಾರತದ ಅನುಭವಿ ಚೆಸ್ ಆಟಗಾರ್ತಿ ಕೋನೇರು ಹಂಪಿ ವಿರುದ್ಧ 19 ವರ್ಷದ ದಿವ್ಯಾ ದೇಶಮುಖ್ ಅವರು ಗೆಲುವು ಸಾಧಿಸಿದರು. ಆ ಮೂಲಕ ಫಿಡೆ ಮಹಿಳಾ ಚೆಸ್ ವಿಶ್ವಕಪ್ ಗೆದ್ದ ಭಾರತದ ಮೊದಲ ಆಟಗಾರ್ತಿ ಎಂಬ ಕೀರ್ತಿಗೆ ಭಾಜನರಾದರು.

ಕೋನೇರು ಹಂಪಿ ಹಾಗೂ ದಿವ್ಯಾ ದೇಶಮುಖ್ ಅವರ ನಡುವಿನ ಫೈನಲ್ ಪಂದ್ಯವು ಶನಿವಾರ, ಭಾನುವಾರ ನಡೆದ ಎರಡು ಕ್ಲಾಸಿಕಲ್ ಪಂದ್ಯಗಳ ನಂತರ ಸ್ಕೋರ್ 1-1 ರಲ್ಲಿ ಸಮಬಲವಾಗಿತ್ತು.

ಸೋಮವಾರದ ಟೈ ಬ್ರೇಕರ್‌ನಲ್ಲಿ ಮೊದಲ ಸುತ್ತಿನಲ್ಲಿ ಬಿಳಿ ಕಾಯಿಗಳೊಂದಿಗೆ ಆಡಿದ ದಿವ್ಯಾ ದೇಶಮುಖ್ ಅವರು ಡ್ರಾ ಸಾಧಿಸಿದರು. ಆದರೆ ಎರಡನೇ ಸುತ್ತಿನಲ್ಲಿ ಕಪ್ಪು ಕಾಯಿಗಳೊಂದಿಗೆ 2.5-1.5 ಅಂತರದಲ್ಲಿ ಗೆಲುವಿನ ನಗೆ ಬೀರಿದರು.

ಫೈನಲ್ ಪಂದ್ಯದ ಮೂರನೇ ದಿನ ಟೈಬ್ರೇಕರ್‌ನಲ್ಲಿ ಗೆಲ್ಲುವ ಮೂಲಕ ಭಾರತದ ದಿವ್ಯಾ ದೇಶಮುಖ್ ಅವರು ನೂತನ ಗ್ರ್ಯಾಂಡ್‌ಮಾಸ್ಟರ್ ಆಗಿ ಕೂಡ ಹೊರಹೊಮ್ಮಿದರು. ಗ್ರ್ಯಾಂಡ್‌ಮಾಸ್ಟರ್ ಪಟ್ಟಕ್ಕೇರಿದ ಭಾರತದ ನಾಲ್ಕನೇ ಚೆಸ್ ಆಟಗಾರ್ತಿ ಎಂಬ ಹಿರಿಮೆಗೆ ಪಾತ್ರರಾದರು. ಭಾರತದ ಪರ 88 ಚೆಸ್ ಪಟುಗಳು ಗ್ರ್ಯಾಂಡ್‌ಮಾಸ್ಟರ್ ಪಟ್ಟಕ್ಕೇರಿದ್ದಾರೆ.

# ಬ್ಯಾಡ್ಮಿಂಟನ್ ಆಡುವಾಗ ಹೃದಯಾಘಾತದಿಂದ ಸಾವು



ಹೈದರಾಬಾದ್, ಜು.28- ಬ್ಯಾಡ್ಮಿಂಟನ್ ಆಡುತ್ತಲೇ ಆಟಗಾರನೊಬ್ಬ ಕುಸಿದು ಬಿದ್ದು, ಹೃದಯಾಘಾತದಿಂದ ಸಾವನ್ನಪ್ಪಿರುವ ಧಾರುಣ ಘಟನೆ ಹೈದರಾಬಾದ್‌ನಲ್ಲಿ ಸಂಭವಿಸಿದೆ.

ಹೈದರಾಬಾದ್‌ನ ನಾಗೋಲ್ ಕ್ರೀಡಾಂಗಣದಲ್ಲಿ ಬ್ಯಾಡ್ಮಿಂಟನ್ ಆಡುತ್ತಿದ್ದ ಗುಂಡ್ಲಾ ರಾಕೇಶ್ (25) ಎಂಬ ಯುವಕ ಹೃದಯಾಘಾತದಿಂದ ಸ್ಥಳದಲ್ಲೇ ಕುಸಿದು ಬಿದ್ದು ಪ್ರಜ್ಞಾಹೀನರಾದರು. ಕೂಡಲೇ ಅವರನ್ನು ಇತರ ಆಟಗಾರರು ಆಸ್ಪತ್ರೆಗೆ ಕರೆದೊಯ್ದರು. ಆದರೆ ಯುವಕ ರಾಕೇಶ್ ಆಗಾಗಲೇ ಮೃತಪಟ್ಟಿದ್ದಾನೆ ಎಂದು ವೈದ್ಯರು ತಿಳಿಸಿದ್ದಾರೆ.

ಮೃತ ರಾಕೇಶ್ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ತಿಳಿದು ಬಂದಿದೆ. ಮೃತ ವ್ಯಕ್ತಿ ಖಮ್ಮಂ ಜಿಲ್ಲೆಯ ತಲ್ಲಡದ ಮಾಜಿ ಉಪ ಸರಪಂಚ್ ಗುಂಡ್ಲಾ ವೆಂಕಟೇಶ್ವರಲು ಅವರ ಪುತ್ರ ಎಂದು ಹೇಳಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಘಟನೆಯ ಸಿಸಿಟಿವಿ ದೃಶ್ಯಾವಳಿಗಳು ವೈರಲ್ ಆಗಿದ್ದು, ಭಾನುವಾರ ರಾತ್ರಿ 8.00 ಗಂಟೆ ಸುಮಾರಿಗೆ ನಾಗೋಲ್ ಕ್ರೀಡಾಂಗಣದಲ್ಲಿ ನಡೆದ ಡಬಲ್ಸ್ ಬ್ಯಾಡ್ಮಿಂಟನ್ ಪಂದ್ಯದಲ್ಲಿ ರಾಕೇಶ್ ಭಾಗವಹಿಸಿದ್ದರು. ಈ ವೇಳೆ ರಾಕೇಶ್ ಶಟಲ್ ಕಾಕ್ ತೆಗೆದುಕೊಳ್ಳಲು ಬಾಗಿದ ಕೆಲವೇ ಕ್ಷಣಗಳಲ್ಲಿ ಇದ್ದಕ್ಕಿದ್ದಂತೆ ಕೋರ್ಟ್‌ನಲ್ಲಿ ಕುಸಿದು ಬಿದ್ದಿದ್ದು ಕ್ಯಾಮೆರಾದಲ್ಲಿ ದಾಖಲಾಗಿದೆ.

# ಜು.31 ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಜು.28- ಜು.31 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಭೂಗತ ಕೇಬಲ್ ಕಾಮಗಾರಿ ನಿಮಿತ್ತ ರಾಜೀವ್‌ನಗರ 2ನೇ ಹಂತ, ವಾಟರ್ ಟ್ಯಾಂಕ್ ಹತ್ತಿರ, 80 ಅಡಿ ರಸ್ತೆ, ಡಾಲರ್ಸ್ ಕಾಲೋನಿ, ಮುನೇಶ್ವರ ದೇವಸ್ಥಾನ, ಎ.ಜೆ ಫಂಕ್ಷನ್ ಹಾಲ್, ಎಂಪೈರ್ ಬಡಾವಣೆ, ಸತ್ಯನಾರಾಯಣ ದೇವಸ್ಥಾನದ ಸುತ್ತ-ಮುತ್ತ, ತಾತಪ್ಪ ಬಡಾವಣೆ, ಕ್ಯೂಬಾ ಮಸೀದಿ, ಅಬ್ದುಲ್ ರೆಹಮಾನ್ ರಸ್ತೆ, ಉದಯಗಿರಿ, ಕೆ.ಹೆಚ್.ಬಿ ಕಾಲೋನಿ, ಜಕ್ರಿಯಾ ಮಸೀದಿ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

# ಫಾರಂ ಹೌಸ್‌ನಲ್ಲಿ ಸಾಕುನಾಯಿ ಹೊತ್ತೊಯ್ದ ಚಿರತೆ!



ಮೈಸೂರು, ಜು.28(ಎಸ್‌ಪಿಎನ್)- ಖಾಸಗಿ ಫಾರಂ ಹೌಸ್‌ನ ಮನೆ ಮುಂಭಾಗ ಚಿರತೆಯೊಂದು ಕಾಣಿಸಿಕೊಂಡು, ಅಲ್ಲಿದ್ದ ನಾಯಿಯೊಂದನ್ನು ಕಚ್ಚಿ ಎಳೆದೊಯ್ದಿರುವ ಘಟನೆ (ಸೋಮವಾರ) ಇಂದು ರಾತ್ರಿ 8 ಗಂಟೆ ಸುಮಾರಿನಲ್ಲಿ ಮೈಸೂರು ಹೊರವಲಯದ ಗೆಜ್ಜಗಳ್ಳಿ ಸಮೀಪ ನಡೆದಿದೆ.

ಇಲ್ಲಿನ ರಾಜೇಂದ್ರ ಎಂಬುವರಿಗೆ ಸೇರಿದ ಫಾರಂಹೌಸ್‌ನಲ್ಲಿ ಸೋಮವಾರ ರಾತ್ರಿ 7.45ರಿಂದ 8.45ರ ನಡುವೆ ಚಿರತೆ ಕಾಣಿಸಿಕೊಂಡಿದೆ. ಈ ನಡುವೆ ಫಾರಂಹೌಸ್‌ನ 8 ಮಂದಿ ಕೂಲಿ ಕಾರ್ಮಿಕರಿಗೆ ಯಾವುದೇ ಹಾನಿಯಾಗಿಲ್ಲ ಎಂದು ಜಮೀನು ಮಾಲೀಕ ರಾಜೇಂದ್ರ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಈ ವಿಷಯ ತಿಳಿದು ಮೈಸೂರು ಗ್ರಾಮಾಂತರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಇದೇ ವೇಳೆ ಚೀತಾ ಟಾಸ್ಕ್ ಫೋರ್ಸ್ ತಂಡದ ಸದಸ್ಯರೂ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದ್ದಾರೆ.

# ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಹೊಣೆ

ಪರ್ಯಾವರಣ ಸಂರಕ್ಷಣಾ ಗತಿವಿಧಿ ವಿಭಾಗದ ರಾಕೇಶ್ ಜೈನ್ ಅಭಿಮತ



ಪರ್ಯಾವರಣ ಸಂರಕ್ಷಣಾ ಭಾರತೀಯ ದೃಷ್ಟಿಕೋನ-ಒಂದು ಸಂವಾದ ಕಾರ್ಯಕ್ರಮ ನಡೆಯಿತು.

ಮೈಸೂರು, ಜು.28(ಎಸ್‌ಪಿಎನ್)- ಪರಿಸರ ಜನರಿಗೆ ಪ್ರಕೃತಿ ಕೊಟ್ಟ ವರ. ಇದನ್ನು ಜೋಪಾನವಾಗಿ ಕಾಪಾಡಿಕೊಳ್ಳುವ ಹೊಣೆ ಪ್ರತಿಯೊಬ್ಬರದ್ದು ಎಂದು ಪರ್ಯಾವರಣ ಸಂರಕ್ಷಣಾ ಗತಿವಿಧಿ ವಿಭಾಗದ ಅಖಿಲ ಭಾರತೀಯ ಸಹ ಸಂಯೋಜಕ್ ರಾಕೇಶ್ ಜೈನ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಮಾಧವ ಕೃಪಾದಲ್ಲಿ ಪರ್ಯಾವರಣ ಸಂರಕ್ಷಣಾ ಭಾರತೀಯ ದೃಷ್ಟಿಕೋನ-ಒಂದು ಸಂವಾದ ಕಾರ್ಯಕ್ರಮದಲ್ಲಿ ಅವರು, ಮಾತನಾಡಿದರು.

2013ರಲ್ಲಿ ಜೂನ್‌ನಲ್ಲಿ ಉತ್ತರಾಖಂಡದಲ್ಲಿ ಭಾರಿ ಪ್ರವಾಹ ಸಂಭವಿಸಿತು. ಇದು ಕೇದಾರನಾಥ ದೇವಾಲಯ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ತೀವ್ರವಾಗಿ ಹಾನಿಗೊಳಿಸಿತು. ಈ ಪ್ರವಾಹದಲ್ಲಿ ನೂರಾರು ಜನರು ಪ್ರಾಣ ಕಳೆದುಕೊಂಡರು ಮತ್ತು ಅನೇಕರು ಗಾಯಗೊಂಡರು. ಇನ್ನು ಕೆಲವರು ನಾಪತ್ತೆಯಾಗಿದ್ದಾರೆ.

ಕೇದಾರನಾಥ್‌ನಲ್ಲಿ ಆದಿಶಂಕರಾಚಾರ್ಯರ ಸಮಾಧಿಗೂ ಹಾನಿಯಾಯಿತು. ಇದಕ್ಕೆಲ್ಲಾ ಕಾರಣವೇನು ಹುಡುಕಿದಾಗ, ನಾವು ಪರಿಸರದ ಮೇಲೆ ನಡೆಸುತ್ತಿರುವ ದೌರ್ಜನ್ಯ. ಇದಕ್ಕೆಲ್ಲಾ ಕೊನೆ ಹಾಡಬೇಕು. ಮರಗಳನ್ನು ಉಳಿಸಿ ಬೆಳೆಸಬೇಕು ಎಂದು ಕಿವಿಮಾತು ಹೇಳಿದ ಅವರು, ಇಂದು ಒಂದು ಮರ ಹತ್ತು ಜನರಿಗೆ ಆಕ್ಸಿಜನ್ ನೀಡುತ್ತದೆ. ಅಂತಹ ಮರವನ್ನೇ ಹನನ ಮಾಡಿದರೆ, ಬೇರೆ ಏನನ್ನು ಉಳಿಸಿಕೊಳ್ಳುತ್ತೇವೆ ಎಂಬುದರ ಬಗ್ಗೆ ಎಲ್ಲರೂ ಚಿಂತಿಸಬೇಕು ಎಂದು ತಿಳಿಸಿದರು.

ಕೇರಳದ ವೈನಾಡಿನಲ್ಲಿ ಉಂಟಾದ ಪ್ರವಾಹದಿಂದಾಗಿ ನದಿ ತಾನು ಹರಿಯುವ ಪಥವನ್ನು ಬದಲಿಸಿತು. ಇದರಿಂದ ನೂರಾರು ಜನ ಪ್ರಾಣತೆತ್ತರು. ಭಾರೀ ಪ್ರಮಾಣದ ಅರಣ್ಯ ನಾಶವಾಯಿತು. ಹೀಗೆ ಸಾಲುಸಾಲು ಅನಾಹುತಗಳು ಪ್ರಕೃತಿಯಲ್ಲಿ ಸಂಭವಿಸಿವೆ. ಹೀಗೆ ಒಂದಿಲ್ಲೊಂದು ಪ್ರಕರಣಗಳಲ್ಲಿ ಪ್ರಕೃತಿ ಮೇಲೆ ದೌರ್ಜನ್ಯವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮನುಷ್ಯ ಹುಟ್ಟಿನಿಂದ ಸಾವಿನವರೆಗೂ ಒಂದಿಲ್ಲೊಂದು ರೂಪದಲ್ಲಿ ಮರದ ಮೇಲೆ ಅವಲಂಬಿತವಾಗಿದ್ದಾನೆ. ಮಗು ಆಟದ ಸಾಮಗ್ರಿಗಳ ತಯಾರಿಕೆಗೂ ಮರಬೇಕು. ಸ್ನಾನದ ನೀರು ಬಿಸಿ ಮಾಡಲು ಮರಬೇಕು. ಇಟ್ಟಿಗೆ ಸುಡಲಿಕ್ಕೂ ಮರಬೇಕು. ಕೊನೆಗೆ ಮನುಷ್ಯನಿಗೆ ಮುಕ್ತಿ ನೀಡಲು ಮರಬೇಕಾಗಿದೆ. ಹಾಗಾಗಿ ಮರದ ಅವಶ್ಯಕತೆ ಮನುಷ್ಯನಿಗೆ ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಪರಿಸರವನ್ನು ರಕ್ಷಿಸಲು ಎಲ್ಲರೂ ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.


ಕಳೆದ 50 ವರ್ಷಗಳಿಂದೀಚೆಗೆ ಪಾಲಿಥಿನ್ ಬಳಕೆ ಹೆಚ್ಚಾಗುತ್ತಿದೆ. ತಿನ್ನುವ ಆಹಾರದಲ್ಲೂ ಪಾಲಿಥಿನ್ ಬಳಕೆ ಹೆಚ್ಚಾಗುತ್ತಿದೆ. ಇದು ಜನರ ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿದ್ದು, ಇದರಿಂದ ಕ್ಯಾನ್ಸರ್ ಸಹ ಬರಲಿದೆ ಎಂದು ಇತ್ತೀಚಿನ ಸಂಶೋಧನೆಗಳು ದೃಢಪಡಿಸುತ್ತಿವೆ. ಇಷ್ಟಾದರೂ ಜನರು ಪಾಲಿಥಿನ್ ಬಳಕೆಗೆ ಕಡಿವಾಣ ಹಾಕದಿರುವುದು ದೌರ್ಭಾಗ್ಯವೇ ಸರಿ ಎಂದು ಬೇಸರ ವ್ಯಕ್ತಪಡಿಸಿದರು.

1999ರಲ್ಲಿ ಬಿಸ್ಲೆರಿ ಕಾರ್ಖಾನೆ ಭಾರತದಲ್ಲಿ ಆರಂಭಿಸಲಾಯಿತು. ಪ್ಲಾಸ್ಟಿಕ್ ಬಾಟಲಿಯಲ್ಲಿ ಹಾಕಿ ಹಣಕ್ಕೆ ಮಾರಾಟ ಮಾಡಿ, ಬಂಡವಾಳಶಾಹಿಗಳು ದುಡ್ಡು ಮಾಡುತ್ತಿದ್ದಾರೆ. ಪ್ಲಾಸ್ಟಿಕ್ ಬಾಟಲಿಯಲ್ಲಿನ ನೀರನ್ನು ಹಣ ಕೊಟ್ಟು ಖರೀದಿಸುವ ಜನರ ಬುದ್ಧಿವಂತಿಕೆಗೆ ಏನೆಂಬುದು ನನಗೆ ತಿಳಿಯದು ಎಂದು ಬೇಸರ ಹೊರಹಾಕಿದರು.

ಈ ವೇಳೆ ಆರ್‌ಎಸ್‌ಎಸ್ ಕರ್ನಾಟಕ ಉತ್ತರ ಮತ್ತು ದಕ್ಷಿಣ ಪ್ರಾಂತ್ಯದ ಸಂಯೋಜಕ ಜೈರಾಮ್ ಉಪಸ್ಥಿತರಿದ್ದರು.

# ನಿಸರ್ಗ ತಾಣ ಕುಕ್ಕರಹಳ್ಳಿ ಕೆರೆಯ ಶೌಚಗೃಹದ ದುರ್ನಾತಕ್ಕೆ ಆಕ್ರೋಶ



ಸರಿಯಾದ ನಿರ್ವಹಣೆ ಇಲ್ಲದೆ ದುರ್ನಾತ ಬೀರುತ್ತಿರುವ ಶೌಚಾಲಯ

ಮೈಸೂರು, ಜು.28- ಕುಕ್ಕರಹಳ್ಳಿ ಕೆರೆ ಆವರಣದ ಶೌಚಗೃಹ, ಶೋಚನೀಯ ಸ್ಥಿತಿಯಲ್ಲಿದೆ. ಅದನ್ನು ಬಳಸುವುದಿರಲಿ ನೋಡಿದರೆ ಸಾಕು ಮೂರ್ಛೆ ಹೋಗುವಷ್ಟು ಕೆಟ್ಟದಾಗಿದೆ.

ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ವಾಯು ವಿಹಾರಕ್ಕೆಂದು ನಿತ್ಯ ಬೆಳಗ್ಗೆ ಮತ್ತು ಸಂಜೆ ನೂರಾರು ಮಂದಿ ಬರುತ್ತಾರೆ. ಮಹಿಳೆಯರು ಹಾಗೂ ಹಿರಿಯರು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಇಲ್ಲಿನ ಸುಂದರ ಪ್ರಕೃತಿಯನ್ನು ಕಣ್ತುಂಬಿಕೊಳ್ಳಲೆಂದು ಪುಟ್ಟ ಮಕ್ಕಳನ್ನೂ ಜೊತೆಯಲ್ಲಿ ಕರೆತರುತ್ತಾರೆ. ಆದರೆ ಸಾರ್ವಜನಿಕರಿಗೆ ಅತ್ಯಗತ್ಯವಾದ ಶೌಚಗೃಹ ಇದ್ದೂ ಇಲ್ಲವಾಗಿದೆ.

ವಾಹನ ನಿಲುಗಡೆ ಸ್ಥಳದಲ್ಲಿರುವ ಈ ಶೌಚಗೃಹದ ಗೋಡೆಯ ಮೇಲೆ ಯಾವುದೋ ಬಣ್ಣದಲ್ಲಿ ಪುರುಷರು ಹಾಗೂ ಮಹಿಳೆಯರು ಎಂದು ಇಂಗ್ಲಿಷ್‌ನಲ್ಲಿ ಬರೆಯಲಾಗಿದೆ. ಅದೂ ಮಾಸಿರುವುದರಿಂದ ತಕ್ಷಣಕ್ಕೆ ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಎಲ್ಲರೂ ಸುಲಭವಾಗಿ ಗುರುತಿಸುವಂತೆ ಪುರುಷ ಹಾಗೂ ಮಹಿಳೆಯ ಪ್ರತಿರೂಪವನ್ನು ಹಾಕಿಲ್ಲ.

ಪುರುಷರ ಶೌಚಗೃಹ ಪ್ರವೇಶಿಸಿದರೆ ದುಸ್ಥಿತಿಯ ಅನಾವರಣವಾಗುತ್ತದೆ. ಕಮೋಡ್‌ಗಳು ಅತ್ಯಂತ ಅಸಹ್ಯಕರ ಸ್ಥಿತಿಯಲ್ಲಿವೆ. ಫ್ಲಶ್ ಟ್ಯಾಂಕ್‌ಗಳು ಮುರಿದು, ಅದರ ಮುಚ್ಚಳ ನೆಲದಲ್ಲಿ ಬಿದ್ದಿದೆ. ನಲ್ಲಿಗಳೂ ಹಾಳಾಗಿವೆ. ಗೋಡೆಗಳು ಸೇರಿದಂತೆ ಪೂರ್ಣ ಕಟ್ಟಡವೇ ಶಿಥಿಲಾವಸ್ಥೆ ತಲುಪುತ್ತಿದೆ. ನಿರ್ವಹಣೆ ಇಲ್ಲದೆ ಇಡೀ ಶೌಚಗೃಹ ಗಬ್ಬೆದ್ದು ಹೋಗಿದೆ. ಇನ್ನು ಮಹಿಳೆಯರ ಶೌಚಗೃಹವೂ ಸಂಪೂರ್ಣ ಹಾಳಾಗಿದೆ ಎಂದು ವೃದ್ಧೆಯೊಬ್ಬರು ಬೇಸರ ವ್ಯಕ್ತಪಡಿಸಿದರು.

ಕೆರೆ ದಡದಲ್ಲಿ ಗಿಡ-ಮರಗಳ ನಡುವೆ ವಿಹರಿಸಿದರೆ, ಶುದ್ಧ ಗಾಳಿ ಸೇವನೆಯೊಂದಿಗೆ ಆರೋಗ್ಯವೂ ವೃದ್ಧಿಸುತ್ತದೆ ಎಂಬ ಕಾರಣಕ್ಕೆ ದೂರದ ಬಡಾವಣೆಗಳ ನಿವಾಸಿಗಳೂ ನಿತ್ಯ ಇಲ್ಲಿಗೆ ಬರುತ್ತಾರೆ. ಆದರೆ ಪ್ರಕೃತಿ ಕರೆಗೆ ಹೋಗಬೇಕೆನಿಸಿದರೆ ದೊಡ್ಡ ಸಂಕಷ್ಟವೇ ಎದುರಾಗುತ್ತದೆ. ಅದರಲ್ಲೂ ಅನಾರೋಗ್ಯ ಹಾಗೂ ವಯೋಸಹಜವಾಗಿ ಆಗಾಗ್ಗೆ ಮೂತ್ರ ವಿಸರ್ಜನೆ ಮಾಡಬೇಕಾದವರ ಪರಿಪಾಟಲು ಅಷ್ಟಿಷ್ಟಲ್ಲ. ಶೌಚಗೃಹ ಬಳಸಲು ಸಾಧ್ಯವಾಗದ ಕಾರಣ ಅನಿವಾರ್ಯವಾಗಿ ಬಯಲು ವಿಸರ್ಜನೆಗೆ ಮುಂದಾಗುತ್ತಾರೆ. ಇದರಿಂದ ಕೆರೆಯ ಪರಿಸರವೂ ಹಾಳಾಗುತ್ತದೆ. ಸಾರ್ವಜನಿಕರು ತೊಂದರೆಯನ್ನು ಮನಗಂಡು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳು, ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಸೂಕ್ತ ಶೌಚಗೃಹ ವ್ಯವಸ್ಥೆ ಕಲ್ಪಿಸಿಕೊಡಬೇಕು ಎಂದು ಮೈಸೂರು ಗ್ರಾಹಕರ ಪರಿಷತ್(ಮೈಗ್ರಾಪ) ಪರವಾಗಿ ಸಂಚಾಲಕ ಡಿ.ವಿ. ದಯಾನಂದ್ ಸಾಗರ್ ಮನವಿ ಮಾಡಿದ್ದಾರೆ.

### ಕುಸಿಯುವ ಹಂತದಲ್ಲಿ ಚಾವಣಿ



ಕೆರೆ ಏರಿ ಬಳಿ ದೋಣಿಗಳ ನಿಲುಗಡೆ ಸ್ಥಳದಲ್ಲಿ ನಿರ್ಮಿಸಿರುವ ಚಾವಣಿ ಕುಸಿಯುವ ಹಂತ ತಲುಪಿದೆ. ಚಾವಣಿಯನ್ನು ಸರಿಯಾಗಿ ಭದ್ರಪಡಿಸದಿರುವುದರಿಂದ ಗಾಳಿಯಲ್ಲಿ ಮುರಿಯುವ ರೀತಿ ಅಲುಗಾಡುತ್ತದೆ. ಗಾಳಿ ಹೊಡೆತಕ್ಕೆ ಒಂದೆರಡು ಕಡೆ ಶೀಟ್‌ಗಳು ಮುರಿದಿವೆ. ಮುಖ್ಯವಾಗಿ ಇದಕ್ಕೆ ಆಸರೆಯಾಗಿರುವ ಕಬ್ಬಿಣದ ಕಂಬಗಳೂ ತುಕ್ಕು ಹಿಡಿದಿವೆ. ಕೆಲ ಕಂಬಗಳು ತಳದಲ್ಲೇ ಬಿರುಕಾಗಿದ್ದು, ಗಾಳಿ ಜೋರಾದರೆ ತುಂಡಾಗುವ ಸ್ಥಿತಿಯಲ್ಲಿವೆ ಎಂದು ದಯಾನಂದ್ ಸಾಗರ್ ತಿಳಿಸಿದ್ದಾರೆ.

# ವಿರೋಧಿಸುತ್ತಿದ್ದವರಿಂದಲೇ ಇತರೆ ರಾಜ್ಯಗಳಲ್ಲಿ ಗ್ಯಾರಂಟಿ ಜಾರಿ

## ಮಾಜಿ ಸಚಿವ, ಪಂಚ ಗ್ಯಾರಂಟಿ ಯೋಜನೆ ರಾಜ್ಯಾಧ್ಯಕ್ಷ ಹೆಚ್.ಎಂ.ರೇವಣ್ಣ



ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಹೆಚ್.ಡಿ.ಕೋಟೆ, ಜು.28– ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುತ್ತೇವೆ ಎಂದಾಗ ರಾಷ್ಟ್ರ ನಾಯಕರು ಸೇರಿದಂತೆ ವಿರೋಧ ಪಕ್ಷದವರೂ ನಿಂದಿಸಿದ್ದರು. ಆದರೆ ಇದೀಗ ನಮ್ಮ ಮಾದರಿ ಯೋಜನೆಯನ್ನು ಇತರೆ ರಾಜ್ಯಗಳಲ್ಲೂ ವಿರೋಧ ಪಕ್ಷದವರೇ ಜಾರಿಗೆ ತರುತ್ತಿದ್ದಾರೆ ಎಂದು ಮಾಜಿ ಸಚಿವ ಹಾಗೂ ಪಂಚ ಗ್ಯಾರಂಟಿ ಯೋಜನೆ ರಾಜ್ಯಾಧ್ಯಕ್ಷ ಹೆಚ್.ಎಂ. ರೇವಣ್ಣ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದಿಂದ ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, 20 ಅಂಶಗಳ ಕಾರ್ಯಕ್ರಮವನ್ನು ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಜಾರಿಗೆ ತಂದಿದ್ದರು. ಅವರನ್ನೇ ಮಾದರಿಯಾಗಿಸಿಕೊಂಡು ಪಂಚ ಗ್ಯಾರಂಟಿಗಳನ್ನು ಅನುಷ್ಠಾನ ಮಾಡಲಾಗಿದೆ ಎಂದರು.

ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಕರ್ನಾಟಕ ಆರ್ಥಿಕ ಸಧೃಡತೆಯಲ್ಲಿ ಮಹಾರಾಷ್ಟ್ರ ನಂತರ 2ನೇ ಸ್ಥಾನದಲ್ಲಿತ್ತು ಈ ಹಿಂದೆ ಸಿಎಂ ಸಿದ್ದರಾಮಯ್ಯ ನೀಡಿದ್ದ 165 ಭರವಸೆಗಳ ಪೈಕಿ 160 ಅನ್ನು ಈಡೇರಿಸಿದ್ದಾರೆ. ಅಲ್ಲದೇ ರಾಜ್ಯದಲ್ಲಿ ಅತೀ ಹೆಚ್ಚು ಬಜೆಟ್ ಮಂಡಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದ ಅವರು, ಪಂಚ ಗ್ಯಾರಂಟಿ ಯೋಜನೆ ಜಾರಿ ನಂತರ ದೇಶದಲ್ಲೇ ಕರ್ನಾಟಕ ತಲಾ ಆದಾಯದಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದೆ ಎಂದರು.

ಗ್ಯಾರಂಟಿ ಯೋಜನೆ ತಾಲೂಕು ಅಧ್ಯಕ್ಷ ಚಾಮರಾಜು ಮಾತನಾಡಿ, ತಾಲೂಕಿನಲ್ಲಿ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳನ್ನು ಶೇ.99ರಷ್ಟು ಅನುಷ್ಠಾನಗೊಳಿಸಲಾಗಿದೆ. ತಾಲೂಕಿನ 26 ಗ್ರಾಪಂಗಳಲ್ಲಿ ಯೋಜನೆ ರೂಪಿಸಲು 14 ಮಂದಿ ಸದಸ್ಯರನ್ನು ಆಯ್ಕೆ ಮಾಡಲಾಗಿದೆ. ಅಲ್ಲದೇ ಶಾಸಕ ಅನಿಲ್ ಅವರು ಸಹ ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ಸಹಕರಿಸುತ್ತಿದ್ದಾರೆ. ಇನ್ನು, ತಾಲೂಕಿನ 418 ಕಡು ಬಡವರಿಗೆ ಜಿಎಸ್‌ಟಿ ನೆಪವೊಡ್ಡಿ ಗೃಹಲಕ್ಷ್ಮಿ ಹಣ ಕಡಿತಗೊಳಿಸಲಾಗುತ್ತಿದೆ. ಹೀಗಾಗಿ ಅದನ್ನು ಸರಿಪಡಿಸಿ ಅವರನ್ನು ಸಹ ಫಲಾನುಭವಿಗಳನ್ನಾಗಿ ಮಾಡಬೇಕು ಎಂದು ರಾಜ್ಯಾಧ್ಯಕ್ಷರನ್ನು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆ ಜಿಲ್ಲಾಧ್ಯಕ್ಷ ಅರಣ್ ಕುಮಾರ್, ಜಿಲ್ಲಾ ಉಪಾಧ್ಯಕ್ಷ ಶಿವಕುಮಾರ್, ಚಂದ್ರಶೇಖರ್, ಸದಸ್ಯರಾದ ಲಲಿತಾ, ಯೋಗೇಶ್, ಅಬ್ದುಲ್ ಖಾದರ್, ಸರಗೂರು ಅಧ್ಯಕ್ಷ ಚಲುವರಾಜು, ಜಿಪಂನ ಪ್ರಭುಸ್ವಾಮಿ, ಅಧಿಕಾರಿಗಳಾದ ಮಂಟೇಸ್ವಾಮಿ, ಸುನೀಲ್ ಕುಮಾರ್, ಬಸವರಾಜು, ದೀಪ, ಡಿ.ಎಂ.ರಾಣಿ, ಅರುಣ್, ವಿರೇಶ್, ಇಓ ಧರ್ಮೇಶ್, ಗ್ಯಾರಂಟಿ ಯೋಜನೆ ಸದಸ್ಯರಾದ ಶಂಕರೇಗೌಡ, ಮಲ್ಲೇಗೌಡ, ಸೌಮ್ಯ, ಚಲುವರಾಜು, ಶಿವರಾಜು, ರವಿನಾಯಕ, ಅಬ್ದುಲ್ ಅಜೀಜ್, ಕಾಳಕಲ್ಕರ್, ರವಿನಾಯಕ, ಸದಾಶಿವಮೂರ್ತಿ ಇನ್ನಿತರರಿದ್ದರು.

> ತಾಲೂಕಿನ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರವನ್ನು ಅಂಗಡಿ ಮಾಲೀಕರು ಎರಡ್ಮೂರು ದಿನಗಳವರೆಗೆ ಮಾತ್ರ ವಿತರಿಸುತ್ತಿದ್ದು, ಇದರಿಂದ ಸರತಿ ಸಾಲಿನಲ್ಲಿ ನಿಲ್ಲುವಂತ ಪರಿಸ್ಥಿತಿ ಎದುರಾಗಿದೆ. ಇದರಿಂದ ಪಡಿತರದಾರರಿಗೆ ಅನಾನುಕೂಲವಾಗಿದೆ ಹಾಗಾಗಿ ತಿಂಗಳ ಪೂರ್ತಿ ಪಡಿತರ ವಿತರಣೆಗೆ ಕ್ರಮ ವಹಿಸಬೇಕು. –ಚಲುವ ರಾಜು, ಗ್ಯಾರಂಟಿ ಯೋಜನೆ ಸದಸ್ಯ.

# ಆಕಸ್ಮಿಕ ಬೆಂಕಿ: ಬಟ್ಟೆ ಅಂಗಡಿ ಸಂಪೂರ್ಣ ಭಸ್ಮ

## ಬಟ್ಟೆ, ಸೀರೆ, ಸಿದ್ಧ ಉಡುಪು ಸೇರಿದಂತೆ ಇನ್ನಿತರ ವಸ್ತುಗಳು ಬೆಂಕಿಗಾಹುತಿ: ಕೋಟ್ಯಾಂತರ ರೂ. ನಷ್ಟ,



ಬಟ್ಟೆ ಅಂಗಡಿ ಸಂಪೂರ್ಣ ಭಸ್ಮವಾಗಿರುವುದು.

ತಿ.ನರಸೀಪುರ, ಜು.28– ಆಕಸ್ಮಿಕ ಬೆಂಕಿ ಬಿದ್ದ ಪರಿಣಾಮ ಮೂರಂತಸ್ತಿನ ಬಟ್ಟೆ ಅಂಗಡಿ ಸಂಪೂರ್ಣ ಭಸ್ಮವಾಗಿರುವ ಘಟನೆ ಪಟ್ಟಣದಲ್ಲಿ ಭಾನುವಾರ ಮಧ್ಯರಾತ್ರಿ ನಡೆದಿದೆ.

ಪಟ್ಟಣದ ವಿಜಯ ಭಗವಾನ್ ಚಿತ್ರ ಮಂದಿರ ವೃತ್ತದಲ್ಲಿರುವ ಸೀನು ಫ್ಯಾಷನ್ ಎಂಬ ಬಟ್ಟೆ ಅಂಗಡಿ ಭಸ್ಮವಾಗಿದ್ದು, ಸುಮಾರು 150 ಕೋಟಿ ರೂ. ಹೆಚ್ಚು ಮೌಲ್ಯದ ಜವಳಿ ವಸ್ತಗಳು ಬೆಂಕಿ ಕೆನ್ನಾಲಿಗೆಗೆ ಸಿಲುಕಿ ಸುಟ್ಟುಹೋಗಿದೆ ಭಾನುವಾರ ರಾತ್ರಿ 12 ಗಂಟೆ ವೇಳೆಗೆ ಕೆಳ ಅಂತಸ್ತಿನ ಕಟ್ಟಡಕ್ಕೆ ಬೆಂಕಿ ಬಿದ್ದಿದ್ದು, ನಂತರ ಬೆಂಕಿಯ ಜ್ವಾಲೆ ಇಡೀ ಕಟ್ಟಡವನ್ನು ವ್ಯಾಪಿಸಿಕೊಂಡು ದಟ್ಟ ಹೊಗೆಯೊಂದಿಗೆ ಹೊತ್ತಿ ಉರಿಯಲಾರಂಭಿಸಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಠಾಣೆ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯದಲ್ಲಿ ನಿರತರಾದರಾದರೂ, ಅಷ್ಟರಲ್ಲಾಗಲೇ ಬೆಂಕಿ ಕೆನ್ನಾಲಿಗೆ ಇಡೀ ಕಟ್ಟಡಕ್ಕೆ ವ್ಯಾಪಿಸಿದ್ದರಿಂದ ಅಂಗಡಿ ಮಳಿಗೆಯಲ್ಲಿದ್ದ ಬಟ್ಟೆ, ಸೀರೆ, ಸಿದ್ದ ಉಡುಪುಗಳು ಸೇರಿದಂತೆ ಕೋಟ್ಯಾಂತರ ರೂ. ಮೌಲ್ಯದ ವಸ್ತಗಳು ಹಾಗೂ ಪೀಠೋಪಕರಣಗಳು ಬೆಂಕಿಗಾಹುತಿಯಾಗಿವೆ.

ಮುಂದಿನ ತಿಂಗಳು ವರ ಮಹಾಲಕ್ಷ್ಮಿ ಹಾಗೂ ಗೌರಿ–ಗಣೇಶ ಹಬ್ಬ ಹಿನ್ನೆಲೆಯಲ್ಲಿ ಅಂಗಡಿ ಮಾಲೀಕರು ಹೆಚ್ಚಿನ ಪ್ರಮಾಣದಲ್ಲಿ ಬಟ್ಟೆಗಳನ್ನು ಮಳಿಗೆಯಲ್ಲಿ ಶೇಖರಿಸಿದ್ದರು ಎನ್ನಲಾಗಿದೆ. ಘಟನೆಯಿಂದ ಕೋಟ್ಯಾಂತರ ರೂ. ನಷ್ಟ ಸಂಭವಿಸಿದೆ. ಅಗ್ನಿ ಶಾಮಕದಳದ ಸಿಬ್ಬಂದಿ ರಾತ್ರಿಯಿಂದ ಬೆಳಗ್ಗೆ 7 ಗಂಟೆವರೆಗೂ ಬೆಂಕಿ ನಂದಿಸಲು ಕಾರ್ಯಾಚರಣೆ ನಡೆಸಿ ಆಗಬಹುದಾದ ಮತ್ತಷ್ಟು ಅನಾಹುತ ತಪ್ಪಿಸಿದರು. ಹೊತ್ತಿ ಉರಿಯುತ್ತಿದ್ದ ಬೆಂಕಿ ಹಾಗೂ ದಟ್ಟ ಹೊಗೆ ನಡುವೆಯೇ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ಕೈಗೊಂಡಿದ್ದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು.

# ಪೊಲೀಸ್ ಹೆಡ್ ಕಾನ್‌ಸ್ಟೇಬಲ್ ಆತ್ಮಹತ್ಯೆ



ನಂಜನಗೂಡು, ಜು.28– ಜಿಲ್ಲಾ ಶಸಸ್ತ್ರ ದಳದ ಹೆಡ್ ಕಾನ್ಸ್‌ಟೇಬಲ್ ನೇಣು ಬಿಗಿದು ಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಭಾನು ವಾರ ರಾತ್ರಿ ನಡೆದಿದೆ.

ಮೂಲತಃ ಗುಂಡ್ಲುಪೇಟೆ ತಾಲೂಕಿನ ಚಿಕ್ಕಾಟಿ ಗ್ರಾಮದ ನಿವಾಸಿ, ನಂಜನಗೂಡಿನ ಎನ್‌ಜಿಓ ಕಾಲೋನಿಯಲ್ಲಿ ವಾಸವಿದ್ದ ಬೀರೇಶ್(37) ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡವರು. ಈತ ಪ್ರಸ್ತುತ ಹುಲ್ಲಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ 112 ತುರ್ತು ವಾಹನದ ಚಾಲಕರಾಗಿ ಸೇವೆ ಸಲ್ಲಿಸುತ್ತಿದ್ದರು. ಮೃತರಿಗೆ ಪತ್ನಿ, 2 ವರ್ಷದ ಮಗಳು ಇದ್ದಾರೆ.

ಬೆಂಗಳೂರಿನಲ್ಲಿರುವ ತನ್ನ ತಂದೆಯವರು ಅನಾರೋಗ್ಯಕ್ಕೀಡಾಗಿದ್ದರಿಂದ ಅವರ ಆರೋಗ್ಯ ವಿಚಾರಿಸಲು ನಾನು ತೆರಳಿದ್ದೆ. ಮನೆಯಲ್ಲಿ ಯಾರು ಇಲ್ಲದ ವೇಳೆ ನನ್ನ ಪತಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಮೊಬೈಲ್‌ಗೆ ನಾನು ಫೋನ್ ಮಾಡಿದಾಗ ಅವರು ಕರೆ ಸ್ವೀಕರಿಸದ ಕಾರಣ ಅವರ ಸ್ನೇಹಿತ ನಾಗೇಂದ್ರ ಎಂಬುವರಿಗೆ ಮಾಹಿತಿ ನೀಡಿ, ಮನೆಗೆ ತೆರಳಿ ವಿಚಾರಿಸುವಂತೆ ತಿಳಿಸಿದ್ದೆ. ಸೋಮವಾರ ಬೆಳಗ್ಗೆ ಬಂದು ನೋಡಿದಾಗ ಮನೆಯಲ್ಲಿಯೇ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವುದು ಬೆಳಕಿಗೆ ಬಂದಿದೆ. ನಮ್ಮ ಕುಟುಂಬದಲ್ಲಿ ಯಾವುದೇ ಸಮಸ್ಯೆಗಳಿರಲಿಲ್ಲ. ಹೀಗಾಗಿ ಪತಿ ಆತ್ಮ ಹತ್ಯೆ ಬಗ್ಗೆ ತನಿಖೆ ನಡೆಸಿ ನೈಜ ಕಾರಣ ತಿಳಿಸಿಕೊಡುವಂತೆ ಬೀರೇಶ್ ಪತ್ನಿ ನಿರ್ಮಲ ನಂಜನಗೂಡು ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂಜನಗೂಡು ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಶವವನ್ನು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಿದರು. ಈ ಸಂಬಂಧ ನಂಜನಗೂಡು ನಗರ ಠಾಣೆಯಲ್ಲಿ ದೂರು ದಾಖಲಾಗಿದೆ.

# 1.10 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಚಾಲನೆ ನೀಡಿದರು.

ನಂಜನಗೂಡು, ಜು.28– ನಗರದ ವಿವಿಧ ಬಡಾವಣೆಗಳಿಗೆ ಮೂಲ ಸೌಕರ್ಯ ಒದಗಿಸಿ ಸ್ವಚ್ಛ ನಗರವನ್ನಾಗಿ ರೂಪಿಸುವ ಸಲುವಾಗಿ 1 ಕೋಟಿ 10 ಲಕ್ಷ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಶಂಕರಪುರ, ಅಶೋಕಪುರಂ, ಹುಲ್ಲಹಳ್ಳಿ ರಸ್ತೆಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ನಂಜನಗೂಡು ನಗರ ಮೈಸೂರಿಗೆ ಅತೀ ಸಮೀಪದಲ್ಲಿದ್ದು ನಗರದ ಎಲ್ಲಾ ಬಡಾವಣೆಗಳಿಗೂ ಮೂಲ ಸೌಕರ್ಯ ಒದಗಿಸಿ ಸ್ವಚ್ಛ ಮತ್ತು ಮಾದರಿ ನಗರವನ್ನಾಗಿ ರೂಪಿಸುವ ಸಲುವಾಗಿ ಕ್ರಮ ಕೈಗೊಳ್ಳಲಾಗುವುದು. ಈ ನಿಟ್ಟಿನಲ್ಲಿ ಪ್ರತಿ ಸೋಮವಾರ ನಗರದ ವಿವಿಧ ಬಡಾವಣೆಗಳಿಗೆ ನಗರಸಭಾ ಅಧಿಕಾರಿಗಳೊಂದಿಗೆ ತೆರಳಿ ಸ್ಥಳ ಪರಿಶೀಲನೆ ನಡೆಸಿ ಸ್ಥಳದಲ್ಲೇ ಸಮಸ್ಯೆಗಳನ್ನು ಪರಿಹರಿಸುವ ಕೆಲಸ ಮಾಡುತ್ತಿದ್ದೇನೆ ಎಂದರು.

ನಗರದ ಶಂಕರಪುರ ಬಡಾವಣೆಯಲ್ಲಿ 35 ಲಕ್ಷ ವೆಚ್ಚದಲ್ಲಿ ಉದ್ಯಾನವನ ಅಭಿವೃದ್ಧಿ, ಅಶೋಕಪುರಂ ಬಡಾವಣೆಯಲ್ಲಿ 25 ಲಕ್ಷ ವೆಚ್ಚದಲ್ಲಿ ಸಿದ್ದಪ್ಪಾಜಿ ದೇವಾಲಯ ಸಮುದಾಯ ಭವನ, 50 ಲಕ್ಷ ವೆಚ್ಚದಲ್ಲಿ ಹುಲ್ಲಹಳ್ಳಿ ರಸ್ತೆಯ ಫುಟ್‌ಪಾತ್ ಮೆಟ್ಟಿಂಗ್ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಶೀಘ್ರ ಗುಣಮಟ್ಟದ ಕಾಮಗಾರಿ ನಡೆಸಿ ಸಾರ್ವಜನಿಕರಿಗೆ ಸೌಕರ್ಯ ಒದಗಿಸಲಾಗುವುದು ಎಂದರು.

**ನೀರಿನ ಶುಲ್ಕದ ಮೇಲಿನ ಬಡ್ಡಿ ಮನ್ನಾ ಮಾಡಲು ಕ್ರಮ:** ನಗರದ ಶ್ರೀರಾಂಪುರ ಬಡಾವಣೆಯಲ್ಲಿ ಸ್ಥಳ ಪರಿಶೀಲಿಸಿದ ಶಾಸಕ ದರ್ಶನ್, ಖುದ್ದಾಗಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ, ಪರಿಹಾರ ಒದಗಿಸುವ ಭರವಸೆ ನೀಡಿದರು.

ಶ್ರೀರಾಂಪುರ ಬಡಾವಣೆ ನಿವಾಸಿಗಳು ಮಾತನಾಡಿ, ದೋಷಪೂರಿತ ಮೀಟರ್ ಅಳವಡಿಕೆಯಿಂದಾಗಿ ಪ್ರತಿ ಮನೆಗೆ ಅತ್ಯಧಿಕವಾಗಿ ನೀರಿನ ಶುಲ್ಕ ಬರುತ್ತಿದೆ. ಈಗಾಗಲೇ ಪ್ರತಿ ಮನೆಗೆ 20 ರಿಂದ 30 ಸಾವಿರದವರೆಗೂ ಬಿಲ್ ನೀಡಲಾಗಿದೆ. ಆದ್ದರಿಂದ ದೋಷಪೂರಿತ ಮೀಟರ್ ಬದಲಿಸಿ, ನೀರಿನ ಶುಲ್ಕ ಮನ್ನಾ ಮಾಡಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು ನಗರಸಭೆಯಿಂದ ಅಳವಡಿಸಿರುವ ಮೀಟರ್‌ಗಳನ್ನು ಪರಿಶೀಲಿಸಿ ದೋಷಪೂರಿತವಾಗಿದ್ದಲ್ಲಿ ನೀರಿನ ಶುಲ್ಕ ಕಡಿಮೆ ಮಾಡಲು ಕ್ರಮ ವಹಿಸಲಾಗುವುದು. ಜೊತೆಗೆ ಈಗಾಗಲೇ ಬಳಕೆಯಾಗಿರುವ ನೀರಿಗೆ ಶುಲ್ಕವನ್ನು ಬರಿಸಬೇಕಾಗುತ್ತದೆ. ನೀರಿನ ಶುಲ್ಕದ ಮೇಲಿನ ಬಡ್ಡಿಮನ್ನಾ ಮಾಡಲು ನಗರಸಭಾ ಆಡಳಿತ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಲಿದೆ. ಉಳಿದಂತೆ ವಸತಿರಹಿತರಿಗೆ ನಿವೇಶನ ನೀಡುವಂತೆ ಮನವಿ ಮಾಡಿದ್ದೀರಿ. ಶೀಘ್ರ ನಿವೇಶನಗಳನ್ನು ನೀಡಲು ಕ್ರಮ ವಹಿಸಲಾಗುವುದು. ಜೊತೆಗೆ ಬಡಾವಣೆಗೆ ಅವಶ್ಯವಿರುವ ಎಲ್ಲಾ ಕಾಮಗಾರಿಗಳನ್ನು ನಡೆಸಲಾಗುವುದು ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ಸದಸ್ಯರಾದ ಪ್ರದೀಪ್, ಮಹದೇವಮ್ಮ, ಮಂಗಳಮ್ಮ, ಗಾಯತ್ರಿ, ರವಿ, ಮುಖಂಡರಾದ ಮುರುಗೇಶ್, ಕುಮಾರ್, ದೇವರಾಜು, ಕಮಲೇಶ್, ರಾಜೇಶ್, ಪೌರಾಯುಕ್ತ ವಿಜಯ್, ಎಇಇ ಸಮಂತ್, ಅಧಿಕಾರಿಗಳಾದ ಮೈತ್ರಾದೇವಿ, ರೇಖಾ, ನಂದಿನಿ, ಪ್ರೀತಮ್, ರಾಘವೇಂದ್ರ ಸೇರಿದಂತೆ ಹಲವು ಕಾಂಗ್ರೆಸ್ ಕಾರ್ಯಕರ್ತರು ಇದ್ದರು.

# ಕೆ.ಆರ್.ನಗರ: ಸೇವಾ ರಸ್ತೆ ಒತ್ತುವರಿ ತೆರವು

ಕೆ.ಆರ್.ನಗರ, ಜು.28– ಸುಮಾರು 40 ವರ್ಷಗಳಿಂದ ಖಾಸಗಿ ವ್ಯಕ್ತಿಗಳು ಸರ್ಕಾರಿ ನಾಲಾ ಪರಿವೀಕ್ಷಣಾ ಪಥದ ಸೇವಾ ರಸ್ತೆ ಒತ್ತುವರಿ ಮಾಡಿಕೊಂಡಿದ್ದರಿಂದ ರೈತರಿಗೆ ತೊಂದರೆಯಾಗುತ್ತಿದೆ ಎಂದು ದೂರು ನೀಡಿದ ಹಿನ್ನಲೆಯಲ್ಲಿ ಹಾರಂಗಿ ಇಲಾಖೆ ಅಧಿಕಾರಿಗಳು ಒತ್ತುವರಿ ತೆರವುಗೊಳಿಸಿ ರೈತರಿಗೆ ಅನುಕೂಲ ಮಾಡಿ ಕೊಟ್ಟಿದ್ದಾರೆ.

ತಾಲೂಕಿನ ಹಂಪಾಪುರ ಗ್ರಾಮದ ಸರ್ವೆ ನಂ.589 ಮತ್ತು 590ರ ಹಿಡುವಳಿದಾರರು ಸರ್ಕಾರಿ ನಾಲೆ ಪರಿವೀಕ್ಷಣಾ ಪಥದ ರಸ್ತೆ ಒತ್ತುವರಿ ಮಾಡಿದ್ದರಿಂದ 35 ರಿಂದ 40 ಎಕರೆ ಜಮೀನಿನ ರೈತರು ತಾವು ಬೆಳೆದ ಬೆಳೆಗಳನ್ನು ಸಾಗಾಣೆ ಮಾಡಲು ಅಡಚಣೆಯಾಗುತ್ತಿತ್ತು. ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ನೊಂದ ರೈತರಿಗೆ ನ್ಯಾಯ ದೊರಕಿಸಿಕೊಟ್ಟಿದ್ದಾರೆ.

ರೈತರ ಮನವಿ ಮೇರೆಗೆ ಹಾರಂಗಿ ಇಲಾಖೆ ಅಧಿಕಾರಿಗಳು ಒತ್ತುವರಿ ಮಾಡಿಕೊಂಡಿರುವ ರೈತರಿಗೆ ಕೂಡಲೇ ರಸ್ತೆ ತೆರವುಗೊಳಿಸುವಂತೆ ನೋಟೀಸ್ ನೀಡಿದ್ದರು. ಇದನ್ನು ತಿರಸ್ಕರಿಸಿದ್ದರಿಂದ ತಾಲೂಕು ಸರ್ವೆ ಮತ್ತು ಪೊಲೀಸ್ ಇಲಾಖೆ ಸಹಯೋಗದಿಂದ ಒತ್ತುವರಿ ತೆರವುಗೊಳಿಸಿ ಶಾಶ್ವತ ಪರಿಹಾರ ಕಲ್ಪಿಸಿದ್ದಾರೆ.

ಒತ್ತುವರಿ ತೆರವಿನಿಂದ ಹಂಪಾಪುರ ನಾಲಾ ವ್ಯಾಪ್ತಿಯ ಗ್ರಾಮಗಳಾದ ಬಾಲೂರು, ಗಂಧನಹಳ್ಳಿ, ಹಂಪಾಪುರ ಗ್ರಾಮದ ರೈತರಿಗೆ ಅನುಕೂಲವಾಗಿದ್ದು, ಮನವಿಗೆ ಸ್ಪಂದಿಸಿದ ಅಧಿಕಾರಿಗಳನ್ನು ಈ ಭಾಗದ ರೈತರು ಅಭಿನಂದನೆ ಸಲ್ಲಿಸಿದ್ದಾರೆ.

ಈ ವೇಳೆ ನೀರಾವರಿ ಇಲಾಖೆ ಎಇಇ ಅಯಾಜ್ ಪಾಷಾ, ಇಂಜಿನಿಯರ್ ಕಿರಣ್, ಸರ್ವೇಯರ್‌ಗಳಾದ ಭಾಸ್ಕರ್, ಕುಮಾರಸ್ವಾಮಿ, ರೈತರಾದ ವಿಜಯ್ ಕುಮಾರ್, ಕೃಷ್ಣೇಗೌಡ, ಲೋಕೇಶ್, ಸೋಮಶೇಖರ್, ಅಲಮೇಲಮ್ಮ ಜಗದೀಶ್, ಗಣೇಶ್, ದಿನೇಶ್, ಕೆಂಪೇಗೌಡ, ಮಹದೇವ, ಉಮೇಶ್, ಮಂಜುನಾಥ್, ಶ್ರೀನಾಥ್ ಸೇರಿದಂತೆ ಪೊಲೀಸ್ ಅಧಿಕಾರಿಗಳು ರೈತರು ಹಾಜರಿದ್ದರು.



# ಪಿರಿಯಾಪಟ್ಟಣದಲ್ಲಿ ನಾಡಪ್ರಭು ಕೆಂಪೇಗೌಡ ಸಂಸ್ಮರಣೋತ್ಸವ



ಕಾರ್ಯಕ್ರಮದಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಪಿರಿಯಾಪಟ್ಟಣ, ಜು.28– ಪಟ್ಟಣದ ಡಿ.ದೇವರಾಜ ಅರಸು ಭವನದಲ್ಲಿ ನಾಡಪ್ರಭು ಕೆಂಪೇಗೌಡ ಸಂಸ್ಮರಣೋತ್ಸವ ಅಂಗವಾಗಿ ಒಕ್ಕಲಿಗ ಯುವ ಬ್ರಿಗೇಡ್ ವತಿಯಿಂದ ಪ್ರಗತಿಪರ ರೈತರಿಗೆ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪ್ರದಾನ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

ಬೆಂಗಳೂರು ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ಪೀಠಾಧ್ಯಕ್ಷ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಆಶೀರ್ವಾಚನ ನೀಡಿ ಮಾತನಾಡಿದ ಅವರು, ಒಕ್ಕಲಿಗರ ಪ್ರತಿಭೆ ಆಕಾಶ ಎತ್ತರಕ್ಕಿದೆ. ಇತರೆ ರಾಷ್ಟ್ರಗಳಲ್ಲಿ ಸಂಘಟನೆ ಹೊಂದಿದ್ದಾರೆ. ಕೆಂಪೇಗೌಡ ಅವರು ಸೇರಿದಂತೆ ಅನೇಕ ಇತಿಹಾಸ ಪುರುಷರು ಈ ನಾಡಿನ ಅಭಿವೃದ್ಧಿಗೆ ತಮ್ಮ ಪ್ರಾಣ ತ್ಯಾಗ ಮಾಡಿದ್ದಾರೆ ಇದನ್ನು ಮರೆಯಬಾರದು ಎಂದರು.

ಮುಖ್ಯ ಭಾಷಣಕರ ಪ್ರೊ.ನಂಜುಂಡಯ್ಯ ಮಾತನಾಡಿ, ನಾಡಪ್ರಭು ಕೆಂಪೇಗೌಡರು ಕನ್ನಡ ನಾಡು ನುಡಿಗೆ ಶ್ರಮಿಸಿದವರು ಇದನ್ನು ಯುವ ಪೀಳಿಗೆ ಅರ್ಥೈಸಿಕೊಳ್ಳಬೇಕು. ಇಂದಿನ ಬೃಹತ್ ಬೆಂಗಳೂರು ನಗರ ಸ್ಥಾಪಿಸಿ ಪ್ರತಿ ಸಮುದಾಯಕ್ಕೂ ವೃತ್ತಿಗೆ ಅನುಗುಣವಾಗಿ ಪೇಟೆಗಳನ್ನು ಸ್ಥಾಪಿಸಿದರು. ಅಲ್ಲದೇ ನಗರದಾದ್ಯಂತ ರಸ್ತೆ, ಕೆರೆಕಟ್ಟೆ, ದೇವಸ್ಥಾನ ನಿರ್ಮಾಣ, ಕೃಷಿ ಅಭಿವೃದ್ಧಿಗೆ ಆದ್ಯತೆ ಸೇರಿದಂತೆ ಮೂಲ ಸೌಲಭ್ಯ ಕಲ್ಪಿಸಿ ನೀರಾವರಿ ಸಮಸ್ಯೆ ನೀಗಿಸಿದರು. ಆದ್ದರಿಂದ ಸರ್ಕಾರ ಇವರ ಹೆಸರಿನಲ್ಲಿ ವಿಮಾನ ನಿಲ್ದಾಣ, ಪ್ರತಿಮೆಗಳು ನಿರ್ಮಾಣ ಮಾಡಿ ಸ್ಮರಿಸುವ ಕೆಲಸ ಮಾಡಿದೆ ಎಂದರು.

ಕಾರ್ಯಕ್ರಮದಲ್ಲಿ ತುಮಕೂರು ಕುಂಚಟಿಗರ ಮಹಾಸಂಸ್ಥಾನ ಮಠದ ಡಾ.ಹನುಮಂತನಾಥ ಸ್ವಾಮೀಜಿ ಮಾತನಾಡಿದರು. ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯ ಉಪ ಕುಲಪತಿ ಡಾ.ಎಸ್.ವಿ.ಸುರೇಶ್ ಕಾರ್ಯಕ್ರಮ ಉದ್ಘಾಟಿಸಿದರು ಮತ್ತು ಪ್ರಗತಿಪರ ರೈತರು ಮತ್ತು ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಈ ವೇಳೆ ಒಕ್ಕಲಿಗ ಯುವ ಬ್ರಿಗೇಡ್‌ನ ಸಂಸ್ಥಾಪಕ ಅಧ್ಯಕ್ಷ ನಂಜೇಗೌಡ ನಂಜುಂಡ, ಡಾ.ನವಿತ ತಿಮ್ಮಯ್ಯ, ಸ್ಮಾರ್ಟ್ ಕ್ವೀಕ್ ವ್ಯವಸ್ಥಾಪಕ ದೀಪುಗೌಡ, ಐಕಾನಿಕ್ ಹಾಸ್ಪಿಟಾಲಿಟಿ ವ್ಯವಸ್ಥಾಪಕ ನಿರ್ದೇಶಕ ಭರತ್ ದೇವರಾಜಪ್ಪ, ಬಿಜೆಪಿ ಅಧ್ಯಕ್ಷ ರಾಜೇಂದ್ರ, ಆಯೋಜನ ಸಮಿತಿ ಉಪನ್ಯಾಸಕ ನಂಜುಂಡಸ್ವಾಮಿ, ನಾಗಣ್ಣಗೌಡ, ಕುಮಾರ್, ವಿನಯ್, ಅಣ್ಣಪ್ಪ, ಅಶ್ವಥ್, ಕುಬೇರ್, ಮಂಜುನಾಥ್, ಮಾದೇಗೌಡ, ದರ್ಶನ್, ರಾಜೇಗೌಡ ಸೇರಿದಂತೆ ಸಮಾಜದ ಮುಖಂಡರು ಹಾಜರಿದ್ದರು.

# ಕಾರ್ಗಿಲ್ ವಿಜಯ್ ದಿವಸ್ ಆಚರಣೆ



ಕಾರ್ಯಕ್ರಮದಲ್ಲಿ ಮಾಜಿ ಸೈನಿಕರನ್ನು ಸನ್ಮಾನಿಸಲಾಯಿತು.

ಹುಣಸೂರು, ಜು.28– ನಗರದ ರೋಟರಿ ಕ್ಲಬ್ ವತಿಯಿಂದ 26ನೇ ಕಾರ್ಗಿಲ್ ವಿಜಯ್ ದಿವಸ್ ಅನ್ನು ರೋಟರಿ ಭವನದಲ್ಲಿ ಆಚರಿಸಲಾಯಿತು.

ಮಾಜಿ ಸೈನಿಕ ಲೂಯಿಸ್ ಪೆರೇರಾ ಮಾತನಾಡಿ, ಪಾಕಿಸ್ತಾನ ತನ್ನ ನೀಚ ಬುದ್ದಿಯಿಂದ ತನ್ನ ಅಸ್ತಿತ್ವ ಕಳೆದುಕೊಂಡು ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಮಾನವೀಯ ಗುಣಗಳಿಂದ ಹೊರಗುಳಿದಿದೆ ಎಂದರು.

ಮತ್ತೊಬ್ಬ ಮಾಜಿ ಸೈನಿಕ ಹಾಗೂ ಎಸ್‌ಬಿಐ ಬ್ಯಾಂಕ್ ಕ್ಯಾಷಿಯರ್ ಮಂಜುನಾಥ್ ಮಾತನಾಡಿ, ಬ್ರಿಟಿಷರು ಮತ್ತು ಬದ್ಧ ವೈರಿಗಳ ವಿರುದ್ಧ ಹೋರಾಡಲು ಭಾರತೀಯರು ಬಲಿಷ್ಠರಾಗಿದ್ದ ಕಾರಣ. ಇಂದು ಇಡೀ ದೇಶದಾಗಲಕ್ಕೂ ಕಾರ್ಗಿಲ್ ವಿಜಯ್ ದಿವಸ್ ಆಚರಿಸಲು ಸಾಧ್ಯವಾಗಿದೆ ಎಂದರು.

ಕಾರ್ಗಿಲ್ ವಿಜಯ್ ದಿವಸ್ ದಿನದಂದು ನಮ್ಮ ದೇಶ ಸೇವೆ ಗುರುತಿಸಿ ಹುಣಸೂರು ರೋಟರಿ ಕ್ಲಬ್ ಗೌರವಿಸುತ್ತಿರುವುದು ಶ್ಲಾಘನೀಯವಾಗಿದ್ದು, ರೋಟರಿ ಸೇವೆ ಮಾನವೀಯತೆಯ ಸಂಕೇತವಾಗಿದೆ ಎಂದರು.

ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮತ್ತೊಬ್ಬ ಸೈನಿಕ ಮಂಜುನಾಥ್ ಮಾತನಾಡಿ, ದೇಶ ಸೇವೆ ಮಾಡಲು ತುದಿಗಾಲಲ್ಲಿ ನಿಂತಿದ್ದ ನಮಗೆ ಅಂದು ಸೈನ್ಯ ಸೇರಿದ್ದು ನಮ್ಮ ಸೌಭಾಗ್ಯವೆಂದರು.

ಹುಣಸೂರು ರೋಟರಿ ಕ್ಲಬ್ ಅಧ್ಯಕ್ಷ. ಹೆಚ್.ಆರ್.ಕೃಷ್ಣ ಕುಮಾರ್ ಮಾತನಾಡಿ, ದೇಶ ಕಾಯುವ ಸೈನಿಕ, ದೇಶಕ್ಕೆ ಅನ್ನ ನೀಡುವ ರೈತ, ವಿದ್ಯೆ ಕಲಿಸುವ ಗುರು ಹಾಗೂ ಜನ್ಮ ನೀಡುವ ತಂದೆ, ತಾಯಿ ಋಣ ಜೀವನ ಪೂರ್ತಿ ಮರೆಯಬಾರದು ಎಂದರು.

ಕಾರ್ಯಕ್ರಮದಲ್ಲಿ ರೋಟರಿ ಕಾರ್ಯದರ್ಶಿ ಶ್ಯಾಮಣ್ಣ, ರೋಟರಿ ಹಿರಿಯರಾದ ಆನಂದ್.ಆರ್, ರಾಜಶೇಖರ್, ಡಾ.ಸರೋಜಿನಿ ವಿಕ್ರಂ, ಜಿ.ವಿ.ಶ್ರೀನಾಥ್, ರೋಟರಿ ವಿದ್ಯಾಸಂಸ್ಥೆ ಮುಖ್ಯಶಿಕ್ಷಕಿ ದೀಪ, ಪ್ರಸನ್ನ, ಶಿಕ್ಷಕ ಅಕ್ಮಲ್, ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗವಿದ್ದರು.

# ಪ್ರಸ್ತುತ ಅಧಿಕಾರದ ದಾಹಕ್ಕೆ ಸಹಕಾರ ಕ್ಷೇತ್ರ ಬಲಿ

## ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಸದಾನಂದ ಬೇಸರ



ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

> ಜಿಲ್ಲಾ ಬ್ಯಾಂಕ್‌ಗೆ ನಿರ್ದೇಶಕನಾಗಿ ಆಯ್ಕೆಯಾಗಿರುವುದಕ್ಕೆ ಸಂತಸವಾಗಿದೆ. ಮುಂದಿನ ದಿನಗಳಲ್ಲಿ ಬ್ಯಾಂಕ್‌ನಿಂದ ಬರಬಹುದಾದ ಅನುದಾನವನ್ನು ತಾಲೂಕಿನ ಎಲ್ಲಾ ಸಹಕಾರ ಸಂಘಗಳಿಗೆ ಹಂಚಿಕೆ ಮಾಡುತ್ತೇನೆ. ತಿ.ನರಸೀಪುರ ತಾಲೂಕಿಗೆ 32 ಸೊಸೈಟಿಗಳು ಸೇರಲಿದ್ದು, ಪ್ರತಿ ಸೊಸೈಟಿಗೆ ಭೇಟಿ ನೀಡಿ ಅಲ್ಲಿರುವ ಲೋಪ ದೋಷ ಗಳನ್ನು ಸರಿಪಡಿಸಿ ಯಾವುದೇ ರಾಜಕೀಯ ಮಾಡದೇ ನ್ಯಾಯ ದೊರಕಿಸಿಕೊಡುತ್ತೇನೆ. ನನ್ನ ಗೆಲುವಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಹಾಗೂ ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಸಹಕಾರ ನೀಡಿದ್ದು ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. – ಟಿ.ಪಿ.ಬೋರೇಗೌಡ ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ.

ತಿ.ನರಸೀಪುರ, ಜು.28– ಪ್ರಸ್ತುತ ಅಧಿಕಾರದ ದಾಹಕ್ಕೆ ಸಹಕಾರ ಕ್ಷೇತ್ರ ಬಲಿ ಕೊಡುವ ಕೆಲಸ ನಡೆಯುತ್ತಿದೆ ಎಂದು ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಸದಾನಂದ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಟಿ.ಪಿ. ಬೋರಯ್ಯ ರೈತ ಭವನದಲ್ಲಿ ಪಟ್ಟಣದ ಸ್ನೇಹ ಬಳಗದಿಂದ ಹಮ್ಮಿಕೊಳ್ಳಲಾಗಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಪ್ರಸ್ತುತ ಸಹಕಾರ ಸಂಘದ ನಿರ್ದೇಶಕರಾಗಲು ಕೋಟಿ ಕೋಟಿ ಹಣ ಖರ್ಚು ಮಾಡಲಾಗುತ್ತಿದೆ. ಸಹಕಾರ ಸಂಘದ ಬಗ್ಗೆ ಗೊತ್ತಿಲ್ಲದಿದ್ದರೂ ಘಟಾನುಘಟಿ ನಾಯಕರು ಚುನಾವಣೆಯಲ್ಲಿ ಸ್ಪರ್ಧಿಸುವ ಮೂಲಕ ಸಹಕಾರ ಸಂಘದಲ್ಲಿ ರಾಜಕೀಯ ಪ್ರವೇಶ ಮಾಡುವಂತಾಗಿದೆ. ಇದೇ ರೀತಿ ಮುಂದುವರೆದರೆ ಕೆಲವೇ ದಿನಗಳಲ್ಲಿ ಸಹಕಾರ ಸಂಘ ಮುಚ್ಚುವ ಪರಿಸ್ಥಿತಿ ನಿರ್ಮಾಣವಾದರೂ ಅಚ್ಚರಿ ಪಡಬೇಕಿಲ್ಲ ಎಂದರು.

ಚುನಾವಣೆ ಎದುರಾದಾಗ ಸ್ಪರ್ಧಿಸುವ ವ್ಯಕ್ತಿ ಮೊದಲು ಮಾಡಿರುವ ಸೇವೆಗೆ ಬೆಲೆ ಇರುವುದಿಲ್ಲ. ಆತ ಯಾವುದೇ ಧ್ಯೇಯ ಇಟ್ಟುಕೊಂಡು ಚುನಾವಣೆಗೆ ಹೋದರೂ ಯಾರೂ ಬೆಲೆ ಕೊಡುವುದಿಲ್ಲ. ಆ ಸಮಯದಲ್ಲಿ ಯಾರು ಏನು ಉಚಿತ ಘೋಷಣೆ ನೀಡುತ್ತಾರೋ ಅದಕ್ಕೆ ಪ್ರಾಮುಖ್ಯತೆ ನೀಡಲಾಗುತ್ತದೆ. ಇದರಿಂದ ಅಭ್ಯರ್ಥಿ ಕನಸುಗಳನ್ನು ಕಟ್ಟಿಕೊಂಡು ಭವಿಷ್ಯದಲ್ಲಿ ಸಮಾಜಮುಖಿ ಕೆಲಸಗಳನ್ನು ಮಾಡಬೇಕೆಂದು ಬಂದಿರುತ್ತಾನೋ ಅದು ಯಾವುದೇ ಕಾರಣಕ್ಕೂ ಸಾಧ್ಯವಾಗುವುದಿಲ್ಲ. ಇಲ್ಲಿ ಉತ್ತಮ ಧ್ಯೇಯಗಳಿಗೆ ಎಳ್ಳು ನೀರು ಬಿಟ್ಟು ವೈಯಕ್ತಿಕ ಲಾಭಕ್ಕೆ ರಾಜಕೀಯ ಮಾಡುವ ಸನ್ನಿವೇಶ ನಿರ್ಮಾಣವಾಗಿದೆ. ಆದರೆ ಸಹಕಾರ ಕ್ಷೇತ್ರ ಇಲ್ಲಿಯವರೆಗೆ ಯಾವುದೇ ರೀತಿಯ ರಾಜಕೀಯ ಕಾಣದೆ ಜಾತಿ, ಧರ್ಮ, ಪಕ್ಷ ಮೀರಿ ಸಹಕಾರಿಗಳ ಸಹಕಾರದಿಂದ ನಡೆಯುವ ಕ್ಷೇತ್ರವಾಗಿ ಉಳಿದುಕೊಂಡಿದೆ ಎಂದರು.

ಸಹಕಾರ ಸಂಘಗಳಲ್ಲಿ ಪ್ರಾಮಾಣಿಕವಾಗಿ ತೊಡಗಿಕೊಂಡು ಸಹಕಾರಿ ಕ್ಷೇತ್ರವನ್ನು ಮುನ್ನಡೆಸಿಕೊಂಡು ಹೋಗುವವರಿಗೆ ಹಾಗೂ ಸವಲತ್ತುಗಳನ್ನು ಪ್ರಾಮಾಣಿಕವಾಗಿ ತಲುಪಿಸುವವರಿಗೆ ಅವಕಾಶಗಳು ದೊರಕಬೇಕಿದೆ ಎಂದರು.

ಇದೇ ವೇಳೆ ಹೆಲ್ತ್ ಕೇರ್ ಪ್ರಶಸ್ತಿ ಪಡೆದ ಖ್ಯಾತ ಶಸ್ತ್ರಚಿಕಿತ್ಸಕ ಡಾ.ಎಂ.ರೇವಣ್ಣ, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಟಿ.ಪಿ. ಬೋರೇಗೌಡ, ಕರ್ನಾಟಕ ಭೂಷಣ ಪ್ರಶಸ್ತಿ ವಿಜೇತ ಆಲಗೂಡು ಡಾ.ಚಂದ್ರಶೇಖರ್, ಟಿಎಪಿಸಿಎಂಎಸ್ ಉಪಾಧ್ಯಕ್ಷ ಡಣಾಯಕನಪುರ ಮಲ್ಲಣ್ಣ, ಸರ್ಕಾರಿ ನೌಕರರ ಸಂಘದ ರಾಜ್ಯ ಕಾರ್ಯದರ್ಶಿಯಾಗಿ ನೇಮಕಗೊಂಡ ಎಂ.ವಿ.ಶಿವಶಂಕರ್ ಮೂರ್ತಿಯವರನ್ನು ಸನ್ಮಾನಿಸಲಾಯಿತು.

ಈ ವೇಳೆ ಟಿಎಪಿಸಿಎಂಎಸ್ ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ, ಬಿಜೆಪಿ ಕ್ಷೇತ್ರಾಧ್ಯಕ್ಷ ಶಿವಕುಮಾರ್ (ಸತ್ಯಪ್ಪ),ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಫಣೀಶ್ ಕುಮಾರ್, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷಕರೋಹಟ್ಟಿ ಮಹದೇವಯ್ಯ, ಸ್ನೇಹ ಬಳಗದ ಪ್ರೂಜಿತ್ ಮೆಡಿಕಲ್ ಕುಮಾರ್, ಜನ ಜಾಗೃತಿ ಜಿಲ್ಲಾಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ, ಟಿಎಪಿಎಂಎಸ್ ಕಾರ್ಯದರ್ಶಿ ರಘುನಂದನ್,ಕೇತುಪುರ ಪಿಎಸಿಸಿಎಸ್ ಕಾರ್ಯದರ್ಶಿ ಪುಟ್ಟಸ್ವಾಮಿ, ಡೈರಿ ಅಧ್ಯಕ್ಷ ಡಿ.ಎಲ್.ಮಹದೇವಪ್ಪ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಎಸ್ ಎಂಆರ್ ಪ್ರಕಾಶ್, ಕೆಇಬಿ ಸಿದ್ದಲಿಂಗಸ್ವಾಮಿ, ಸುಗಂಧರಾಜು, ತೋಂಟೇಶ್, ಅಂಗಡಿ ನಾಗೇಶ್, ವಕೀಲ ಜ್ಞಾನೇಂದ್ರ ಮೂರ್ತಿ, ರಾಜಶೇಖರ್ ಸೇರಿದಂತೆ ಮತ್ತಿತರರಿದ್ದರು.

# ತರಗನಹಳ್ಳಿ ಡೈರಿಯಲ್ಲಿ ಅವ್ಯವಹಾರ ನಡೆದಿಲ್ಲ



ಸುದ್ದಿಗೋಷ್ಠಿಯಲ್ಲಿ ಡೈರಿ ಅಧ್ಯಕ್ಷ ಸಿದ್ದನಾಯಕ ಮಾತನಾಡಿದರು.

ನಂಜನಗೂಡು, ಜು.28– ತಾಲೂಕಿನ ತರಗನಹಳ್ಳಿ ಡೈರಿಯಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ವಿರೋಧಿಗಳು ಸಂಘದ ನಿರ್ದೇಶಕರಿಗೆ ಕೆಟ್ಟ ಹೆಸರು ತರಲು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಡೈರಿ ಅಧ್ಯಕ್ಷ ಸಿದ್ದನಾಯಕ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಹಕಾರ ಸಂಘದಲ್ಲಿ 7 ಕೋಟಿ ಅವ್ಯವಹಾರ ನಡೆದಿದೆ ಎಂದು ಸುಳ್ಳು ಆರೋಪ ಮಾಡಲಾಗುತ್ತಿದೆ. ಸಂಘ ಸ್ಥಾಪನೆಯಾಗಿ 17 ವರ್ಷಗಳಾಗಿದ್ದು, 5.5 ಕೋಟಿ ಮಾತ್ರ ವ್ಯವಹಾರ ನಡೆಸಲಾಗಿದೆ. ಹೀಗಾಗಿ 7 ಕೋಟಿ ಅವ್ಯವಹಾರ ನಡೆಸಲು ಹೇಗೆ ಸಾಧ್ಯ. ಪ್ರತಿ ವರ್ಷ ಸಂಘದ ಆಡಿಟ್ ನಡೆಸಲಾಗಿದ್ದು, ಲೆಕ್ಕಪತ್ರಗಳನ್ನು ಸಂಘದ ನಿರ್ದೇಶಕರ ಗಮನಕ್ಕೆ ತರಲಾಗಿದೆ. ಕೆಲವರು ದಾಖಲೆ ನೀಡದೆ ವೃಥಾ ಸಲ್ಲದ ಆರೋಪದಲ್ಲಿ ತೊಡಗಿದ್ದಾರೆ. ನಾವು 7 ವರ್ಷದ ದಾಖಲೆ ಆಡಿಟ್ ವರದಿ ಮುಂದಿಟ್ಟು ಆರೋಪಕ್ಕೆ ಉತ್ತರ ನೀಡುತ್ತಿದ್ದೇವೆ ಎಂದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಭಾಗ್ಯರಾಜ್ ಮಾತನಾಡಿದರು.

ಮುಖಂಡರಾದ ನಂಜುಂಡಸ್ವಾಮಿ, ಡೈರಿ ನಿರ್ದೇಶಕರಾದ ಗುರುಲಿಂಗ, ಕೆಂಪಣ್ಣ, ಮಹದೇವು, ಸರೋಜ, ದೊರೆ ಸ್ವಾಮಿ, ಶಿವಕುಮಾರ್, ಜವರೇಗೌಡ, ನಾಗಣ್ಣ, ಪಾಪಯ್ಯ, ರೇವಣ್ಣ ಉಪಸ್ಥಿತರಿದ್ದರು.

### ಕಬಿನಿ ನೀರಿನ ಮಟ್ಟ



| | |
|---|---|
| ಗರಿಷ್ಠ ಮಟ್ಟ | 2284 ಅಡಿ |
| ಸೋಮವಾರ | 2282 ಅಡಿ |
| ಒಳಹರಿವು | 26000 ಕ್ಯೂಸೆಕ್ |
| ಹೊರಹರಿವು | 30000 ಕ್ಯೂಸೆಕ್ |

# ರಾಜ್ಯದಲ್ಲಿ ಅಧಿಕಾರದಲ್ಲಿರುವುದು ದಲಿತ ವಿರೋಧಿ ಕಾಂಗ್ರೆಸ್ ಸರ್ಕಾರ

**• ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ • ಖರ್ಗೆ, ಪರಮೇಶ್ವರ್, ಮುನಿಯಪ್ಪರಿಗೆ ಸರಿಯಾಗಿ ಅಧಿಕಾರ ನೀಡಲಿಲ್ಲ**



ಬೆಂಗಳೂರು, ಜು.28(ಕೆಎಂಶಿ)–ರಾಜ್ಯದಲ್ಲಿರುವುದು ದಲಿತ ವಿರೋಧಿ ಕಾಂಗ್ರೆಸ್ ಸರ್ಕಾರವಾಗಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಆರೋಪಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಪ್ರಸ್ತುತ ಎಐಸಿಸಿ ಅಧ್ಯಕ್ಷರಾಗಿರುವ ದಲಿತ ನಾಯಕ ಮಲ್ಲಿಕಾರ್ಜುನ ಖರ್ಗೆ ಈ ಹಿಂದೆ ರಾಜ್ಯದಲ್ಲಿ ಶಾಸಕಾಂಗ ಪಕ್ಷದ ನಾಯಕರಾಗಿ 5 ವರ್ಷ ಸೇವೆ ಸಲ್ಲಿಸಿದರೂ ಅವರನ್ನು ಮುಖ್ಯಮಂತ್ರಿ ಮಾಡಲಿಲ್ಲ.

ಸತತ 8 ವರ್ಷ ಕೆಪಿಸಿಸಿ ಅಧ್ಯಕ್ಷರಾಗಿದ್ದ ಇನ್ನೊಬ್ಬ ದಲಿತ ನಾಯಕ ಡಾ.ಜಿ.ಪರಮೇಶ್ವರ್ ಅವರನ್ನೂ ಮುಖ್ಯಮಂತ್ರಿ ಮಾಡಲಿಲ್ಲ. ಸತತವಾಗಿ 7 ಬಾರಿ ಲೋಕಸಭೆಯಲ್ಲಿ ಕರ್ನಾಟಕದಿಂದ ಕಾಂಗ್ರೆಸ್ ಪಕ್ಷ ಪ್ರತಿನಿಧಿಸಿದ ದಲಿತ ನಾಯಕ ಕೆ.ಎಚ್.ಮುನಿಯಪ್ಪ ಅವರನ್ನು ಕೇಂದ್ರದಲ್ಲಿ ಕ್ಯಾಬಿನೆಟ್ ದರ್ಜೆ ಮಂತ್ರಿಯನ್ನೂ ಮಾಡಲಿಲ್ಲ ಅಂತೂ ಇಂತೂ ದಲಿತ ವಿರೋಧಿ ಕರ್ನಾಟಕ ಕಾಂಗ್ರೆಸ್‌ನಲ್ಲಿ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ ಎಂಬಂತಾಗಿದೆ ಎಂದು ಕಟುವಾಗಿ ಟೀಕಿಸಿದ್ದಾರೆ.

ದಲಿತರ ಉದ್ಧಾರದ ಮಾತನಾಡುವ ಸಿದ್ದರಾಮಯ್ಯ, ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಅಡಿ ಪರಿಶಿಷ್ಟ ಸಮುದಾಯಗಳಿಗೆ ಮೀಸಲಿಟ್ಟ 42,017.51 ಕೋಟಿ ರೂ. ಅನುದಾನದಲ್ಲಿ 11,896.84 ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳಲು ಮುಂದಾಗಿರುವುದು ದಲಿತ ವಿರೋಧಿ ನೀತಿಯನ್ನು ತೋರಿಸುತ್ತದೆ.

ಅನುದಾನ ಹಂಚಿಕೆಗೆ ಹಣವಿಲ್ಲ ಎಂದಾದರೆ, ಬಜೆಟ್‌ನಲ್ಲಿ ಕಾಟಾಚಾರದ, ಅವಾಸ್ತವಿಕ ಘೋಷಣೆಗಳನ್ನು ಮಾಡಿ ಪರಿಶಿಷ್ಟರ ಮೂಗಿಗೆ ತುಪ್ಪ ಸವರಿ, ಬಿಟ್ಟಿ ಪ್ರಚಾರ ಪಡೆದುಕೊಂಡರೆ ಪರಿಶಿಷ್ಟ ಸಮುದಾಯಗಳ ಕಲ್ಯಾಣ ಆಗುತ್ತದೆಯೇ, ಇದೇನಾ ಪರಿಶಿಷ್ಟ ಸಮುದಾಯಗಳ ಬಗ್ಗೆ ತಮಗಿರುವ ಬದ್ಧತೆ, ಇದೇನಾ ತಾವು ಭಾಷಣ ಬಿಗಿಯುವ ಸಾಮಾಜಿಕ ನ್ಯಾಯ ಎಂದು ಪ್ರಶ್ನಿಸಿದ್ದಾರೆ.

ಒಂದೆಡೆ ಬಿಡುಗಡೆ ಮಾಡಿದ ಅಲ್ಪಸ್ವಲ್ಪ ಅನುದಾನದಲ್ಲೂ ಲೂಟಿ ಹೊಡೆಯುವ ಮೂಲಕ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆ. ಮತ್ತೊಂದೆಡೆ ಘೋಷಣೆ ಮಾಡಿದ ಅನುದಾನ ಹಂಚಿಕೆ ಮಾಡದೆ ಬಾಕಿ ಉಳಿಸಿಕೊಳ್ಳುತ್ತಿದ್ದು, ಕಾಂಗ್ರೆಸ್ ಸರ್ಕಾರಕ್ಕೆ ನಾಚಿಕೆಯಾಗಬೇಕು, ಕಿಂಚಿತ್ತಾದರೂ ಆತ್ಮಸಾಕ್ಷಿ ಇದ್ದರೆ ಸಿದ್ದರಾಮಯ್ಯ ಅಹಿಂದ ಹೆಸರಿನಲ್ಲಿ ರಾಜಕೀಯ ಮಾಡುವುದನ್ನು ಬಿಡಬೇಕು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ದಲಿತ ವಿರೋಧಿ ರಾಜ್ಯ ಕಾಂಗ್ರೆಸ್ ಸರ್ಕಾರ ವಾಗ್ದಾನದಂತೆ ಬಡ ಕುಟುಂಬಗಳಿಗೆ 10 ಕೆ.ಜಿ. ಉಚಿತ ಅಕ್ಕಿ ನೀಡಲಾಗದೆ ದಿವಾಳಿಯಾಗಿದೆ.

ಕಳೆದ ಎರಡು ವರ್ಷಗಳಲ್ಲಿ ಕಾಂಗ್ರೆಸ್ ಸರ್ಕಾರ ಜನತೆಗೆ ಕೊಟ್ಟಿದ್ದು ಏನೂ ಇಲ್ಲ, ಬರೀ ಸುಳ್ಳು ಹೇಳಿದ್ದೇ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಸಾಧನೆಯಾಗಿದೆ.

ಬಡ ಕುಟುಂಬಗಳಿಗೆ ಪ್ರತಿ ತಿಂಗಳು 10 ಕೆ.ಜಿ. ಉಚಿತ ಅಕ್ಕಿ ಕೊಡುವುದಾಗಿ ವಾಗ್ದಾನ ಮಾಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್, ಅಕ್ಕಿಯನ್ನೂ ಕೊಡದೆ, ಹಣವೂ ನೀಡದೆ ವಂಚಿಸುತ್ತಿದೆ.

ಬಡವರ ಉಚಿತ ಅಕ್ಕಿ ಸಾಗಿಸುವ ಲಾರಿ ಮಾಲೀಕರಿಗೆ ಸಾಗಣೆ ವೆಚ್ಚದ ಬಿಲ್ ಪಾವತಿಗೂ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ಬಳಿ ಹಣವಿಲ್ಲ.

ಭಾರತೀಯ ಆಹಾರ ನಿಗಮದಿಂದ ಅಕ್ಕಿ ಖರೀದಿಸಲು ಸಮಯಕ್ಕೆ ಸರಿಯಾಗಿ ಹಣ ಪಾವತಿ ಮಾಡಲೂ ಈ ಸರ್ಕಾರದಿಂದ ಸಾಧ್ಯವಾಗುತ್ತಿಲ್ಲ, ಅಲ್ಲದೆ, ನ್ಯಾಯಬೆಲೆ ಅಂಗಡಿಗಳ ಮಾಲೀಕರಿಗೆ ಕಮಿಷನ್ ಕೊಡಲೂ ದುಡ್ಡಿಲ್ಲದಂತಾಗಿದೆ.

ಆರ್ಥಿಕವಾಗಿ ಸಂಪೂರ್ಣ ದಿವಾಳಿಯಾಗಿರುವ ರಾಜ್ಯ ಸರ್ಕಾರದಿಂದ ಯಾವುದೇ ಅಭಿವೃದ್ಧಿ ಕಾರ್ಯಗಳೂ ಆಗುತ್ತಿಲ್ಲ ಎಂದಿದ್ದಾರೆ.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | (ದೂ: 2521923) |
| ನರಸಿಂಹ (ಕ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | (ದೂ: 2422871) |
| ಜೂನಿಯರ್ (ಕ) | 4 ಪ್ರದರ್ಶನಗಳು |
| **ಬಾಲಾಜಿ** | (ದೂ: 2497199) |
| ಸೈಯಾರ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ** | (ಮೊ:9900820093) |
| ಜೂನಿಯರ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಎಕ್ಕ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಮಾರೀಚನ್ (ತ) | 4 ಪ್ರದರ್ಶನಗಳು |
| **ಸಂಗಂ** | |
| ಸು ಫ್ರಮ್ ಸೋ (ಕ) | 4 ಪ್ರದರ್ಶನಗಳು |
| **ಲಿಡೋ** | |
| ತಲೈವನ್ ತಲೈವಿ (ತ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| – | – |
| **ಪ್ರಭಾ** | |
| ಮಾದೇವ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | 28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ. |
| ಸ್ಕ್ರೀನ್ 2 | ಇಲಿಯೋ (3ಡಿ)(ಇಂ): ಬೆ11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ10.20ಕ್ಕೆ. |
| ಸ್ಕ್ರೀನ್ 3 | ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ. |
| ಸ್ಕ್ರೀನ್ 4 | ಕುಬೇರಾ (ತೆ): ಬೆ10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ. |
| ಸ್ಕ್ರೀನ್ 2 | ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ. |
| ಸ್ಕ್ರೀನ್ 3 | ಯುದ್ಧಕಾಂಡ 2 (ಕ): ಸಂ.6.50ಕ್ಕೆ. |
| ಸ್ಕ್ರೀನ್ 4 | ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ. |

### ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

## ಅರ್ಜಿ ಆಹ್ವಾನ

ಮೈಸೂರು,ಜು.28– ಮೈಸೂರು ಜಿಲ್ಲಾ ದೂರು ಪ್ರಾಧಿಕಾರದಲ್ಲಿ ನಾಗರಿಕ ಸಮಾಜದ ಸದಸ್ಯರ ಹುದ್ದೆಯು ಖಾಲಿ ಇದ್ದು, ಸದರಿ ಹುದ್ದೆಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಉಲ್ಲೇಖಿತ ಪತ್ರದಲ್ಲಿ ನಿರ್ದೇಶನವನ್ನು ನೀಡಲಾಗಿರುತ್ತದೆ. ಆದ್ದರಿಂದ ಮೈಸೂರು ಜಿಲ್ಲಾ ಪೊಲೀಸ್ ದೂರು ಪ್ರಾಧಿಕಾರದಲ್ಲಿ ಸೇವೆಯನ್ನು ಸಲ್ಲಿಸಲು ಇಚ್ಛಿಸುವವರು ಜುಲೈ 25 ರಿಂದ ಆಗಸ್ಟ್ 8 ರವರೆಗೆ ಜಿಲ್ಲಾಧಿಕಾರಿಗಳ ಕಚೇರಿ, ಕೊಠಡಿ ಸಂಖ್ಯೆ 108, ಜಿಲ್ಲಾ ಮಟ್ಟದ ಅಧಿಕಾರಿಗಳ ಸಂಕೀರ್ಣ, ಸಿದ್ಧಾರ್ಥ ನಗರ, ಮೈಸೂರು ಇಲ್ಲಿಗೆ ಅರ್ಜಿಯನ್ನು ತಮ್ಮ ವ್ಯಕ್ತಿ ಪರಿಚಯ. ಆಧಾರ್ ಕಾರ್ಡ್ ಮತ್ತು ಸೇವೆ ಸಲ್ಲಿಸಿರುವ ಕ್ಷೇತ್ರದ ವಿವರ ಹಾಗೂ ದಾಖಲಾತಿಗಳೊಂದಿಗೆ ಸಲ್ಲಿಸತಕ್ಕದ್ದು.

ಅರ್ಜಿಯನ್ನು ಸಲ್ಲಿಸುವವರು ಸಮಾಜ ಸೇವೆ, ಶಿಕ್ಷಣ ಕ್ಷೇತ್ರದಲ್ಲಿ ಸೇವೆ, ಆರೋಗ್ಯ ಕ್ಷೇತ್ರದಲ್ಲಿ ಮತ್ತು ಬಡವರ ಕುರಿತು ವಿಶೇಷ ಕಾಳಜಿವುಳ್ಳವರಾಗಿರಬೇಕು. ಅಲ್ಲದೇ ಯಾವುದೇ ರಾಜಕೀಯ ಪಕ್ಷದಿಂದ ಅಥವಾ ಸೈದ್ಧಾಂತಿಕ ಗುಂಪಿನಿಂದ ಗುರುತಿಸಿಕೊಂಡಿರಬಾರದು ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಜ್ಯದಲ್ಲಿ ಕಾಂಗ್ರೆಸ್ಸಿಗರಿಗೆ ಸರ್ಕಾರ ನಡೆಸಲು ಬರುತ್ತಿಲ್ಲ...!

**• ಮಾಜಿ ಡಿಸಿಎಂ, ಹಾಲಿ ಸಂಸದ ಗೋವಿಂದ ಕಾರಜೋಳ ಟೀಕೆ**
**• ರೈತರಿಗೆ ಸೂಕ್ತ ರೀತಿ ರಸಗೊಬ್ಬರ ಪೂರೈಸಲು ಇವರಿಂದ ಸಾಧ್ಯವಾಗುತ್ತಿಲ್ಲ**

ಬೆಂಗಳೂರು, ಜು.28(ಕೆಎಂಶಿ)–ಕಾಂಗ್ರೆಸ್ಸಿಗರಿಗೆ ಕರ್ನಾಟಕದಲ್ಲಿ ಸರ್ಕಾರ ನಡೆಸಲು ಬರುತ್ತಿಲ್ಲ ಎಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ಹಾಲಿ ಸಂಸದ ಗೋವಿಂದ ಕಾರಜೋಳ್ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂಗಾರು ಹಂಗಾಮು ಪ್ರಾರಂಭಕ್ಕೆ ಮೊದಲೇ ರಾಜ್ಯದಲ್ಲಿ ಎಷ್ಟು ಹೆಕ್ಟೇರ್‌ನಲ್ಲಿ ಯಾವ್ಯಾವ ಬೆಳೆ ಬಿತ್ತನೆ ಆಗಲಿದೆ, ಡಿಎಪಿ, ಯೂರಿಯಾ ಸೇರಿದಂತೆ ಎಷ್ಟು ರಸಗೊಬ್ಬರ ಅಗತ್ಯವಿದೆ ಎಂಬ ಮಾಹಿತಿಗಳನ್ನು ಜಿಲ್ಲಾ ಉಸ್ತುವಾರಿ ಸಚಿವರು ಪಡೆಯಬೇಕಿತ್ತು ಎಂದರು.

ಜನಪ್ರತಿನಿಧಿ ಮತ್ತು ಅಧಿಕಾರಿಗಳ ಸಭೆಯಲ್ಲಿ ಪಡೆದ ವಿವಿಧ ಜಿಲ್ಲೆಗಳ ಮಾಹಿತಿ ಕ್ರೋಢೀಕರಿಸಿದ್ದರೆ ಸಮರ್ಪಕ ಲೆಕ್ಕಾಚಾರ ಸಿಗುತ್ತಿತ್ತು. ಮುಂಗಾರು ಹಂಗಾಮಿಗೆ ಕರ್ನಾಟಕದಿಂದ ಸುಮಾರು 6.30 ಲಕ್ಷ ಟನ್ ರಸಗೊಬ್ಬರ ಪ್ರಸ್ತಾವನೆ ಕಳುಹಿಸಿದ್ದು, ಕೇಂದ್ರ ಸರ್ಕಾರ 7.70 ಲಕ್ಷ ಟನ್ ರಸಗೊಬ್ಬರ ನೀಡಿದೆ, ಬೇಡಿಕೆಗಿಂತ ಹೆಚ್ಚು ಪೂರೈಕೆಯಾದರೂ ಅಭಾವ ಹೇಗಾಯಿತು.



ರಸಗೊಬ್ಬರ ಕಳ್ಳ ವ್ಯಾಪಾರಿಗಳು ಮಾರುಕಟ್ಟೆಯಲ್ಲಿ ಕೃತಕ ಅಭಾವ ಸೃಷ್ಟಿಸಿ, ಹೆಚ್ಚಿನ ಹಣಕ್ಕೆ ರೈತರಿಗೆ ಮಾರಾಟ ಮಾಡುತ್ತಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರು ನಿಷ್ಕ್ರಿಯರಾಗಿದ್ದು ಈ ವ್ಯವಸ್ಥೆ ರದ್ದು ಮಾಡುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಯೋಚಿಸಬೇಕು. ಗ್ಯಾರಂಟಿ ಯೋಜನೆಗಳಿಗೆ ಎಸ್‌ಸಿ, ಎಸ್‌ಟಿ ಸಮುದಾಯದ ಅನುದಾನ ದುರ್ಬಳಕೆ ಸರಿಯಲ್ಲ, ಅವರನ್ನು ಸಬಲರನ್ನಾಗಿಸಲು ಬಳಕೆ ಆಗಬೇಕು.

ಕಾಂಗ್ರೆಸ್ ಆಡಳಿತದ ಕಡೆಗಳಲ್ಲಿ ಇಂತಹ ನಿಧಿ ದುರ್ಬಳಕೆ ಮಾಡಲಾಗುತ್ತಿದೆ, ವಿಶೇಷ ಯೋಜನೆ ಹಣ ಕದ್ದು, ಮತಬ್ಯಾಂಕ್ ರಾಜಕಾರಣ ಮಾಡುವ ಸಿದ್ದರಾಮಯ್ಯ ಅವರಿಗೆ ಅಹಿಂದ ನಾಯಕನೆಂದು ಹೇಳಿಕೊಳ್ಳುವ ನೈತಿಕತೆ ಇಲ್ಲವಾಗಿದೆ ಎಂದರು.

ಕೆ.ಎಚ್.ಮುನಿಯಪ್ಪ ಕಾಂಗ್ರೆಸ್ಸಿನಲ್ಲಿ ಧ್ವನಿ ಇಲ್ಲದ ಹಿರಿಯ ವ್ಯಕ್ತಿ, ಅವರನ್ನು ಕೇಳುವವರಿಲ್ಲ, ನಾನೂ ಇದ್ದೇನೆ ಎಂಬುದನ್ನು ತೋರಿಸಿಕೊಳ್ಳಲು ಅವರು ಒಳ ಮೀಸಲಾತಿ ವಿಚಾರದಲ್ಲಿ ಸಮಾಜವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ.

2013ರ ವಿಧಾನಸಭಾ ಚುನಾವಣೆಯಲ್ಲಿ ಮಲ್ಲಿಕಾರ್ಜುನ ಖರ್ಗೆ, ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ, ಕೆ.ಎಚ್. ಮುನಿಯಪ್ಪ ಸೇರಿದಂತೆ ಅನೇಕ ಕಾಂಗ್ರೆಸ್ ನಾಯಕರು, ಬಿಜೆಪಿ ಮೋಸ ಮಾಡಿದೆ, ಸದಾಶಿವ ಆಯೋಗ ವರದಿ ಅನುಷ್ಠಾನ ಮಾಡಲಿಲ್ಲ, ನಾವು ಮಾಡುತ್ತೇವೆ, ಮತ ಕೊಡಿ ಎಂದಿದ್ದರು.

ಇವರನ್ನು ನಂಬಿ ಜನರು ಮತ ಹಾಕಿದರು, 2018ರವರೆಗೆ 5 ವರ್ಷ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದರು. ಒಳ ಮೀಸಲಾತಿ ಎಂದರೆ ಸಾಮಾಜಿಕ ನ್ಯಾಯ, ದಲಿತರಲ್ಲೇ ಹಿಂದುಳಿದವರಿಗೆ ಅದರ ಅವಶ್ಯಕತೆ ಇದೆ ಎಂಬುದಾಗಿ ಸುಪ್ರೀಂಕೋರ್ಟ್ ಆದೇಶ ನೀಡಿ ಒಂದು ವರ್ಷವಾದರೂ ಜಾರಿ ಮಾಡಲಿಲ್ಲ, ಕುಂಟುನೆಪವೊಡ್ಡಿ ಮತ್ತೊಂದು ಆಯೋಗ ನೇಮಿಸಿದರು.

ಅಧಿಕಾರಕ್ಕೆ ಬಂದ ಮೊದಲ ಕ್ಯಾಬಿನೆಟ್ ಸಭೆಯಲ್ಲೇ ಒಳ ಮೀಸಲಾತಿ ಜಾರಿ ಮಾಡುವುದಾಗಿ 2023ರ ವಿಧಾನಸಭಾ ಚುನಾವಣೆಯಲ್ಲೂ ಹೇಳಿದ್ದರು, 2 ವರ್ಷ ಕಳೆದರೂ ಏಕೆ ಮಾಡಿಲ್ಲ.

ಒಳ ಮೀಸಲಾತಿಗೆ ಆಗ್ರಹಿಸಿ ಆಗಸ್ಟ್ 1ರಂದು 30 ಜಿಲ್ಲೆಗಳಲ್ಲಿ ಸಾಂಕೇತಿಕ ಹೋರಾಟ ಮಾಡಿ ಮನವಿ ನೀಡಲಿದ್ದೇವೆ, ಆಗಸ್ಟ್ 11ರಂದು ವಿಧಾನಮಂಡಲದ ಅಧಿವೇಶನ ಆರಂಭದೊಳಗೆ ಜಾರಿ ಮಾಡದಿದ್ದರೆ, 16ರಿಂದ ಅಸಹಕಾರ ಚಳವಳಿ ನಡೆಸಿ ರಾಜ್ಯದ ಮಂತ್ರಿಗಳನ್ನು ರಸ್ತೆಮೇಲೆ ಓಡಾಡಲು ಬಿಡುವುದಿಲ್ಲ ಎಂದು ಎಚ್ಚರಿಸಿದರು.

# ಧರ್ಮಸ್ಥಳ ಪ್ರಕರಣ: ದೂರುದಾರನ ಹಿಂದಿರುವ ಶಕ್ತಿ ಬಯಲಿಗೆಳೆಯಬೇಕು

**ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಒತ್ತಾಯ**



ಮೈಸೂರು,ಜು.28(ಎಂಟಿವೈ)–ಧಾರ್ಮಿಕ ಸ್ಥಳ ಧರ್ಮಸ್ಥಳದಲ್ಲಿನ ಸರಣಿ ಹತ್ಯೆ ಕುರಿತು ಸರ್ಕಾರ ಎಸ್‌ಐಟಿ ರಚಿಸಿ, ತನಿಖೆ ನಡೆಸುತ್ತಿರುವುದು ಸ್ವಾಗತಾರ್ಹ. ಆದರೆ ದೂರುದಾರ ಅನಾಮಧೇಯ ವ್ಯಕ್ತಿ ಹಿಂದೆ ಯಾರಿದ್ದಾರೆ ಎಂಬ ಬಗ್ಗೆಯೂ ವಿಸ್ತೃತ ತನಿಖೆ ನಡೆಯಬೇಕೆಂದು ಮಾಜಿ ಸಚಿವ ಕೋಟೆ ಎಂ. ಶಿವಣ್ಣ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧರ್ಮಸ್ಥಳ ಧಾರ್ಮಿಕ ಕ್ಷೇತ್ರವಾಗಿದ್ದು, ಅಪಾರ ಭಕ್ತ ಸಮೂಹ ಒಳಗೊಂಡಿದೆ. ಅಲ್ಲಿ ಸರಣಿ ಹತ್ಯೆ ನಡೆದಿದ್ದು, ಕ್ಷೇತ್ರದ ಬಗ್ಗೆ ಅಪಪ್ರಚಾರ ನಡೆಸುವ ನಿರಂತರ ಷಡ್ಯಂತರ ನಡೆಯುತ್ತಿದೆ. ಎಸ್‌ಐಟಿ ನಡೆಸುತ್ತಿರುವ ತನಿಖೆಯಲ್ಲಿ ದೂರುದಾರನ ಹಿಂದೆ ಇರುವ ಶಕ್ತಿಗಳನ್ನು ಬಯಲಿಗೆಳೆಯಬೇಕು ಎಂದು ಮನವಿ ಮಾಡಿದರು.

ಧರ್ಮಸ್ಥಳ ಕ್ಷೇತ್ರ ಹಲವು ದಶಕಗಳಿಂದ ಸೇವಾ ಕಾರ್ಯ ಮಾಡುತ್ತಿದ್ದು, ಧರ್ಮಾಧಿಕಾರಿ ವೀರೇಂದ್ರ ಹೆಗ್ಡೆ ಅವರಿಗೆ ಕೇಂದ್ರ ಸರ್ಕಾರ ಅನೇಕ ಪುರಸ್ಕಾರಗಳನ್ನು ನೀಡಿದೆ. ಈಗ ಅವರ ವಿರುದ್ಧ ಅಪಪ್ರಚಾರ ಮಾಡುತ್ತಿರುವುದು ಸರಿಯಲ್ಲ ಎಂದರು.

ಎಸ್‌ಐಟಿ ಸಮಗ್ರ ತನಿಖೆ ನಡೆಸಿ ತನಿಖಾ ವರದಿ ನೀಡುವವರೆಗೂ ಧರ್ಮಸ್ಥಳ ಹಾಗೂ ವೀರೇಂದ್ರ ಹೆಗ್ಡೆ ಅವರ ವಿರುದ್ಧ ವಿನಾಕಾರಣ ಆರೋಪ ಮಾಡುವುದು ನಿಲ್ಲಬೇಕು. ಭಕ್ತಿ ಭಾವಗಳಿಂದ ಕೂಡಿರುವ ಕ್ಷೇತ್ರವಾದ ಧರ್ಮಸ್ಥಳದ ಪಾವಿತ್ರ್ಯತೆ ಉಳಿಯಬೇಕು. ಸರ್ಕಾರ ಸಹ ಶೀಘ್ರ ವರದಿ ಪಡೆದು ಸತ್ಯಾಂಶವನ್ನು ಜನರ ಮುಂದಿಡಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಬಿ.ಪಿ. ಬೋರೇಗೌಡ, ಎಸ್.ಎನ್. ಪದ್ಮಪ್ರಸಾದ್, ಬಿ.ವಿ. ಬಸವರಾಜು, ಕೆ. ರಮೇಶ್ ಇದ್ದರು.

## ನಾಳೆ, ನಾಡಿದ್ದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಜು.28– ಜುಲೈ 30ರಂದು ಬುಧವಾರ ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಸಿಲ್ಕ್ ಫ್ಯಾಕ್ಟರಿ ಫೀಡರ್ ಮತ್ತು ಜುಲೈ 31 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ 11 ಕೆ.ವಿ. ವಿದ್ಯಾರಣ್ಯಪುರಂ ಫೀಡರ್ ಭೂಗತ ಕೇಬಲ್ ಕಾಮಗಾರಿ ನಿಮಿತ್ತ ಎನ್.ಐ.ಇ ಕಾಲೇಜು, ಚಾಮುಂಡಿಪುರಂ ವೃತ್ತ, ಮಿಲ್ಕ್ ಸೆಂಟರ್ ರಸ್ತೆ, ಜೆ.ಎಲ್.ಬಿ ರಸ್ತೆ, ಮಾನಂದವಾಡಿ ರಸ್ತೆ, ಪೋಸ್ಟ್ ಆಫೀಸ್ ರಸ್ತೆ, ಪೊಲೀಸ್ ಕ್ವಾಟ್ರಸ್, ಸಿ.ಎಸ್.ಆರ್.ಟಿ.ಐ ಕ್ವಾಟ್ರಸ್ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು. ವಿದ್ಯಾರಣ್ಯಪುರಂ, ವಿಶ್ವೇಶ್ವರನಗರ, ವೀವರ್ಸ್ ಕಾಲೋನಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

## ತರಂಗಂ ನಾಟಕೋತ್ಸವಕ್ಕೆ ತೆರೆ

# ಸ್ವಸ್ಥ ಸಮಾಜಕ್ಕೆ ರಂಗಭೂಮಿ ಕೊಡುಗೆ ಇದೆ



ವಸ್ತ್ರ ವಿನ್ಯಾಸಕ ಮಹೇಶ್ ಹೆಬ್ಬಾಳು, ರಂಗಪ್ರಚಾರ ವಿನ್ಯಾಸಕ ವಿ.ರವಿ, ಯುವ ನಿರ್ದೇಶಕ ಪ್ರದೀಪ್ ಹಾಸನ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಜು.28(ವಿವಿಹೆಚ್)–ರಂಗಭೂಮಿ ಪ್ರತಿಭೆ ಎಂಬ ಸಣ್ಣ ಗಿಡಕ್ಕೆ ಸತ್ವಯುತವಾದ ನೀರು, ಗೊಬ್ಬರ ಹಾಕಿ ಅವುಗಳನ್ನು ಹೆಮ್ಮರವಾಗಿ ಬೆಳೆಸುವ ಮೂಲಕ ಸ್ವಸ್ಥ ಸಮಾಜಕ್ಕೆ ಉತ್ತಮ ಪ್ರಜೆಗಳನ್ನು ನೀಡುವ ಒಂದು ಶಕ್ತಿಯಾಗಿದೆ ಎಂದು ಕಾವಾ ಆಡಳಿತಾಧಿಕಾರಿ ನಿರ್ಮಲಾ ಮಠಪತಿ ತಿಳಿಸಿದರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ತರಂಗಂ ಟ್ರಸ್ಟ್ ತಲಕಾಡು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಕಾರದಲ್ಲಿ ಆಯೋಜಿಸಿದ್ದ ತರಂಗಂ ನಾಟಕೋತ್ಸವ 2025ರ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಬದಲಾದ ವ್ಯವಸ್ಥೆಯಲ್ಲಿ ಅಂಕಗಳ ಆಧಾರದಲ್ಲಿ ಜೀವನ ನಡೆಸುತ್ತಿರುವ ಈ ಕಾಲಘಟ್ಟದಲ್ಲಿ ರಂಗಭೂಮಿ ಏನನ್ನು ನೀಡಿದೆ ಎಂಬುವವರಿಗೆ ಈ ವೇದಿಕೆ ಉತ್ತರವಾಗಿದೆ. ರಂಗಭೂಮಿ ಮನುಷ್ಯ–ಮನುಷ್ಯರ ನಡುವೆ ಸಂಬಂಧವನ್ನು ಗಟ್ಟಿಗೊಳಿಸುತ್ತದೆ. ಎಲ್ಲರನ್ನು ಒಂದೆಡೆ ಸೇರಿಸುವ, ತೆರೆಮರೆಯ ಕಲೆಗಳಿಗೆ ಉತ್ತಮ ವೇದಿಕೆ ಒದಗಿಸಿ ಅವರ ಭವಿಷ್ಯ ರೂಪಿಸುವಲ್ಲಿ ರಂಗಭೂಮಿ ಪಾತ್ರ ಬಹಳ ದೊಡ್ಡದಿದೆ. ಇದಕ್ಕೆ ಇಂದಿನ ಸಾಧಕರಿಗೆ ಏರ್ಪಡಿಸಿರುವ ಸನ್ಮಾನವೇ ಸಾಕ್ಷಿಯಾಗಿದೆ ಎಂದು ತಿಳಿಸಿದರು.

ತರಂಗಂ ಇಂದು ತೆರೆಮರೆಯಲ್ಲಿ ಕೆಲಸ ಮಾಡುವ ಪ್ರತಿಭೆಗಳನ್ನು ಮುಖ್ಯವೇದಿಕೆಗೆ ಪರಿಚಯಿಸುವ ಕೆಲಸ ಮಾಡುತ್ತಿದೆ. ಇದು ರಂಗಭೂಮಿಯ ಮಾಧ್ಯಮವಾಗಿ ಮಾಡುತ್ತಿರುವ ಕೆಲಸ ನಿರಂತರವಾಗಿ ಮುಂದುವರಿಯಲಿ ಎಂದು ಆಶಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಮಾತನಾಡಿ, ರಂಗಭೂಮಿಗೆ ತಮ್ಮ ಜೀವನ ಅರ್ಪಿಸಿರುವವರನ್ನು ಗುರ್ತಿಸಿ ಸನ್ಮಾನ ಮಾಡಿರುವುದು ನಿಜಕ್ಕೂ ಶ್ಲಾಘನೀಯ. ತರಂಗಂ ಇದೇ ರೀತಿ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಯುವ ಪ್ರತಿಭೆಗಳನ್ನು ಹುಟ್ಟುಹಾಕುವ ಕೆಲಸ ಮಾಡಬೇಕು ಎಂದು ಹೇಳಿದರು.

ದೃಶ್ಯಕಲಾ ವಿನ್ಯಾಸಕ ಉಲ್ಲಾಸ್ ದೇವನೂರು ಮಾತನಾಡಿ, ತರಂಗಂ, ರಂಗಭೂಮಿಯ ಒಂದು ಹೊಸ ಅಲೆಯಾಗಿದೆ. ಪ್ರಸಕ್ತ ನಡೆಯುತ್ತಿರುವ ವಿದ್ಯಮಾನಗಳನ್ನು, ತಪ್ಪುಗಳನ್ನು ಕೇಳುವ, ಸಮಾಜವನ್ನ ಬಡಿದೆಬ್ಬಿಸುವ ಕೆಲಸವನ್ನು ಮಾಡಬೇಕು. ಈ ಸಮಾಜ ಸೇವೆ ರಾಜ್ಯದ ಉದ್ದಗಲಕ್ಕೂ ತರಂಗಂ ವಿಸ್ತರಿಸಬೇಕು ಎಂದರು.

ಗುಬ್ಬಿ ವೀರಣ್ಣ ಪೀಠದ ರಂಗತಜ್ಞ ಅರಸೀಕೆರೆ ಯೋಗಾನಂದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ.ಸುದರ್ಶನ್, ತರಂಗಂ ಟ್ರಸ್ಟ್ ಸಂಸ್ಥಾಪಕ ಗುರು ತಲಕಾಡು ಉಪಸ್ಥಿತರಿದ್ದರು.

ಈ ವೇಳೆ ವಸ್ತ್ರ ವಿನ್ಯಾಸಕ ಮಹೇಶ್ ಹೆಬ್ಬಾಳು, ರಂಗಪ್ರಚಾರ ವಿನ್ಯಾಸಕ ವಿ.ರವಿ, ಯುವ ನಿರ್ದೇಶಕ ಪ್ರದೀಪ್ ಹಾಸನ ಅವರಿಗೆ ತರಂಗಂ ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು.

ನಂತರ ಪಿ.ಲಂಕೇಶ್ ರಚನೆಯ, ಪ್ರದೀಪ್ ಹಾಸನ ನಿರ್ದೇಶನದ, ಹಾಸನ ವಿಶ್ವಪಥ್ ಚಾರಿಟಬಲ್ ಟ್ರಸ್ಟ್ ತಂಡದವರಿಂದ ಪೊಲೀಸರಿದ್ದಾರೆ ಎಚ್ಚರಿಕೆ ನಾಟಕ ಪ್ರದರ್ಶನಗೊಂಡಿತು.

# ಅಪಘಾತಗಳು ಸಂಭವಿಸುತ್ತಿರುವ ರಸ್ತೆಗಳ ಕಡೆ ಹೆಚ್ಚು ಗಮನಹರಿಸಿ



ಮೈಸೂರು,ಜು.28– ಅಪಘಾತಗಳು ಸಂಭವಿಸುತ್ತಿರುವ ರಸ್ತೆಗಳ ಕಡೆ ಹೆಚ್ಚು ಗಮನಹರಿಸಬೇಕು. ರಾಷ್ಟ್ರೀಯ ಹೆದ್ದಾರಿ, ಜಿಲ್ಲಾ ಹೆದ್ದಾರಿಗಳಲ್ಲದೆ ಹಳ್ಳಿ ರಸ್ತೆಗಳನ್ನು ಗುರುತಿಸ ಬೇಕು, ಹಳ್ಳಿಗಳಲ್ಲಿಯೂ ಕೆಲವು ಕಡೆ ಕಪ್ಪು ಚುಕ್ಕೆಗಳಿದ್ದು, ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಹೆದ್ದಾರಿಗಳಲ್ಲಿ ಎಲ್ಲೆಲ್ಲಿ ಅಪಘಾತ ಆಗಿದೆ ಅವುಗಳನ್ನು ಗುರುತಿಸಿ ಅಪಘಾತ ತಪ್ಪಿಸಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಿ ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಹೇಳಿದರು.

ಇಂದು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ರಾಷ್ಟ್ರೀಯ ಹೆದ್ದಾರಿಯಲ್ಲದೆ ಜಿಲ್ಲಾ ಹೆದ್ದಾರಿಯಾದ ಬನ್ನೂರು, ಬಸವಳ್ಳಿ ಗೇಟ್, ಕೋಟೆಯ ಹೊಮ್ಮರನಹಳ್ಳಿ, ಹ್ಯಾಂಡ್‌ಪೋಸ್ಟ್ ಗಳಲ್ಲಿ ಅನೇಕ ಅಪಘಾತ ಸಂಭವಿಸಿರುವುದರಿಂದ ಕಪ್ಪು ಚುಕ್ಕೆ ಎಂದು ನೀಡಲಾಗಿದ್ದು, ಅವುಗಳನ್ನು ಪರಿಶೀಲಿಸಿ ರಸ್ತೆ ಸುರಕ್ಷೆ ಬಗ್ಗೆ ನಿಮ್ಮ ಇಲಾಖೆಗೆ ಕಳುಹಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ರಾಷ್ಟ್ರೀಯ ಹೆದ್ದಾರಿಯ ಕೆಲವು ಕಡೆ ಚಿಕ್ಕ ಚಿಕ್ಕ ಅಪಘಾತ ಆಗುತ್ತಿದ್ದು, ಮುಖ್ಯರಸ್ತೆ, ರಾಷ್ಟ್ರೀಯ ಹೆದ್ದಾರಿ, ಜಿಲ್ಲಾ ಹೆದ್ದಾರಿಗಳಲ್ಲಿ ರಸ್ತೆ ಸುರಕ್ಷತೆ ಎಂದು ಅಲ್ಲಲ್ಲಿ ಮಾಡಿಕೊಂಡು ಬರಲಾಗಿದ್ದು, ಹಳ್ಳಿಗಳ ರಸ್ತೆಗಳಲ್ಲಿ ಸುರಕ್ಷತೆ ಬಗ್ಗೆ ನಿರ್ದಿಷ್ಟ ಗಮನ ಕೊಡದೆ ಇರುವಂತಹ ಹಳ್ಳಿ ರಸ್ತೆಗಳಲ್ಲಿ ಅಪಘಾತ ಹೆಚ್ಚಾಗಿ ಸಂಭವಿಸುತ್ತಿದ್ದು, ಹಳ್ಳಿಗಳಲ್ಲಿ ಆಗಿರುವಂತಹ ಅಪಘಾತಗಳ ಬಗ್ಗೆ ತನಿಖೆ ಮಾಡಿದರೆ ಅದನ್ನು ಸಹ ಸರಿ ಮಾಡಬಹುದು ಎಂದು ಹೇಳಿದರು.

ಇನ್ನೂ ಕೆಲವು ಕಡೆ ರಸ್ತೆ ಕಾಮಗಾರಿಯಾಗದೆ ಮುಕ್ಕಾಲು ಭಾಗ ಪೂರ್ಣಗೊಂಡಿರುವ ಹಾಗೂ ಅರ್ಧಕ್ಕೆ ನಿಂತಿರುವ ಕಾಮಗಾರಿಯನ್ನು ಟೆಂಡರ್ ಕರೆದು ಸಂಪೂರ್ಣ ಮಾಡಬೇಕು. ದಸರಾ ಬರುವ ಮುಂಚೆ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕು ಎಂದರು.

ಲಲಿತಮಹಲ್‌ನಲ್ಲಿ ಹೆಚ್ಚು ಜಾಗ ಇರುವುದರಿಂದ ರಸ್ತೆ ಬದಿ ಇರುವಂತಹ ಫುಡ್ ಕೋರ್ಟ್‌ಗಳಿಗೆ ಪ್ರತ್ಯೇಕ ಫುಡ್ ಕಾರ್ನರ್‌ಗಳನ್ನು ಸ್ಥಾಪಿಸಲು, ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡಿಕೊಡಲು ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳ ಜೊತೆ ಮಾತನಾಡಿ, ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲಾಗುವುದು ಎಂದು ತಿಳಿಸಿದರು.

ರಸ್ತೆ ವೃತ್ತ ಬದಿಗಳಲ್ಲಿ ಹೆಚ್ಚು ಅಪಘಾತವಾಗುತ್ತಿದ್ದು, ವೃತ್ತ ಇರುವ ಕಡೆ, ವೃತ್ತ ಸುತ್ತಮುತ್ತ ಟರ್ನಿಂಗ್ ಪಾಯಿಂಟ್‌ಗಳು ಇರುವ ಕಡೆ, ವ್ಯಾಪಾರ ಮಾಡುತ್ತಿರುವುದನ್ನು ತೆರವುಗೊಳಿಸಬೇಕು. ಅಪಘಾತಗಳು ಸಂಭವಿಸುವ ವೃತ್ತಗಳ ಸುತ್ತ ಹೆಚ್ಚು ಗಮನ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಪೊಲೀಸ್ ಅಧಿಕಾರಿಗಳು, ನ್ಯಾಷನಲ್ ಹೈವೆ ಅಥಾರಿಟಿಯ ಅಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಕರ್ತವ್ಯಲೋಪವಿಲ್ಲದೇ ಕೆಲಸ ಮಾಡುವುದು ವೃತ್ತಿ ಜೀವನದ ಸಾರ್ಥಕತೆ

**ವಿಧಾನ ಪರಿಷತ್ ಸದಸ್ಯ ಡಾ॥ ಡಿ.ತಿಮ್ಮಯ್ಯ ಅಭಿಪ್ರಾಯ**



ಮೈಸೂರು ಮಹಾರಾಜ ಕಾಲೇಜಿನ ಹೊಸ ಕಟ್ಟಡದಲ್ಲಿ ಸೋಮವಾರ ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಹಾಗೂ ನವ ವಿಶ್ವಮಾನವ ಟ್ರಸ್ಟ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು ವಿವಿಯ ನಿವೃತ್ತ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು

ಮೈಸೂರು, ಜು.28(ಎಂಟಿವೈ)–ಕರ್ತವ್ಯಲೋಪ ಇಲ್ಲದೇ ಕೆಲಸ ಮಾಡಿದರೆ ವೃತ್ತಿ ಜೀವನ ಸಾರ್ಥಕವಾಗುತ್ತದೆ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಅಭಿಪ್ರಾಯಪಟ್ಟಿದ್ದಾರೆ.


ಮೈಸೂರು ಮಹಾರಾಜ ಕಾಲೇಜಿನ ಹೊಸ ಕಟ್ಟಡದಲ್ಲಿ ಸೋಮವಾರ ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಹಾಗೂ ನವ ವಿಶ್ವಮಾನವ ಟ್ರಸ್ಟ್ ಆಯೋಜಿಸಿದ್ದ ಮೈಸೂರು ವಿವಿಯ ನಿವೃತ್ತ ಸಿಬ್ಬಂದಿಗಳಾದ ಡಿ. ಶಿವಣ್ಣ, ಪ್ರೊ. ಹೆಚ್.ಕಮಲಾ, ಡಾ.ಪಿ.ಕೃಷ್ಣಯ್ಯ, ಡಾ.ಆರ್. ಸಿದ್ದರಾಜು, ಗೌರಮ್ಮ ಅವರ ಬೀಳ್ಕೊಡುಗೆ ಹಾಗೂ ಮೈವಿವಿ ಸಿಂಡಿಕೇಟ್ ಸದಸ್ಯ ಪ್ರೊ.ಶಬ್ಬೀರ್ ಮುಸ್ತಫಾ ಅವರ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಸರ್ಕಾರಿ ನೌಕರಿ ಇರಲಿ ಅಥವಾ ಖಾಸಗಿ ನೌಕರಿ ಇರಲಿ ಸೇವಾ ಮನೋಭಾವದಿಂದ ಕೆಲಸ ಮಾಡಬೇಕು. ಎಲ್ಲರಿಗೂ ಸರ್ಕಾರಿ ನೌಕರಿ ಸಿಗುವುದಿಲ್ಲ. ಶೇ.1–5 ರಷ್ಟು ಮಂದಿಗೆ ಮಾತ್ರ ಆ ಅದೃಷ್ಟ ಇರುತ್ತದೆ. ಅದಕ್ಕೆ ಅವರ ಪರಿಶ್ರಮ ಕೂಡ ಇರುತ್ತದೆ. ಈ ರೀತಿ ಕೆಲಸ ಪಡೆದವರು ಸಕಾರಾತ್ಮಕ ಧೋರಣೆಯೊಂದಿಗೆ ಸಮಾಜಕ್ಕೆ ನೆರವಾಗಬೇಕು. ಪ್ರತಿಯೊಬ್ಬರೂ ಉದಾರತೆ, ಒಳ್ಳೆಯತನ ಮತ್ತು ವಿಶಾಲ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಮಹಾರಾಜ ಕಾಲೇಜಿನಲ್ಲಿ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ.ಎಸ್. ರಾಧಾಕೃಷ್ಣನ್ ಅವರು ಹೊರಟಾಗ ಶಿಷ್ಯರೇ ಸಾರೋಟಿನಲ್ಲಿ ಕೂರಿಸಿ, ರೈಲ್ವೆ ನಿಲ್ದಾಣದವರೆಗೆ ಎಳೆದುಕೊಂಡು ಹೋಗಿ ಬೀಳ್ಕೊಟ್ಟಿದ್ದು ಸದಾ ಸ್ಮರಣೆಯಲ್ಲಿ ಇರುತ್ತದೆ. ಇಂತಹ ಆದರ್ಶ ಎಲ್ಲರಲ್ಲೂ ಇರಬೇಕು ಎಂದರು.

ವಿಜಯನಗರ ಎಸಿಪಿ ಪಿ. ರವಿಪ್ರಸಾದ್ ಮಾತನಾಡಿ, ಮಹಾರಾಜ ಕಾಲೇಜಿಗೆ ದೊಡ್ಡ ಪರಂಪರೆ ಇದೆ. ನಾನು ಇದೇ ಕಾಲೇಜಿನ ವಿದ್ಯಾರ್ಥಿ. ನಮ್ಮ ಬ್ಯಾಚಿನ 27 ಮಂದಿ ಸಬ್ ಇನ್‌ಸ್ಪೆಕ್ಟರ್‌ಗಳಾಗಿ ಆಯ್ಕೆಯಾಗಿದ್ದೇವೆ. ಹೀಗಾಗಿ ವಿದ್ಯಾರ್ಥಿಗಳು ಉತ್ತಮ ಗುರುಗಳ ಮಾರ್ಗದರ್ಶನ ಪಡೆದು ಮುಂದೆ ಬರಬೇಕು. ಮೊಬೈಲ್ ಬಳಕೆ ತ್ಯಜಿಸಿ, ಗ್ರಂಥಾಲಯಕ್ಕೆ ಹೋಗಿ ಪುಸ್ತಕಗಳನ್ನು ಓದುವ ಮೂಲಕ ಜ್ಞಾನ ವೃದ್ಧಿಸಿಕೊಳ್ಳುವಂತೆ ಸಲಹೆ ನೀಡಿದರು.

ಇದೇ ವೇಳೆ ಮಹಾರಾಜ ಕಾಲೇಜಿನ ಅಧೀಕ್ಷಕರಾದ ಉಮೇಶ್ ಚಂದ್ರ ವಿನೋದ್, ವರ್ಗಾವಣೆಯಾದ ಚಂದ್ರಶೇಖರ್ ಹಾಗೂ ಹೇಮಂತಕುಮಾರ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾರಾಜ ಕಾಲೇಜು ಪ್ರಾಂಶುಪಾಲ ಪ್ರೊ.ಹೆಚ್.ಸಿ.ದೇವರಾಜೇಗೌಡ ವಹಿಸಿದ್ದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವೇದಿಕೆಯ ಅಧ್ಯಕ್ಷ ಆರ್. ವಾಸುದೇವ, ಭಾಸ್ಕರ್, ವಿನೋದ್, ಕೆ ಗಣೇಶ್, ಚಿದಾನಂದ, ನವೀನ್ ಇನ್ನಿತರರು ಉಪಸ್ಥಿತರಿದ್ದರು.

## ಡಿ.ಎ. ಹೇಮಚಂದ್ರಗೆ ಪಿಹೆಚ್.ಡಿ ಪದವಿ



**ಮೈಸೂರು:** ಡಾ. ಎಸ್.ಡಿ. ಶಶಿಕಲಾ ಅವರ ಮಾರ್ಗದರ್ಶನದಲ್ಲಿ ಡಿ.ಎ. ಹೇಮಚಂದ್ರ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಹುಟ್ಟು ಹಬ್ಬದ ಶುಭಾಶಯಗಳು

ಚೇತನ್.ಪಿ



ಶುಭಹಾರೈಸುವವರು: ತಂದೆ–ತಾಯಿ, ತಂಗಿ, ಅಜ್ಜಿ ಹಾಗೂ ಅಪಾರ ಬಂಧು–ಬಾಂಧವರು ಹಾಗೂ ಬಂಚಳ್ಳಿಹುಂಡಿ ಗ್ರಾಮಸ್ಥರು



## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಮೇ. ಬಿಂದು ವೆಂಚರ್ಸ್, ಪರವಾಗಿ ಇದರ ಪಾಲುದಾರರಾದ ಲೇಟ್ ಘವೇರ್ ಚಂದ್ ರವರ ಮಗ ಶ್ರೀ. ಜಯೇಶ್ ಚೆಡ್ ಪಾ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್ ಸ್ವತ್ತಿನ ವಿವರ**

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಲಲಿತಾದ್ರಿಪುರ ಗ್ರಾಮದಲ್ಲಿ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತವಾಗಿರುವ ಸರ್ವೆ ನಂ. 156/1, ರಲ್ಲಿ ನಿರ್ಮಿಸಲಾದ ಬಿಂದು ಪ್ರೀಮಿಯೋ ಸಿಗ್ನೇಚರ್ ಲೇಔಟ್‌ನ ನಿವೇಶನ ಸಂಖ್ಯೆ 483ರ ಸ್ವತ್ತಿನ ವಿವರ– ವಿಸ್ತೀರ್ಣ: ಪೂ–ಪ 15 (ಮೀ), ಉ–ದ 9 (ಮೀ) ಚೆಕ್ಕುಬಂದಿ– ಪೂರ್ವಕ್ಕೆ: 9.0 ಮೀ ರೋಡ್, ಪಶ್ಚಿಮಕ್ಕೆ: ನಿವೇಶನ ನಂ. 496, ಉತ್ತರಕ್ಕೆ: ನಿವೇಶನ ನಂ. 482, ದಕ್ಷಿಣಕ್ಕೆ : ನಿವೇಶನ ನಂ. 484. & ನಿವೇಶನ ಸಂಖ್ಯೆ 484ರ ಸ್ವತ್ತಿನ ವಿವರ–ವಿಸ್ತೀರ್ಣ: ಪೂ–ಪ 15 (ಮೀ), ಉ–ದ 9 (ಮೀ) ಚೆಕ್ಕುಬಂದಿ–ಪೂರ್ವಕ್ಕೆ: 9.0 ಮೀ ರೋಡ್, ಪಶ್ಚಿಮಕ್ಕೆ: ನಿವೇಶನ ನಂ. 495, ಉತ್ತರಕ್ಕೆ: ನಿವೇಶನ ನಂ. 483, ದಕ್ಷಿಣಕ್ಕೆ : ನಿವೇಶನ ನಂ. 485.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು, ಎಸ್‌ಎಲ್‌ಡಿ ಲಾ ಫರ್ಮ್,
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641. email: sldlawfirm2021@gmail.com

## 4ನೇ ವರ್ಷದ ಪುಣ್ಯಸ್ಮರಣೆ



ಜನನ: 18-05-1951 ಮರಣ: 28-07-2021

**ಶ್ರೀಮತಿ ಕಮಲ ಎಂ.**

ನೀವು ನಮ್ಮನ್ನು ಅಗಲಿ ಇಂದಿಗೆ 4 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಪತಿ–ಎಂ.ಎಲ್.ರಾಮಲಿಂಗಯ್ಯ
ಮೈಸೂರು ವಿಶ್ವವಿದ್ಯಾನಿಲಯ (ನಿವೃತ್ತ)
ಹಾಗೂ ಸಮಸ್ತ ಕುಟುಂಬವರ್ಗದವರು

## 5ನೇ ವರ್ಷದ ಪುಣ್ಯಸ್ಮರಣೆ



**ಶ್ರೀ ಎ.ನೀಲಕಂಠ**
(ಲೇ. ಅಂಜಿನಪ್ಪನವರ ಮಗ)
ನಂ.1/2 ಮಾರುತಿ ನಿಲಯ, ಪಂಚಾಪತಿ ರಸ್ತೆ, ಜಯನಗರ, ಮೈಸೂರು.
ಅಧ್ಯಕ್ಷರು, ನಾಯಕರ ಕ್ಷೇಮಾಭಿವೃದ್ಧಿ ಸಂಘ (ರಿ) ಹಾಗೂ ಶಾಪ್ ಸೂಪರಿಂಟೆಂಡ್, ಸದರನ್ ರೈಲ್ವೆ.
ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷ ಕಳೆದರೂ ಸಹ ಸದಾ ನಿಮ್ಮ ನೆನಪಿನಲ್ಲಿ ಕಾಲ ಕಳೆಯುತ್ತಾ ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ

ಇಂತಿ ದುಃಖತಪ್ತರು: ಎಂ.ಎನ್. ಯೋಗೇಂದ್ರ, ಸುನಂದ, ಸಾಹಸ್, ಧನುಶ್ರೀ, ದಿಯಾ ನಾಯಕ, ಅಗಸ್ತ್ಯ, ನಂದನ್ ನಾಯಕ, ಕುಸುಮ, ಜಯರಾಮ್, ಪವನಶ್ರೀ.

## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ. ಮನೀಶ್ ಹಿಂದೂಜಾ ರವರ ಧರ್ಮಪತ್ನಿ ಶ್ರೀಮತಿ ರಿಯಾ ಎಂ. ಹಿಂದೂಜ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು, ದೇವರಾಜ ಮೊಹಲ್ಲಾ, ವಿಜಯನಗರ 1ನೇ ಹಂತದಲ್ಲಿರುವ ಖಾಲಿ ನಿವೇಶನ ಸಂಖ್ಯೆ : 1095, ಪ್ರಸ್ತುತ ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೊಳಪಟ್ಟಿದ್ದು, ಪಿಐಡಿ ಸಂಖ್ಯೆ 79962 ಮತ್ತು ವಾರ್ಡ್ ಸಂಖ್ಯೆ 20 ರ ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ: 12.00 ಮೀಟರ್ ಮತ್ತು ಉತ್ತರ–ದಕ್ಷಿಣ: 9.00 ಮೀಟರ್, ಒಟ್ಟು ವಿಸ್ತೀರ್ಣ: 108 ಚದರ ಮೀಟರ್‌ಗಳುಳ್ಳ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ: ರಸ್ತೆ ; ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 1088 ; ಉತ್ತರಕ್ಕೆ: ನಿವೇಶನ ಸಂಖ್ಯೆ 1094 ಮತ್ತು ದಕ್ಷಿಣಕ್ಕೆ: ನಿವೇಶನ ಸಂಖ್ಯೆ 1096.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್, ನಂ. 1416, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641
email: sldlawfirm2021@gmail.com



## ನಿಧನ




**ಶ್ರೀಮತಿ ಜಯಮ್ಮ**

ಮೈಸೂರು ಜಯನಗರದ ಕೆಂಪಲಿಂಗಪ್ಪನವರ ಜವರೇಗೌಡರ ದ್ವಿತೀಯ ಪುತ್ರರಾದ ಚಿಕ್ಕನಿಂಗಯ್ಯ ಅವರ ಧರ್ಮಪತ್ನಿ ಶ್ರೀಮತಿ ಜಯಮ್ಮ ಅವರು ದಿ. 28.7.2025 ರ ಸೋಮವಾರ ಸಂಜೆ ನಿಧನರಾದರು. ಇವರ ಅಂತ್ಯಕ್ರಿಯೆ ದಿ. 29.7.2025 ರ ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ ಕೆ.ಜಿ. ಕೊಪ್ಪಲು ರುದ್ರಭೂಮಿ(ಕಾವೇರಿ ಶಾಲೆ ಪಕ್ಕ)ಯಲ್ಲಿ ನೆರವೇರಲಿದೆ.

ದುಃಖತಪ್ತರು:
ಪತಿ: ಚಿಕ್ಕನಿಂಗಯ್ಯ, ಮಕ್ಕಳು: ಸುರೇಶ್, ಸಿ. ಭಾಸ್ಕರ್, ಪೂರ್ಣಿಮಾ, ಅಳಿಯ, ಮೊಮ್ಮಕ್ಕಳು, ಕುಟುಂಬ ವರ್ಗ ಹಾಗೂ ಗ್ರಾಮಸ್ಥರು, ಜಯನಗರ, ಮೈಸೂರು

## 23ನೇ ವರ್ಷದ ಸವಿನೆನಪು



**ನಾಗಾಭರಣ್.ಬಿ.ಓ (ಸಂತೋಷ್)**

ಜನನ: 15.05.1984 ಮರಣ: 29.07.2002

ನೀನು ನಮ್ಮನ್ನಗಲಿ ಇಂದಿಗೆ 23 ವರ್ಷ ಕಳೆದರೂ ನಿನ್ನ ನೆನಪು ಮಾತ್ರ ದಿನವೂ ಕಾಡುತ್ತಲಿದೆ ಎಂದೆಂದಿಗೂ ಸದಾ ನಿನ್ನ ನೆನಪಿನಲ್ಲಿರುವ ನಿನ್ನ ತಂದೆ
ಬಿ.ಓಂಕಾರ್ ಪ್ರಸಾದ್ Ex-Deputy Mayor,
ತಾಯಿ ಎಂ.ಎನ್.ರಾಜೇಶ್ವರಿ,
ಕುಮಾರಿ ಆಕರ್ಷ ಮತ್ತು ಕುಟುಂಬವರ್ಗದವರು



## ಪತ್ರಿಕಾ ಪ್ರಕಟಣೆಗಾಗಿ

ಈ ಮೂಲಕ ಸಮಸ್ತ ಜನರಿಗೆ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಮಂಡ್ಯ ಜಿಲ್ಲೆ, ಗೊರವನಹಳ್ಳಿ ಅಂಚೆ, ಮದ್ದೂರು ತಾಲ್ಲೂಕು, ಚನ್ನಸಂದ್ರ ಗ್ರಾಮ, ಮನೆ ನಂ.99 ರಲ್ಲಿ ವಾಸವಾಗಿರುವ ಶ್ರೀ ಕಿರಣ್ ಕುಮಾರ್ ಸಿ.ಎಮ್. ರವರ ಧರ್ಮಪತ್ನಿಯಾದ ಸುಮಾರು 39 ವರ್ಷದ ಶ್ರೀಮತಿ ಶಿಲ್ಪಶ್ರೀ ಕೆ.ಎನ್. ರವರು ಈ ಕೆಳಗೆ ನಮೂದು ಮಾಡಿರುವ ಷೆಡ್ಯೂಲ್ ನಿವೇಶನವನ್ನು ಬೆಂಗಳೂರು ದಕ್ಷಿಣ–560029, ಬಿ.ಟಿ.ಎಮ್. ಲೇಔಟ್, 1ನೇ ಹಂತ, 10ನೇ ಮುಖ್ಯ ರಸ್ತೆ, ವಾಟರ್ ಟ್ಯಾಂಕ್ ಎದುರು, ಸ್ಕಂದ ಎಂಬ ನಾಮಾಂಕಿತದ ಮನೆ ನಂ. 75 ರಲ್ಲಿ ವಾಸವಾಗಿರುವ ಲೇಟ್ ಎಸ್.ಆರ್.ರಾಜು ರವರ ಧರ್ಮಪತ್ನಿ ಸುಮಾರು 68 ವರ್ಷದ ಶ್ರೀಮತಿ ನಿರ್ಮಲ @ ನಿರ್ಮಲ ರಾಜು ರವರಿಂದ ಖಾಲಿ ನಿವೇಶನವನ್ನು ಖರೀದಿಗೆ ತೆಗೆದುಕೊಳ್ಳಲು ಬಯಸಿರುತ್ತಾರೆ. ಈ ನಿವೇಶನ ಸಂಬಂಧ ಯಾರಿಗಾದರೂ ಯಾವುದೇ ಹಕ್ಕು, ಅಧಿಕಾರ ಮತ್ತು ಹಿತಾಸಕ್ತಿ ಉಳ್ಳವರು ಇದ್ದರೆ ಈ ನೋಟೀಸಿನ ದಿನಾಂಕದಿಂದ 7 ದಿನಗಳ ಒಳಗೆ ಈ ಮೇಲ್ಕಂಡ ವಕೀಲರನ್ನು ಸಂಪರ್ಕಿಸಲು ಸೂಚಿಸಿದೆ. 7 ದಿನಗಳ ಒಳಗೆ ಯಾರೊಬ್ಬರೂ ದಾಖಲೆ ಸಮೇತ ಹಕ್ಕು ಸಾಧಿಸುವವರು ಬಾರದೇ ಇದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ನಿವೇಶನವನ್ನು ಖರೀದಿಗೆ ತೆಗೆದುಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ ಎಂದು ತಿಳಿಸಿ ಸಮಸ್ತ ಜನರಿಗೆ ಈ ನೋಟೀಸನ್ನು ನೀಡುತ್ತಿದ್ದೇನೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ ಬ್ಯಾಂಕ್ ಮತ್ತು ಪಬ್ಲಿಕ್ ಸೆಕ್ಟರ್ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್(ರಿ), ಕೇರ್ಗಳ್ಳಿ, (ಆರ್.ಟಿ.ನಗರ), ಬಡಾವಣೆಯಲ್ಲಿರುವ ಸ್ವತ್ತಿನ ಸಂಖ್ಯೆ 1919028959, ಸ್ವತ್ತಿನ ಹಳೆಯ ಸಂಖ್ಯೆ: 286 ಹಾಗೂ ಸ್ವತ್ತಿ ನಿರ್ಧಾರಣ ಸಂಖ್ಯೆ 67/286 ನ್ನು ಹೊಂದಿರುವ ಅಳತೆ ಪೂರ್ವದಿಂದ ಪಶ್ಚಿಮಕ್ಕೆ 50.00 ಅಡಿ ಉತ್ತರದಿಂದ ದಕ್ಷಿಣಕ್ಕೆ 80+80.6/2.0 ಅಡಿ ಅಳತೆಯ ಒಟ್ಟು 4012.50 ಚದರ ಅಡಿಗಳು ಈ ನಿವೇಶನದ ಚೆಕ್ಕುಬಂದಿ: ಪೂರ್ವಕ್ಕೆ: ನಿವೇಶನ ಸಂಖ್ಯೆ: 287 ; ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 285 ; ಉತ್ತರಕ್ಕೆ: ಖಾಸಗಿ ಜಾಗ ; ದಕ್ಷಿಣಕ್ಕೆ: ರಸ್ತೆ.

Sd/- Sri M.N.Sridhara, Advocate
KAR No. 2883/2008, No. 73,
Cellar Portion, Madvesha
Complex, Mahadeshwara Road,
Nazarbad, Mysore.
ಮೈಸೂರು Mob: 99861-03433
ದಿನಾಂಕ: 28–7–2025

## ಹೆಸರು ಬದಲಾವಣೆ

ಸುಜ್ಞಾನ್ ಸುಮಂತ್ ಶ್ಯಾಮನೂರ್ S/O ಎಸ್.ಪಿ ಸುಮಂತ್ ಆದ ನಾನು #402, ಬಿಗೋನಿಯ, ಜಾವ ಮೇನ್ ರೋಡ್, ಸಂಕಲ್ಪ ಸೆಂಟ್ರಲ್ ಪಾರ್ಕ್, ಯಾದವಗಿರಿ, ಮೈಸೂರು – 570020 ಇಲ್ಲಿ ವಾಸವಾಗಿದ್ದು ನನ್ನ ಹೆಸರನ್ನು, ಸುಜ್ಞಾನ್ ಸುಮಂತ್ ಶಾಮನೂರ್‌ನಿಂದ ಸುಜ್ಞಾನ್ ಸುಮಂತ್ ಶ್ಯಾಮನೂರ್ ಎಂದು ನೋಟರಿ ಜಿ. ಮಂಜುಳ ಅವರ ಸಮ್ಮುಖದಲ್ಲಿ ದಿನಾಂಕ : 28.07.2025 ರಂದು ಬದಲಾಯಿಸಿಕೊಂಡಿರುತ್ತೇನೆ.

ಸಹಿ /– ಸುಜ್ಞಾನ್ ಸುಮಂತ್ ಶ್ಯಾಮನೂರ್

## PUBLIC NOTICE

My client is intending to purchase, the below mentioned Schedule Property from **Dr. A.S. Rajagopal,** Son of Dr. A.T Srinivasa Iyengar, aged about 67 years, residing at 8, Kennedy Close, Wootton Bridge, Ryde P033 4LY, Isle of Wight, United Kingdom, represented by his GPA holder **Miss. A.S. Nalini,** Daughter of Dr. A.T. Srinivasa Iyengar aged about 71 years, residing at 941, Shanthi Vilas, Second Main Road, Lakshmipuram, Mysuru-570004, (referred as "Owner"). The Owner has represented that he is the absolute owner of the Schedule Property having absolute, clear, marketable right, title and interest therein and that there are no other person/s having any right, claim over the Schedule Property apart from him. The Owner has further represented that he has not mortgaged, created a lien, encumbered the Schedule Property or part thereof in any manner and that the Owner has not entered into any agreement for Sale/MoU with any person/s regard to the Schedule Property. Any person/s having any objection or claims shall with documentary evidence lodge their objections/claims within **10 (ten) days** from the date of this notice to my office at situated at No.1063/71A, F-3A, 2nd Main, 8th Cross, Vidyaranyapuram, Mysore-570 008, failing which my client shall proceed with the above mentioned transaction, without any reference and regard to such purported claim, interest, which shall be deemed to waive off for all claims and purposes.

**SCHEDULE PROPERTY**

**ALL THAT PIECE AND PARCEL** of the property bearing Residential Apartment No. J-443, (PID No: 11-3-89-TF-J443), in Third Floor, of the project "Brigade Sparkle", having super built-up area of 1290 square feet (119.844870 Square Meters) which includes built up area of 1069 square feet and proportionate share in common areas such as passages, lobbies lifts, staircases and other areas of common use measuring 221 square feet, constructed on the property bearing Nos. 18/1 and 18/2, situated at Industrial Layout III Stage, Vishveshwara Nagara, Khille Mohalla (previously known as Industrial Suburb, III Stage, Mysore-South), Mysore with ceramic flooring along with 516/94960th undivided share, right, title and interest in the property equivalent to 701 square feet (65.125003 Square Meters) and one car parking space in the Basement and the Apartment is bounded on the:
East by: Open Space towards Road
West by: Apartment No. J-442 at Brigade Sparkle
North by: Open Space towards Private Property
South by: Lobby at Brigade Sparkle

**Sd/- Sri Laxmi Y S,** B.A., LL.B., (Hons.)
**Advocate**
**# 1063/71A, F-3A, 2nd Main, 8th Cross, Vidyaranypuram, Mysore-08. Mob : 97434 76614**

## ಮೈಸೂರು ಮಹಾನಗರಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು.

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್–8/ 488 /2025–26 ದಿನಾಂಕ: 28–07–2025

**ಟೆಂಡರ್ ಪ್ರಕಟಣೆ**

(ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಪಾಲಿಕೆ ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗೆ ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

| | | | | ಸಂಜೆ 4.30 ಗಂಟೆ ನಂತರ | ಬೆಳಿಗ್ಗೆ 11.00 ಗಂಟೆ | ಬೆಳಿಗ್ಗೆ 11.30 ಗಂಟೆ ನಂತರ |
|---|---|---|---|---|---|---|
| ಕ್ರ ಸಂ. | ವಿವರ | ಕಾಮಗಾರಿ ಸಂಖ್ಯೆ | ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ) | ಕೆ.ಪಿಪಿ ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ | ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ |
| 1 | Kw-1 & Kw-2 | 3 | 85.35 | 30.07.2025 | 08.08.2025 | 11.08.2025 |
| 2 | Kw-1 | 1 | 12.20 | 30.07.2025 | 13.08.2025 | 14.08.2025 |
| 3 | Kc-4 | 1 | 86.76 | 30.07.2025 | 13.08.2025 | 14.08.2025 |

**ವಿಶೇಷ ಸೂಚನೆ**: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು
ನೀಸ & ಒಚ (ಪೂರ್ವ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು